ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 5 ಸೋಮವಾರ 2024

ಸಂಪುಟ: 44 | ಸಂಚಿಕೆ: 288 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಾರ್ಚ್ ತಿಂಗಳ ಅಂತ್ಯದವರೆಗೂ ವಾರದ 7 ದಿನವೂ ಚೆನ್ನೈ–ಮೈಸೂರು ವಂದೇ ಭಾರತ್ ರೈಲು ಸಂಚಾರ

ಬೆಂಗಳೂರು, ಫೆ.4– ಮೈಸೂರು–ಚೆನ್ನೈ ನಡುವೆ ಸಂಚಾರ ನಡೆಸುವ ವಂದೇ ಭಾರತ್ ವಿಶೇಷ ರೈಲು ಮಾರ್ಚ್ ಅಂತ್ಯದವರೆಗೂ ವಾರದ ಎಲ್ಲಾ ದಿನಗಳಂದು ಓಡಲಿದೆ.



ಈ ಬಗ್ಗೆ ರೈಲ್ವೆ ಇಲಾಖೆ ಮಾಹಿತಿ ನೀಡಿದ್ದು, ಡಾ.ಎಂಜಿಆರ್ ಚೆನ್ನೈ ಸೆಂಟ್ರಲ್ ಮತ್ತು ಮೈಸೂರು ನಿಲ್ದಾಣಗಳ ನಡುವೆ ಸಂಚರಿಸುವ ಸಾಪ್ತಾಹಿಕ ವಂದೇ ಭಾರತ್ ವಿಶೇಷ ರೈಲುಗಳ ಸೇವೆಯನ್ನು ಮುಂದುವರಿಸಲು, ಅಸ್ತಿತ್ವದಲ್ಲಿರುವ ಟಿಕೆಟ್ ದರ, ಬೋಗಿಗಳ ಸಂಯೋಜನೆ, ನಿಲುಗಡೆಗಳು, ವೇಳಾಪಟ್ಟಿ ಮತ್ತು ಸೇವೆಗಳ ದಿನಗಳೊಂದಿಗೆ ಈ ವಿಶೇಷ ರೈಲುಗಳ ಕಾರ್ಯಾಚರಣೆಯನ್ನು 2024ರ ಮಾರ್ಚ್ 27ರವರೆಗೆ ವಿಸ್ತರಿಸಲಾಗುತ್ತಿದೆ ಎಂದು ದಕ್ಷಿಣ ರೈಲ್ವೆ ವಲಯವು ಸೂಚಿಸಿದೆ

ರೈಲು ಸಂಖ್ಯೆ 06037 ಡಾ.ಎಂಜಿಆರ್ ಚೆನ್ನೈ ಸೆಂಟ್ರಲ್–ಮೈಸೂರು ವಂದೇ ಭಾರತ್ ಸಾಪ್ತಾಹಿಕ ವಿಶೇಷ ಎಕ್ಸ್‌ಪ್ರೆಸ್ ರೈಲು ಫೆಬ್ರವರಿ 7ರಿಂದ ಮಾರ್ಚ್ 27, 2024ರವರೆಗೆ ಪ್ರತಿ ಬುಧವಾರ (8 ಟ್ರಿಪ್) ಸಂಚರಿಸಲಿದೆ. ಈ ಮೊದಲು ಜನವರಿ 31, 2024 ರವರೆಗೆ ಸಂಚರಿಸಲು ಸೂಚಿಸಲಾಗಿತ್ತು. ರೈಲು ಸಂಖ್ಯೆ 06038 ಮೈಸೂರು–ಡಾ.ಎಂಜಿಆರ್ ಚೆನ್ನೈ ಸೆಂಟ್ರಲ್ ವಂದೇ ಭಾರತ್ ಸಾಪ್ತಾಹಿಕ ವಿಶೇಷ ಎಕ್ಸ್‌ಪ್ರೆಸ್ ರೈಲು ಫೆ.7ರಿಂದ ಮಾರ್ಚ್ 27, 2024 ರವರೆಗೆ ಪ್ರತಿ ಬುಧವಾರ (8 ಟ್ರಿಪ್) ಸಂಚರಿಸಲಿದೆ. ಈ ಮೊದಲು ಜನವರಿ 31, 2024 ರವರೆಗೆ ಸಂಚರಿಸಲು ಸೂಚಿಸಲಾಗಿತ್ತು.

ಚೆನ್ನೈ–ಮೈಸೂರು ಹೈಸ್ಪೀಡ್ ರೈಲು ವೇಗ ಹೆಚ್ಚಳ ಪರಿಶೀಲನೆ: ಬೆಂಗಳೂರು ದಕ್ಷಿಣ ರೈಲ್ವೆಯು ಚೆನ್ನೈ–ಬೆಂಗಳೂರು–ಮೈಸೂರು ಮಾರ್ಗದಲ್ಲಿ ಗಂಟೆಗೆ 200 ಕಿ.ಮೀ ವೇಗದಲ್ಲಿ ಸಂಚರಿಸುವ ಹೈಸ್ಪೀಡ್ ರೈಲುಗಳನ್ನು ಕಾರ್ಯಾಚರಣೆಗೊಳಿಸುವ ಸಂಬಂಧ ಸಾಧಕ–ಬಾಧಕಗಳನ್ನು ಪರಿಶೀಲಿಸುತ್ತಿದೆ ಎಂದು ಪ್ರಧಾನ ವ್ಯವಸ್ಥಾಪಕ ಆರ್.ಎನ್.ಸಿಂಗ್ ಹೇಳಿದ್ದಾರೆ. ಚೆನ್ನೈ–ಬೆಂಗಳೂರು–ಮೈಸೂರು ಮಾರ್ಗದಲ್ಲಿ ಸೆಮಿ–ಹೈಸ್ಪೀಡ್ ರೈಲುಗಳನ್ನು ಕಾರ್ಯಾಚರಣೆಗೊಳಿಸಲು ಚಿಂತಿಸಲಾಗಿದೆ. ಈ ರೈಲುಗಳು ಗಂಟೆಗೆ 200 ಕಿ.ಮೀ. ವೇಗದಲ್ಲಿ ಚಲಿಸುತ್ತವೆ. ಇನ್ನು ಹೈಸ್ಪೀಡ್ ಲೈನ್ ಅನ್ನು ರೈಲ್ವೆಗೆ ಜೋಡಿಸಲು ಸಮೀಕ್ಷೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಸದ್ಯ ಇರುವ ಟ್ರ್ಯಾಕ್ ಅನ್ನು ಬಲಪಡಿಸುವ ಮೂಲಕ ಹೈಸ್ಪೀಡ್ ರೈಲನ್ನು ಕಾರ್ಯಾಚರಣೆಗೊಳಿಸಲು ಸಾಧ್ಯವಿದೆ. ಕೆಲವೆಡೆ ಹೊಸ ಹಳಿಗಳನ್ನು ಹಾಕಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ಏಕರೂಪ ನಾಗರಿಕ ಸಂಹಿತೆ ಕರಡಿಗೆ ಉತ್ತರಾಖಂಡ ಸಂಪುಟ ಒಪ್ಪಿಗೆ

ಯುಸಿಸಿ ಜಾರಿಗೊಳಿಸಿದ ಪ್ರಥಮ ರಾಜ್ಯದ ಹಿರಿಮೆ



ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ದೇಸಾಯಿ ನೇತೃತ್ವದ ಸಮಿತಿ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರಿಗೆ ವರದಿ ಸಲ್ಲಿಸಿದ ಸಂದರ್ಭ.

ಕರಡಿನ ಪ್ರಮುಖ ಅಂಶಗಳು

- ಹುಡುಗಿಯರ ಮದುವೆ ವಯಸ್ಸು 18 ವರ್ಷ ಮತ್ತು ಹುಡುಗರ ಮದುವೆ ವಯಸ್ಸು 21 ವರ್ಷ.
- ಮದುವೆ ನೋಂದಣಿ ಕಡ್ಡಾಯ
- ವಿಚ್ಛೇದನಕ್ಕೆ ಪತಿ ಮತ್ತು ಪತ್ನಿ ಇಬ್ಬರೂ ಸಮಾನ ಕಾರಣಗಳು ಮತ್ತು ಆಧಾರಗಳನ್ನು ಹೊಂದಿರುತ್ತಾರೆ. ಪತಿಗೆ ಅನ್ವಯವಾಗುವ ವಿಚ್ಛೇದನದ ಆಧಾರವೇ ಪತ್ನಿಗೂ ಅನ್ವಯ
- ಒಬ್ಬ ಹೆಂಡತಿ ಜೀವಂತವಾಗಿರುವವರೆಗೆ ಎರಡನೇ ಮದುವೆ ಸಾಧ್ಯವಿಲ್ಲ. ಅಂದರೆ ಅಥವಾ ಬಹುಪತ್ನಿತ್ವ ನಿಷೇಧ.
- ಹೆಣ್ಣು ಮಕ್ಕಳು ಗಂಡು ಮಕ್ಕಳಂತೆ ಪಿತ್ರಾರ್ಜಿತವಾಗಿ ಸಮಾನ ಹಕ್ಕುಗಳನ್ನು ಹೊಂದಿರುತ್ತಾರೆ.
- ಲಿವ್ ಇನ್ ರಿಲೇಶನ್‌ಶಿಪ್ ಘೋಷಣೆ ಅಗತ್ಯ ಇದು ಸ್ವಯಂಘೋಷಣೆಯಂತಿರುತ್ತದೆ.
- ಪರಿಶಿಷ್ಟ ಪಂಗಡದವರನ್ನು ಈ ಪರಿಧಿಯ ಹೊರಗೆ ಇಡಲಾಗಿದೆ.

ಡೆಹ್ರಾಡೂನ್,ಫೆ.4–ಏಕರೂಪ ನಾಗರಿಕ ಸಂಹಿತೆ ಜಾರಿಗೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ನೇತೃತ್ವದ ಸಂಪುಟ ಒಪ್ಪಿಗೆ ನೀಡಿದೆ.

ನಿನ್ನೆ (ಫೆ.3) ನಡೆದ ಸಂಪುಟದಲ್ಲಿ ಜಾರಿಗೆ ಸರ್ವಸಮ್ಮತಿ ಸಿಕ್ಕಿರಲಿಲ್ಲ. ಹೀಗಾಗಿ ಮುಖ್ಯಮಂತ್ರಿ ಧಾಮಿ ಇಂದು (ಭಾನುವಾರ) ವಿಶೇಷ ಸಂಪುಟ ಸಭೆ ಕರೆದಿದ್ದರು. ಸಭೆಯಲ್ಲಿ ಯುಸಿಸಿ ಜಾರಿಗೆ ಸಚಿವರು ಸರ್ವಾನುಮತಕ್ಕೆ ಬಂದಿದ್ದಾರೆ. ನಾಳೆ (ಫೆ.5) ಆರಂಭವಾಗಲಿರುವ ವಿಧಾನಸಭೆ ವಿಶೇಷ ಅಧಿವೇಶನದಲ್ಲಿ ಯುಸಿಸಿಯನ್ನು ಮಂಡಿಸಲು ಸರ್ಕಾರ ಸರ್ವ ಸನ್ನದ್ಧವಾಗಿದೆ. ಒಂದು ವೇಳೆ ಅಧಿವೇಶನದಲ್ಲಿ ವಿಧೇಯಕ ಅಂಗೀಕಾರಗೊಂಡಲ್ಲಿ, ಯುಸಿಸಿ ಜಾರಿಗೊಳಿಸಿದ ದೇಶದ ಮೊದಲ ರಾಜ್ಯವಾಗಿ ಉತ್ತರಾಖಂಡ ಹೊರಹೊಮ್ಮಲಿದೆ.

ವರದಿ ಸಿದ್ಧಪಡಿಸಲು ಸಮಿತಿ ರಚನೆ: ಯುಸಿಸಿ ವರದಿ ಸಿದ್ಧಪಡಿಸಲು ಉತ್ತರಾಖಂಡ ಸರ್ಕಾರ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ನೇತೃತ್ವದ ಸಮಿತಿ ರಚಿಸಿತ್ತು. ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ದೇಸಾಯಿ ಸೇರಿದಂತೆ ಐವರು ಸದಸ್ಯರನ್ನು ಒಳಗೊಂಡಿದ್ದ ಸಮಿತಿ ಶನಿವಾರ ಬೆಳಿಗ್ಗೆ 11 ಗಂಟೆಗೆ ಮುಖ್ಯಮಂತ್ರಿಗಳ ಅಧಿಕೃತ ನಿವಾಸಕ್ಕೆ ಭೇಟಿ ನೀಡಿ ವರದಿಯನ್ನು ಸಲ್ಲಿಕೆ ಮಾಡಿತ್ತು.

ಸಮಿತಿಯು 60 ಸಭೆಗಳಲ್ಲಿ 60 ಸಾವಿರಕ್ಕೂ ಹೆಚ್ಚು ಜನರನ್ನು ಭೇಟಿ ಮಾಡಿ ಚರ್ಚೆ ನಡೆಸಿ, 2.33 ಲಕ್ಷ ಸಲಹೆಗಳನ್ನು ಸ್ವೀಕರಿಸಿತ್ತು. ಇವುಗಳನ್ನು ಆಧರಿಸಿ ಕರಡು ಸಿದ್ಧಪಡಿಸಿ 749 ಪುಟಗಳ ಯುಸಿಸಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ವಿಧಾನಸಭೆ ಚುನಾವಣೆ ವೇಳೆ ಬಿಜೆಪಿ ರಾಜ್ಯದ ಜನರಿಗೆ ಯುಸಿಸಿ ಜಾರಿ ಮಾಡುವ ಭರವಸೆ ನೀಡಿತ್ತು. ಇದೀಗ ಯುಸಿಸಿ ಜಾರಿಗೆ ಸಂಪುಟ ಒಪ್ಪಿಗೆ ನೀಡಿದ್ದು, ಕನಸು ನನಸಾಗುವ ಸಮಯ ಹತ್ತಿರ ಬಂದಿದೆ. ಒಂದು ವೇಳೆ ಯುಸಿಸಿ ಜಾರಿಯಾದರೇ ಪ್ರಧಾನಿ ನರೇಂದ್ರ ಮೋದಿ ಅವರ ಏಕ ಭಾರತ–ಶ್ರೇಷ್ಠ ಭಾರತ ಕನಸನ್ನು ಉತ್ತರಾಖಂಡ ಸರ್ಕಾರ ನನಸಾಗಿಸಲಿದೆ.

ಏನಿದು ಏಕರೂಪ ನಾಗರಿಕ ಸಂಹಿತೆ: ಏಕರೂಪ ನಾಗರಿಕ ಸಂಹಿತೆ ಎಂದರೆ ಇಡೀ ದೇಶದಲ್ಲಿ ಪ್ರತಿಯೊಂದು ಧರ್ಮ, ಜಾತಿ, ಪಂಗಡ, ವರ್ಗಕ್ಕೆ ಒಂದೇ ನಿಯಮವಿರುವುದು. ಏಕರೂಪ ನಾಗರಿಕ ಸಂಹಿತೆಯು ಜಾತ್ಯತೀತ ಕಾನೂನಾಗಿದ್ದು, ಅದರ ಅನುಷ್ಠಾನವಾದರೆ ಬೇರೆಲ್ಲಾ ಧರ್ಮಗಳ ವೈಯಕ್ತಿಕ ಕಾನೂನುಗಳು ಅಂತ್ಯಗೊಳ್ಳುತ್ತವೆ. ಇದೀಗ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಪಾರ್ಸಿ ಸಮುದಾಯಗಳು ವಿಭಿನ್ನ ●8ನೇ ಪುಟಕ್ಕೆ

ಓಲಾ, ಉಬರ್ ಸೇರಿದಂತೆ ಟ್ಯಾಕ್ಸಿಗಳಿಗೆ

ಏಕರೂಪದ ಪ್ರಯಾಣ ದರ

ಬೆಂಗಳೂರು, ಫೆ.4–ಸಿಟಿ ಟ್ಯಾಕ್ಸಿಗಳು ಮತ್ತು ಆ್ಯಪ್ ಆಧಾರಿತ ಟ್ಯಾಕ್ಸಿಗಳು ಹವಾಮಾನದ ವ್ಯತ್ಯಾಸ ಮತ್ತು ಜನದಟ್ಟಣೆಗೆ ಅನುಗುಣವಾಗಿ ಪ್ರಯಾಣ ದರ ಏರಿಕೆ, ಇಳಿಕೆ ಮಾಡುತ್ತಿರುವುದನ್ನು ತಪ್ಪಿಸಲು ಏಕರೂಪದ ದರ ನಿಗದಿಪಡಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಓಲಾ, ಉಬರ್ ಸಹಿತ ಎಲ್ಲ ಟ್ಯಾಕ್ಸಿಗಳಿಗೆ ಈ ನಿಯಮ ಅನ್ವಯ ಆಗಲಿದೆ.



ಮಳೆ ಬಂದಾಗ ದರ ಹೆಚ್ಚಳ ಮಾಡುವುದು, ಜನರು ಕಚೇರಿಗೆ, ಕೆಲಸಕ್ಕೆ ತೆರಳುವ ಸಮಯದಲ್ಲಿ ದರ ಹೆಚ್ಚಿಸುವುದು, ಜನದಟ್ಟಣೆ ಕಡಿಮೆ ಇರುವ ಸಮಯದಲ್ಲಿ ಟ್ಯಾಕ್ಸಿ ಪ್ರಯಾಣ ದರ ಇಳಿಕೆ ಮಾಡಲಾಗುತ್ತಿತ್ತು. ಈ ಬಗ್ಗೆ ಅನೇಕ ದೂರುಗಳು ಬಂದಿದ್ದವು. ಅದನ್ನು ತಪ್ಪಿಸುವುದಕ್ಕಾಗಿ ಏಕರೂಪ ದರ ನಿಗದಿ ಮಾಡಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಇಲ್ಲಿವರೆಗೆ ಸಿಟಿ ಟ್ಯಾಕ್ಸಿಗಳ ಪ್ರಯಾಣ ದರ ಮತ್ತು ಅಗ್ರಿಗೇಟರ್ ಟ್ಯಾಕ್ಸಿಗಳ ದರ ಬೇರೆ ಬೇರೆಯಾಗಿದ್ದವು. ಶನಿವಾರ (ಫೆ.3) ಹೊರಡಿಸಿರುವ ಅಧಿಸೂಚನೆ ಪ್ರಕಾರ ದರಗಳನ್ನು ಒಂದೇ ಮಾದರಿಯಲ್ಲಿ ನಿಗದಿಪಡಿಸಲಾಗಿದೆ. ಏಕರೂಪ ಮತ್ತು ಪರಿಷ್ಕೃತ ದರಗಳು ತಕ್ಷಣದಿಂದಲೇ ರಾಜ್ಯದಲ್ಲಿ (ಬೆಂಗಳೂರು ನಗರ ಒಳಗೊಂಡಂತೆ) ಅನ್ವಯವಾಗಲಿದೆ.

ಅಧಿಸೂಚನೆಯಲ್ಲಿ ಏನಿದೆ?

ವಾಹನಗಳ ಮೌಲ್ಯಗಳನ್ನು ಆಧರಿಸಿ ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ. ಈ ವಿಭಾಗಗಳಿಗೆ ನಿಗದಿತ ದರ ನಿಗದಿ ಮಾಡಲಾಗಿದೆ. ವೈಯಕ್ತಿಕ ಲಗೇಜ್ ದರವು 120 ಕೆ.ಜಿ. ವರೆಗೆ ಉಚಿತವಾಗಿದೆ. ನಂತರದ ಪ್ರತಿ 30 ಕಿಲೋಗ್ರಾಂವರೆಗೆ 7 ರೂ. ನಿಗದಿ ಮಾಡಲಾಗಿದೆ. ಕಾಯುವಿಕೆ ದರವು ಮೊದಲ 5 ನಿಮಿಷಗಳವರೆಗೆ ಉಚಿತವಾಗಿದ್ದು, ಬಳಿಕದ ಪ್ರತಿ ನಿಮಿಷಕ್ಕೆ 1 ರೂ. ನೀಡಬೇಕಾಗುತ್ತದೆ. ರಾತ್ರಿ 12ರಿಂದ ಬೆಳಿಗ್ಗೆ 6ರವರೆಗೆ ಸಂಚರಿಸುವ ಟ್ಯಾಕ್ಸಿಗಳಿಗೆ ಶೇ.10ರಷ್ಟು ಹೆಚ್ಚುವರಿ ದರ ನಿಗದಿ ಮಾಡಲಾಗಿದೆ.

ನಗರ ಟ್ಯಾಕ್ಸಿಯವರು, ಅಗ್ರಿಗೇಟರ್‌ಗಳು ಜಿಎಸ್‌ಟಿ ಮತ್ತು ಟೋಲ್ ಶುಲ್ಕವನ್ನು ಪ್ರಯಾಣಿಕರಿಂದ ವಸೂಲಿ ಮಾಡಬಹುದು. ಸಮಯಕ್ಕೆ ಅನುಗುಣವಾಗಿ ಏರಿಕೆ ಮಾಡದೆ, ಕಿಲೋಮೀಟರ್ ಆಧಾರದಲ್ಲಿ ನಿಗದಿಪಡಿಸಿರುವ ದರಗಳನ್ನು ಮಾತ್ರ ವಸೂಲಿ ಮಾಡಬೇಕು. ಅನಧಿಕೃತವಾಗಿ ಯಾವುದೇ ದರಗಳನ್ನು ಪ್ರಯಾಣಿಕರಿಂದ ಪಡೆಯಬಾರದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಬಿಜೆಪಿ–ಜೆಡಿಎಸ್ ಮೈತ್ರಿಗೆ ಮೂಡದ ಒಮ್ಮತ

ಮಂಡ್ಯ ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಜೆಡಿಎಸ್ ವಿರುದ್ಧ ಕಿಡಿಕಾರಿದ ಮಾಜಿ ಶಾಸಕ ಪ್ರೀತಂಗೌಡ

● ಮಕ್ಕಳಾಯ್ತು, ಮೊಮ್ಮಕ್ಕಳು ಆಯ್ತು, ಈಗ ಮರಿ ಮಕ್ಕಳ ಸರದಿ ನೋಡಬೇಕಾ ● ಮಂಡ್ಯ ಲೋಕಸಭಾ ಕ್ಷೇತ್ರ ಬಿಜೆಪಿಗೆ ಬಿಟ್ಟು ಕೊಡಬೇಕು ● ಮೈತ್ರಿ ಮಾತ್ರ ಆಗಿದೆ, ಯಾರಿಗೆ ಯಾವ ಕ್ಷೇತ್ರ ಎಂದು ನಿರ್ಧಾರವಾಗಿಲ್ಲ ● ಜೆಡಿಎಸ್‌ಗೆ ಕ್ಷೇತ್ರ ಬಿಟ್ಟುಕೊಟ್ಟರೆ ಅಭ್ಯರ್ಥಿ ಆಯ್ಕೆಗೆ ಬಿಜೆಪಿ ಒಪ್ಪಿಗೆ ಪಡೆಯಬೇಕು



ಪಾಂಡವಪುರದಲ್ಲಿ ಭಾನುವಾರ ನಡೆದ ಮಂಡ್ಯ ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯನ್ನು ಮಾಜಿ ಶಾಸಕರಾದ ಎಸ್.ಎ.ರಾಮದಾಸ್, ಪ್ರೀತಂಗೌಡ, ಇನ್ನಿತರ ಮುಖಂಡರು ಉದ್ಘಾಟಿಸಿದರು.

ಪಾಂಡವಪುರ, ಫೆ.4– ಹೈಕಮಾಂಡ್ ಮಟ್ಟದಲ್ಲಿ ಬಿಜೆಪಿ– ಜೆಡಿಎಸ್ ಮೈತ್ರಿಯಾಗಿದ್ದರೂ ಸ್ಥಳೀಯ ಮಟ್ಟದಲ್ಲಿ ಮುಖಂಡರ ನಡುವೆ ಇನ್ನು ಒಮ್ಮತ ಮೂಡಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದ್ದು, ಭಾನುವಾರ ಪಾಂಡವಪುರದಲ್ಲಿ ನಡೆದ ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಇದು ಸ್ಫೋಟಗೊಂಡಿದೆ.

ರಾಜ್ಯ ಬಿಜೆಪಿ ಉಪಾಧ್ಯಕ್ಷರೂ ಆದ ಮಾಜಿ ಶಾಸಕ ಪ್ರೀತಂಗೌಡ ಮೈತ್ರಿ ಪಕ್ಷದ ವಿರುದ್ಧವೇ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅವರಾಯ್ತು, ಅವರ ಮಕ್ಕಳಾಯ್ತು, ಮೊಮ್ಮಕ್ಕಳು ಆಯ್ತು, ಇದೀಗ ಮರಿ ಮಕ್ಕಳ ಸರದಿಯನ್ನು ನೋಡಬೇಕಾ? ಎಂದು ಜೆಡಿಎಸ್ ವಿರುದ್ಧ ಪಕ್ಷದ ವೇದಿಕೆ ಕಾರ್ಯಕ್ರಮದಲ್ಲೇ ಗುಡುಗಿದ್ದಾರೆ.

ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್ ನೆಂಟಸ್ಥಿಕೆ ರಾಜಕಾರಣವನ್ನು ಬಿಡಬೇಕು. ದೇವೇಗೌಡರಿಗೆ ಮಂಡ್ಯದಲ್ಲೂ ನೆಂಟರಿದ್ದಾರೆ, ಹಾಸನದಲ್ಲೂ ನೆಂಟರು ಇರುತ್ತಾರೆ. ನಮ್ಮ ●8ನೇ ಪುಟಕ್ಕೆ

ಹಳ್ಳಕ್ಕೆ ಕಾರು ಉರುಳಿ ಮೂವರು ಯುವಕರ ಸಾವು



ಕೆ.ಆರ್.ಪೇಟೆಯ ಅಕ್ಕಿಹೆಬ್ಬಾಳು ಸೇತುವೆ ಬಳಿ ದುರಂತ



ಪವನ್ | ಅನಿಕೇತನ | ಚಿರಂಜೀವಿ

ಕೆ.ಆರ್.ಪೇಟೆ,ಫೆ.4– ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿ ಬಿದ್ದ ಪರಿಣಾಮ ಮೂವರು ಸ್ಥಳದಲ್ಲಿಯೇ ಸಾವನ್ನಪ್ಪಿ, ಮತ್ತೊಬ್ಬ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಅಕ್ಕಿಹೆಬ್ಬಾಳು ಸೇತುವೆಯ ಬಳಿ ಶನಿವಾರ ರಾತ್ರಿ ಸಂಭವಿಸಿದೆ.

ಕೆ.ಆರ್.ಪೇಟೆ ಪಟ್ಟಣದ ಅಗ್ರಹಾರ ಬಡಾವಣೆಯ ನಿವಾಸಿ ಅಶೋಕ್‌ಕುಮಾರ್ ಅವರ ಪುತ್ರ ಚಿರಂಜೀವಿ (21), ಬಸವೇಶ್ವರನಗರದ ಭಗವಾನ್ ಕಾಫೀ ವರ್ಕ್ಸ್ ಮಾಲೀಕ ಚೇತನ್ ಅವರ ಪುತ್ರ ಅನಿಕೇತನ(21) ಹಾಗೂ ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆ ಗ್ರಾಮದ ಸೋಮಶೇಖರ್ ಅವರ ಮಗ ಪವನ್(20) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ತೀವ್ರವಾಗಿ ಗಾಯಗೊಂಡಿರುವ ಪಟ್ಟಣದ ವಿಜಯಕುಮಾರ್ ಅವರ ಪುತ್ರ ಸಾಗರ್ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಘಟನೆ ವಿವರ: ಒಂದೇ ಕಾಲೇಜಿನಲ್ಲಿ ಓದುತ್ತಿದ್ದ ನಾಲ್ವರು ಯುವಕರು ರಜೆಯ ಕಾರಣ ಊರಿಗೆ ಬಂದಿದ್ದರು.

■ ಮತ್ತೊಬ್ಬನಿಗೆ ತೀವ್ರ ಗಾಯ, ಆಸ್ಪತ್ರೆಗೆ ದಾಖಲು

ಕೆಲಸದ ನಿಮಿತ್ತ ಭೇರ್ಯ ಕಡೆಗೆ ಹೋಂಡಾ ಸಿಟಿ ಕಾರಿನಲ್ಲಿ ಹೋಗುತ್ತಿದ್ದಾಗ, ನೂತನವಾಗಿ ನಿರ್ಮಿಸುತ್ತಿರುವ ಜಲಸೂರು–ಬೆಂಗಳೂರು ಹೆದ್ದಾರಿಯಲ್ಲಿ ತಿರುವಿನಲ್ಲಿ ರಸ್ತೆ ತಮತಟ್ಟು ಇಲ್ಲದ ಕಾರಣ ಹೋಂಡಾ ಸಿಟಿ ಕಾರು ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಮಗುಚಿ ಬಿದ್ದಿದೆ. ಇದರಿಂದ ಕಾರು ಸಂಪೂರ್ಣ ಜಖಂಗೊಂಡು ಚಿರಂಜೀವಿ, ಪವನ್, ಅನಿಕೇತನ ●8ನೇ ಪುಟಕ್ಕೆ

ಮೈಸೂರು–ಬೆಂಗಳೂರು ಚತುಷ್ಪಥ ರೈಲ್ವೆ ಯೋಜನೆ ಸಮೀಕ್ಷೆ ಪ್ರಕ್ರಿಯೆ ಆರಂಭ

ರೈಲ್ವೆ ಮಂಡಳಿಯಿಂದ 5.48 ಕೋಟಿ ಬಿಡುಗಡೆ

■ ಮತ್ತೆರಡು ಹಳಿ ನಿರ್ಮಾಣದಲ್ಲಿ ತಿರುವು ಮುಕ್ತ ■ ಹೆಚ್ಚಿನ ಭೂಮಿ ಅವಶ್ಯ ■ ರೈಲು ಸಂಚಾರಕ್ಕೆ ಮತ್ತಷ್ಟು ವೇಗ ■ ಪ್ರಯಾಣದ ಸಮಯ ಉಳಿತಾಯ

ಮೈಸೂರು, ಫೆ.4(ಬಿಎಲ್‌ಯು)–ಮೈಸೂರು ಬೆಂಗಳೂರು ನಡುವೆ ಚತುಷ್ಪಥ ರೈಲ್ವೆ ಹಳಿ ನಿರ್ಮಾಣ ಮಾಡಲು ಸಮೀಕ್ಷೆಗಾಗಿ ರೈಲ್ವೆ ಮಂಡಳಿ 5.48 ಕೋಟಿ ರೂ. ಬಿಡುಗಡೆ ಮಾಡಿದ್ದು, ಸರ್ವೆ ಪ್ರಕ್ರಿಯೆ ಆರಂಭವಾಗಿದೆ. ಮತ್ತೆರಡು ರೈಲ್ವೆ ಹಳಿ ನಿರ್ಮಾಣ ಮಾಡುತ್ತಿರುವ ಮಾರ್ಗದಲ್ಲಿ ತಿರುವು ಮುಕ್ತ ಮಾಡುವುದರಿಂದ ಮೈಸೂರು–ಬೆಂಗಳೂರು ನಡುವೆ ರೈಲು ಸಂಚಾರ ಮತ್ತಷ್ಟು ವೇಗ ಪಡೆಯಲಿದ್ದು, ಪ್ರಯಾಣದ ಸಮಯ ಕೂಡ ಉಳಿತಾಯವಾಗಲಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಭಾನುವಾರ ನಡೆದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳ ಸಭೆ ನಂತರ ಪತ್ರಕರ್ತರಿಗೆ ಈ ಬಗ್ಗೆ ವಿವರ ನೀಡಿದ ಸಂಸದ ಪ್ರತಾಪ್ ಸಿಂಹ, ಅಂತಿಮ ಹಂತದ ಸ್ಥಳ ಸಮೀಕ್ಷೆಗಾಗಿ ರೈಲ್ವೆ ಮಂಡಳಿ ಅನುಮೋದನೆ ನೀಡಿ, ಸರ್ವೆಗಾಗಿ ಹಣ ಕೂಡ ನೀಡಿದೆ ಎಂದು ತಿಳಿಸಿದರು.

ಮೈಸೂರು–ಬೆಂಗಳೂರು ನಡುವೆ 139 ಕಿಲೋ ಮೀಟರ್ ಅಂತರವಿದ್ದು, ಈಗ 132ಕ್ಕೂ ಹೆಚ್ಚು ತಿರುವುಗಳಿವೆ. ಇದರಿಂದ ಈಗ ರೈಲು ಸಂಚಾರದ ವೇಗ ಕಡಿಮೆಯಾಗಿದೆ. ಜೊತೆಗೆ ●8ನೇ ಪುಟಕ್ಕೆ





ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಭಾನುವಾರ ಸಂಸದ ಪ್ರತಾಪ್ ಸಿಂಹ ಹಲವು ಯೋಜನೆಗಳ ಕುರಿತಂತೆ ಅಧಿಕಾರಿಗಳ ಸಭೆ ನಡೆಸಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಇತರೆ ಅಧಿಕಾರಿಗಳನ್ನು ಕಾಣಬಹುದು.

ನಿಲಂಬೂರು ಹಾಗೂ ನಂಜನಗೂಡು ರೈಲು ಯೋಜನೆಗೆ ತೀವ್ರ ವಿರೋಧ

ಕೇರಳದ ವೈಯನಾಡ್ ಮೂಲಕ ನಿಲಂಬೂರು ಹಾಗೂ ಮೈಸೂರಿನ ನಂಜನಗೂಡು ನಡುವೆ ರೈಲು ಸಂಪರ್ಕ ಕಲ್ಪಿಸುವ ಯೋಜನೆಗೆ ನನ್ನ ತೀವ್ರ ವಿರೋಧವಿದೆ ಎಂದು ಸಂಸದ ಪ್ರತಾಪ್ ಸಿಂಹ ಈ ವೇಳೆ ಸ್ಪಷ್ಟಪಡಿಸಿದರು.

ಈ ಯೋಜನೆಗೆ ಅಂತಿಮ ವರದಿ ಸಲ್ಲಿಸುವ ವೈಮಾನಿಕ ಸಮೀಕ್ಷೆಗಾಗಿ ಕರ್ನಾಟಕ ಸರ್ಕಾರ ಕೂಡ ಸಮ್ಮತಿ ಸೂಚಿಸಿದೆ. ಆದರೆ ಇದರಿಂದ ಕರ್ನಾಟಕಕ್ಕೆ ಯಾವುದೇ ಪ್ರಯೋಜನವಿಲ್ಲ. ಆದ ಕಾರಣ ಈ ಯೋಜನೆಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ ಎಂದರು. ವೈಯನಾಡ್ ಮೂಲಕ ಸಂಪರ್ಕ ಕಲ್ಪಿಸುವ ನಿಲಂಬೂರ್ ಹಾಗೂ ನಂಜನಗೂಡು ರೈಲು ಮಾರ್ಗ ನಾಗರಹೊಳೆ ಹಾಗೂ ಬಂಡಿಪುರ ಅಭಯಾರಣ್ಯದ ಮಧ್ಯೆ ಹಾದು ಹೋಗಬೇಕಾಗಿದೆ. ಈ ಕಾರಣದಿಂದ ಪರಿಸರ ಇಲಾಖೆಯಿಂದ ಇದಕ್ಕೆ ಅನುಮತಿ ದೊರೆಯುವುದು ಕಷ್ಟ ಎಂದು ಸಂಸದ ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಮೈಸೂರು–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ತಿಂಗಳಾಂತ್ಯಕ್ಕೆ ಆರಂಭ

ಮೈಸೂರು, ಫೆ.4–ಮೈಸೂರು–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ (ಎನ್‌ಹೆಚ್–275) ನಿರ್ಮಾಣ ಕಾಮಗಾರಿಯನ್ನು ಶತಾಯಗತಾಯ ಫೆಬ್ರವರಿ ತಿಂಗಳಾಂತ್ಯಕ್ಕೆ ಆರಂಭಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ಭರವಸೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅವರ ಉಪಸ್ಥಿತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಜ್ಯ ಸರ್ಕಾರದ ಭೂಸ್ವಾಧೀನ ಇಲಾಖೆ, ಪೊಲೀಸ್ ಸೇರಿದಂತೆ ಇತರೆ ಇಲಾಖಾ ಅಧಿಕಾರಿಗಳ ಸಭೆಯ ನಂತರ ಪ್ರತಾಪ್ ಸಿಂಹ ಈ ಬಗ್ಗೆ ವಿವರ ನೀಡಿದರು.

ಮೈಸೂರು–ಕುಶಾಲನಗರ ನಡುವಿನ ರಾಷ್ಟ್ರೀಯ ಹೆದ್ದಾರಿ ಯೋಜನೆಯ ಕಾಮಗಾರಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ಪಾಲಹಳ್ಳಿಯಿಂದ ಆರಂಭವಾಗಲಿದೆ. 92 ಕಿಲೋಮೀಟರ್ ಅಂತರದ ಈ ಯೋಜನೆಗೆ 4,130 ಕೋಟಿ ರೂಪಾಯಿ ವೆಚ್ಚವಾಗಲಿದ್ದು, ಇದರಲ್ಲಿ 1,100 ಕೋಟಿ ರೂಪಾಯಿಗಳನ್ನು ಭೂಸ್ವಾಧೀನ ಪರಿಹಾರಕ್ಕೆ ನೀಡಲಾಗುವುದು ಎಂದು ಹೇಳಿದರು.

ಒಟ್ಟು 547 ಹೆಕ್ಟೇರ್ ಭೂಮಿ ಅವಶ್ಯವಿದ್ದು, ಈಗಾಗಲೇ 290 ಹೆಕ್ಟೇರ್ ಭೂಮಿ ಸ್ವಾಧೀನಪಡಿಸಿಕೊಂಡು ಈಗಾಗಲೇ 177 ಕೋಟಿ ರೂಪಾಯಿಗಳನ್ನು ರೈತರಿಗೆ ಪರಿಹಾರವಾಗಿ ನೀಡಲಾಗಿದೆ. ಈ ಯೋಜನೆಯ ಮಾರ್ಗದಲ್ಲಿ 55 ಹೆಕ್ಟೇರ್ ಅರಣ್ಯ ಭೂಮಿ ಇದ್ದು, ಇದನ್ನು ಕೂಡ ಸ್ವಾಧೀನಪಡಿಸಿಕೊಳ್ಳಲು ಸರ್ಕಾರದ ಮಟ್ಟದಲ್ಲಿ ಪ್ರಕ್ರಿಯೆಗಳು ಚಾಲನೆಯಲ್ಲಿವೆ ಎಂದು ಪ್ರತಾಪ್ ಸಿಂಹ ಅಂಕಿ ಅಂಶಗಳ ವಿವರ ನೀಡಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಭೂಮಿ ಸ್ವಾಧೀನದಲ್ಲಿ ಪರಿಹಾರದ ಹಣ ನಿಗದಿ ಮಾಡುವ ವೇಳೆ ತಾರತಮ್ಯ ಅನುಸರಿಸಲಾಗಿದೆ ಎಂದು ರೈತರು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಒಬ್ಬ ರೈತನಿಗೆ 1 ಎಕರೆಗೆ 26 ಲಕ್ಷ ರೂ. ಪರಿಹಾರ ನೀಡಿ, ಪಕ್ಕದ ಜಮೀನಿನ ರೈತನಿಗೆ 7 ಲಕ್ಷ ರೂ. ಪರಿಹಾರ ನೀಡಲಾಗುತ್ತಿದೆ ಎಂದು ರೈತರು ●8ನೇ ಪುಟಕ್ಕೆ

ನಾರಾಯಣ ಆಸ್ಪತ್ರೆಯಿಂದ ಕ್ಯಾನ್ಸರ್ ಜಾಗೃತಿ ಅಭಿಯಾನ



ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಮೈಸೂರಿನ ನಾರಾಯಣ ಆಸ್ಪತ್ರೆಯು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಅಭಿಯಾನ ಏರ್ಪಡಿಸಿತ್ತು.

ಮೈಸೂರು, ಫೆ.4 – ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ, ಮೈಸೂರಿನ ನಾರಾಯಣ ಆಸ್ಪತ್ರೆಯು ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಹಲವಾರು ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.

ಲಯನ್ಸ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ ಜಾಗೃತಿ ವಾಕಥಾನ್ ಈ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ಲಯನ್ಸ್ ಕ್ಲಬ್‌ನ ಜಿಲ್ಲಾ ಗವರ್ನರ್ ವಿ.ಡಿ.ಜಿ ಲಯನ್ ಸುಬ್ರಹ್ಮಣ್ಯ ಮತ್ತು ನಾರಾಯಣ ಆಸ್ಪತ್ರೆಯಲ್ಲಿ ಸರ್ಜಿಕಲ್ ಗ್ಯಾಸ್ಟ್ರೋ ಆಂಕೊಲಾಜಿ ಸಲಹೆಗಾರರಾದ ಡಾ.ಲೋಕೇಶ್ ಎಚ್‌ಎಂ ರವರಿಂದ ಫ್ಲ್ಯಾಗ್‌ಆಫ್ ಮಾಡಲಾದ ವಾಕಥಾನ್, ಗೋಕುಲಂನ ಸೇವಾ ನಿಕೇತನ ಶಾಲೆಯಲ್ಲಿ ಪ್ರಾರಂಭವಾಯಿತು ಮತ್ತು ಐದು ಕಿಲೋಮೀಟರ್ ಮಾರ್ಗವನ್ನು ಕ್ರಮಿಸಿ, ಪ್ರಾರಂಭದ ಹಂತದಲ್ಲಿ ಪುನಃ ಸಮಾವೇಶಗೊಂಡಿತು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಯೂತ್ ಫಾರ್ ಸೇವಾ ಸಂಸ್ಥೆಯ ಸಹಯೋಗದಲ್ಲಿ ಮಕ್ಕಳಿಗಾಗಿ ಆಯೋಜಿಸಿದ್ದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ಸಮಾಜದ ನಾನಾ ಕ್ಷೇತ್ರಗಳ ಗಣ್ಯರು, ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವ ಅಭಿಯಾನಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದ ಮಹಾರಾಜರು, ಪದ್ಮಶ್ರೀ ಪುರಸ್ಕೃತೆ ವಿದುಷಿ ಜಯಲಕ್ಷ್ಮಿ ಕೆ.ಎಸ್, ಖ್ಯಾತ ನರರೋಗ ತಜ್ಞ ಡಾ.ಸುಶ್ರುತ್‌ಗೌಡ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ, ಅರೆಕಾಟೀ ಸಂಸ್ಥಾಪಕ ಶ್ರೀ ನಿವೇದನ್ ನಿಂಪೆ, ಯೂತ್ ಫಾರ್ ಸೇವಾ ಸಂಸ್ಥೆಯ ಮುಖ್ಯಸ್ಥ ಶ್ರೀ ಭಾಸ್ಕರ ಕೇಶವಮೂರ್ತಿ, ಫ್ಯಾಶನ್ ಡಿಸೈನರ್ ಜಯಂತಿ ಬಲ್ಲಾಳ್, ನಾರಾಯಣ ಆಸ್ಪತ್ರೆಯ ಆಂಕೊಲಾಜಿ ತಜ್ಞರಾದ ಡಾ.ಸುಹಾಸ್ ಕೆ.ಆರ್., ಡಾ.ಮೇಖಲಾ ಶ್ವೇತಾದ್ರಿ, ಡಾ.ಲೋಕೇಶ್ ಎಚ್.ಎಂ ಮತ್ತು ಡಾ.ವಿದ್ಯಾ ಜಾಗೃತಿ ಕಾರ್ಯಕ್ರಮ. ಕಾರ್ಯಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಕ್ಯಾನ್ಸರ್‌ನ ಬಗ್ಗೆ, ಅದರ ವಿರುದ್ಧ ಹೋರಾಡಲು ಮತ್ತು ಅದನ್ನು ತಡೆಗಟ್ಟುವ ಮುನ್ನೆಚ್ಚರಿಕೆಗಳ ಕುರಿತು ಕಿರುನಾಟಕವನ್ನು ಪ್ರದರ್ಶಿಸಲಾಯಿತು. ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲು ಭಾನುವಾರ ಆರಂಭವಾಗಿರುವ ಜಾಗೃತಿ ಕಿರು ನಾಟಕವನ್ನು ಮೈಸೂರಿನ ವಿವಿಧೆಡೆ ಪ್ರದರ್ಶಿಸಲಾಗುವುದು. ಇದು ಫೆಬ್ರವರಿ ತಿಂಗಳ ಪೂರ್ತಿ ನಡೆಯಲಿದೆ.

ಕಾಡ್ಗಿಚ್ಚು ತಡೆಗಾಗಿ ಬಂಡೀಪುರ ಅರಣ್ಯದಲ್ಲಿ 2876 ಕಿ.ಮೀ. ಫೈರ್‌ಲೈನ್ ನಿರ್ಮಾಣ





ಬಂಡೀಪುರ ಅರಣ್ಯ ಪ್ರದೇಶದ ಊಟಿ ರಸ್ತೆಯ ಸಮೀಪ ಸಿಬ್ಬಂದಿ ಫೈರ್‌ಲೈನ್ ಸುಡುತ್ತಿರುವುದನ್ನು ಬಂಡೀಪುರದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಪರಿಶೀಲಿಸುತ್ತಿರುವುದು.

ಮೈಸೂರು, ಫೆ.4(ಎಂಟಿವೈ)–ಬೇಸಿಗೆಯಲ್ಲಿ ಅರಣ್ಯ ಸಂಪತ್ತು ಸಂರಕ್ಷಣೆ ಮಾಡುವ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಗತ್ಯ ಕ್ರಮ ಕೈಗೊಂಡು, ದಿನದ 24 ಗಂಟೆಯೂ ಕಟ್ಟೆಚ್ಚರ ವಹಿಸಲಾಗಿದೆ ಎಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ತಿಳಿಸಿದ್ದಾರೆ.

ಬೇಸಿಗೆ ಸಮೀಪಿಸುತ್ತಿದ್ದು, ಈಗಾಗಲೇ ಬಿಸಿಲಿನ ಪ್ರಮಾಣ ತೀವ್ರಗೊಂಡಿದೆ. ಕಳೆದ 2 ವರ್ಷಗಳಿಂದ ಬಂಡೀಪುರದಲ್ಲಿ ಯಾವುದೇ ಕಾಡ್ಗಿಚ್ಚು ಪ್ರಕರಣ ದಾಖಲಾಗಿಲ್ಲ. ಈ ಬಾರಿಯೂ ಬಂಡೀಪುರ ಅರಣ್ಯವನ್ನು ಕಾಡ್ಗಿಚ್ಚಿನಿಂದ ರಕ್ಷಣೆ ಮಾಡುವುದಕ್ಕೆ ಸಿಬ್ಬಂದಿ ಪಣ ತೊಟ್ಟು ಶ್ರಮಿಸುತ್ತಿದ್ದಾರೆ. 13 ವಲಯಗಳಲ್ಲಿ ಸುಮಾರು 500 ಫೈರ್ ವಾಚರ್‌ಗಳು, ಇಲಾಖೆಯ 250ಕ್ಕೂ ಹೆಚ್ಚು ಸಿಬ್ಬಂದಿ ಅರಣ್ಯ ಸಂಪತ್ತು ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ಈಗಾಗಲೇ ಬಂಡೀಪುರ ಅರಣ್ಯದಲ್ಲಿ 2876 ಕಿ.ಮೀ. ಫೈರ್‌ಲೈನ್ ನಿರ್ಮಿಸಲಾಗಿದ್ದು, ಫೈರ್‌ಲೈನ್‌ಗಾಗಿ ತೆರವುಗೊಳಿಸಿದ್ದ ಲಂಟಾನಾ ಕಳೆಗಿಡವನ್ನು ಸುಡುವ ಪ್ರಕ್ರಿಯೆ ಪೂರ್ಣಗೊಂಡಿದೆ. ಕಾಡಂಚಿನ ಗ್ರಾಮಗಳಲ್ಲಿ ಈಗಾಗಲೇ ಬೀದಿ ನಾಟಕದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಗಿದ್ದು, ಬೆಂಕಿ ಪ್ರಕರಣ ತಡೆಗೆ ಅರಣ್ಯ ಇಲಾಖೆಯೊಂದಿಗೆ ಸಹಕಾರ ನೀಡುವಂತೆ ಮನವಿ ಮಾಡಿಕೊಳ್ಳಲಾಗಿದೆ. ಇದಕ್ಕೆ ಕಾಡಂಚಿನ ಗ್ರಾಮಸ್ಥರು ಹಾಗೂ ಹಾಡಿ ನಿವಾಸಿಗಳು 'ನಮ್ಮ ಬಂಡೀಪುರ' ರಕ್ಷಣೆಗೆ ಬದ್ಧವಾಗಿದ್ದು, ಇಲಾಖೆಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಅಗ್ನಿಶಾಮಕ ಇಲಾಖೆಯಿಂದ ಬೆಂಕಿ ನಂದಿಸುವ ವಾಹನಗಳನ್ನು ಕಾಡ್ಗಿಚ್ಚು ನಿಯಂತ್ರಕ್ಕೆ ಬಳಸಿಕೊಳ್ಳಲಾಗುತ್ತಿದ್ದು, ಯಾವುದಾದರೂ ಸ್ಥಳದಲ್ಲಿ ಬೆಂಕಿ ಕಾಣಿಸಿಕೊಂಡರೆ ತುರ್ತಾಗಿ ಆ ಪ್ರದೇಶಕ್ಕೆ ಬೇರೆ ಬೇರೆ ವಲಯದ ಸಿಬ್ಬಂದಿಗಳನ್ನು ಕರೆತರಲು ವಾಹನದ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಈಗಾಗಲೇ ಅರಣ್ಯ ಸಚಿವರಾದ ಈಶ್ವರ್ ಖಂಡ್ರೆ ಅವರು ಬಂಡೀಪುರಕ್ಕೆ ಭೇಟಿ ನೀಡಿ ಫೈರ್‌ಲೈನ್ ಕಾಮಗಾರಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪ್ರತಿಯೊಂದು ವಲಯದಲ್ಲೂ ಬ್ಲೋವರ್‌ಗಳನ್ನು ನೀಡಲಾಗಿದ್ದು, ಅದು ಬೆಂಕಿ ನಂದಿಸಲು ಸಹಕಾರಿಯಾಗಲಿದೆ. 5ರಿಂದ 6 ಮಂದಿ ಮಾಡುವ ಕೆಲಸವನ್ನು ಒಂದು ಬ್ಲೋವರ್ ಮಾಡುವುದರಿಂದ ಇದು ಬೆಂಕಿ ತಡೆಗೆ ನೆರವಾಗಲಿದೆ ಎಂದರು.

ಬಂಡೀಪುರ ಅರಣ್ಯದಲ್ಲಿ ಹಾದು ಹೋಗಿರುವ ಗುಂಡ್ಲುಪೇಟೆ–ಊಟಿ ರಸ್ತೆ, ಗುಂಡ್ಲುಪೇಟೆ–ಸುಲ್ತಾನ್‌ಬತ್ತೇರಿ ರಸ್ತೆಯುದ್ದಕ್ಕೂ ಎರಡೂ ಬದಿಯಲ್ಲೂ ಕಳೆಗಿಡವನ್ನು ಸುಡಲಾಗಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ಮಾರ್ಗಮಧ್ಯೆ ಧೂಮಪಾನ ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುತ್ತಿದೆ ಎಂದು ವಿವರಿಸಿದರು.

ಅರ್ಜಿ ಆಹ್ವಾನ

ಮೈಸೂರು, ಫೆ.4– ಜಿಲ್ಲಾ ಗೃಹರಕ್ಷಕ ದಳದ ಕಚೇರಿ ವ್ಯಾಪ್ತಿಯಲ್ಲಿನ ಮೈಸೂರು, ನಂಜನಗೂಡು, ದೊಡ್ಡ ಕವಲಂದೆ, ಟಿ.ನರಸೀಪುರ, ಹೆಚ್.ಡಿ.ಕೋಟೆ, ಹ್ಯಾಂಡ್ ಪೋಸ್ಟ್, ಸರಗೂರು, ಕೆ.ಆರ್.ನಗರ, ಹುಣಸೂರು, ಪಿರಿಯಾಪಟ್ಟಣ ಘಟಕಗಳಲ್ಲಿ ಖಾಲಿ ಇರುವ ಗೃಹರಕ್ಷಕ ಸ್ವಯಂ ಸೇವಕರ ನೋಂದಣಿಗೆ ಉತ್ತಮ ದೇಹದಾರ್ಢ್ಯತೆ ಹೊಂದಿರುವ ಅರ್ಹರಿಂದ ಅರ್ಜಿ ಆಹ್ವಾನಿಸಿದ್ದು, ಫೆ.16ರವರೆಗೆ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿ ಫೆ.17 ರೊಳಗೆ ತಲುಪಿಸುವುದು. ಮಾಹಿತಿಗೆ ದೂ.ಸಂ.0821–2542877 ಸಂಪರ್ಕಿಸಿ.





ಭಾನುವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಕಾಂಗ್ರೆಸ್ ಮುಖಂಡ ಡೆಲ್ಲಿ ರವಿ ಅವರಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಮಾಜಿ ಕಾರ್ಪೊರೇಟರ್ ಮಾದೇಶ್, ಮುಖಂಡರಾದ ಕೃಷ್ಣ, ಶ್ರೀನಿವಾಸ್, ಕಾಂತರಾಜ್, ಮೂರ್ತಿ, ಕೆಂಪರಾಜ್, ರವಿ, ಪಟೇಲ್, ಗೋವಿಂದ್‌ರಾಜ್, ಶ್ರೀಧರ್ ಹಾಗೂ ಮಂಚೇಗೌಡನಕೊಪ್ಪಲು ಮತ್ತು ಹೆಬ್ಬಾಳು ಗ್ರಾಮಸ್ಥರು ಆತ್ಮೀಯವಾಗಿ ಅಭಿನಂದಿಸಿದರು. ಇದೇ ವೇಳೆ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿತ್ತು.



ಹುಣಸೂರು ಶಾಸಕರೂ ಆದ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರಾದ ಜಿ.ಡಿ. ಹರೀಶ್‌ಗೌಡರ 37ನೇ ವರ್ಷದ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಜೆಡಿಎಸ್ ಹಿರಿಯ ಮುಖಂಡ, ಶಾಸಕ ಜಿ.ಟಿ.ದೇವೇಗೌಡರ ಆಪ್ತ ಹಾಗೂ ಉದ್ಯಮಿ ಜಯಪುರದ ಮಹದೇವು, ಹರೀಶ್‌ಗೌಡರಿಗೆ ಸಿಹಿ ತಿನಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಸರ್ಕಾರಿ ಕಟ್ಟಡಗಳ ಶೋಚನೀಯ ಸ್ಥಿತಿ; ಅಧಿಕಾರಿಗಳ ನಿರ್ಲಕ್ಷ್ಯದಿಂದ ಶಿಥಿಲಾವಸ್ಥೆ



ಮೈಸೂರಿನ ಚೆಲುವಾಂಬ ಉದ್ಯಾನದ ಬಳಿಯ ನಗರಪಾಲಿಕೆ ಕಟ್ಟಡಗಳ ದುಸ್ಥಿತಿ

ಮೈಸೂರು, ಫೆ.4–ಮೈಸೂರಿನ ಒಂಟಿಕೊಪ್ಪಲು ರಸ್ತೆ ಚೆಲುವಾಂಬ ಉದ್ಯಾನದ ಬಳಿ ಇರುವ ನಗರಪಾಲಿಕೆ ಕಟ್ಟಡಗಳು ಶೋಚನೀಯ ಸ್ಥಿತಿ ತಲುಪುತ್ತಿವೆ.

ಪಾಲಿಕೆ ಅತಿಥಿಗೃಹದ ಪಕ್ಕದಲ್ಲಿ ಮೂರು ಕಟ್ಟಡಗಳಿದ್ದು, ಅಲ್ಲಿ ಚಾಮರಾಜ ಮತ್ತು ಚಾಮುಂಡೇಶ್ವರಿ ಕ್ಷೇತ್ರಗಳ ಆಶ್ರಯ ಶಾಖೆ ಹಾಗೂ ತೋಟಗಾರಿಕೆ ವಿಭಾಗದ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಮತ್ತೊಂದು ಕಟ್ಟಡ ಖಾಲಿ ಬಿದ್ದಿದೆ. ಈ ಎಲ್ಲಾ ಕಟ್ಟಡಗಳೂ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಗುರಿಯಾಗಿರುವುದು ಮಾತ್ರ ವಿಷಾದನೀಯ. ಕಟ್ಟಡದ ಚಾವಣಿ ಉದುರುತ್ತಿದ್ದು, ಗೋಡೆಗಳು ಶಿಥಿಲವಾಗುತ್ತಿವೆ. ತಾರಸಿಯಲ್ಲಿ ಬಿದ್ದಿರುವ ತೆಂಗಿನ ಗರಿಗಳು ಕಚೇರಿ ಮುಂಭಾಗದಲ್ಲಿ ಜೋತು ಬಿದ್ದಿದ್ದರೂ ಅವುಗಳನ್ನು ತೆರವುಗೊಳಿಸಿಲ್ಲ. ಆವರಣದಲ್ಲಿ ಕಸದ ರಾಶಿ ಕಣ್ಣಿಗೆ ರಾಚುತ್ತದೆ. ಕಾಂಪೌಂಡ್ ಬಿರುಕು ಬಿಟ್ಟಿದೆ. ನೀರಿನ ಸಂಪರ್ಕವೂ ಸಮರ್ಪಕವಾಗಿಲ್ಲ. ಅಲ್ಲಲ್ಲಿ ಸೋರಿಕೆಯಾಗಿ ರಾಡಿಯಾಗುತ್ತಿದೆ. ಯುಜಿಡಿ ಪೈಪ್‌ಲೈನ್ ದುರಸ್ತಿಯಲ್ಲಿವೆ. ಕಚೇರಿ ಮುಂಭಾಗವೇ ಯಾರೋ ಫಾಸ್ಟ್‌ಫುಡ್ ವಾಹನ ನಿಲ್ಲಿಸಿರುತ್ತಾರೆ. ಇಷ್ಟಾದರೂ ಪಾಲಿಕೆ ಅಧಿಕಾರಿಗಳು ಸಮಸ್ಯೆಗಳತ್ತ ದೃಷ್ಟಿ ಹಾಯಿಸಿಲ್ಲ. ಹಾಗಾದರೆ ಅವರ ಕಣ್ಣಿನಲ್ಲೇನಾದರೂ ಧೂಳು ತುಂಬಿದೆಯಾ? ಎಂದು ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ತಮ್ಮ ಸ್ವಂತ ಮನೆ ಈ ಸ್ಥಿತಿಯಲ್ಲಿದ್ದರೆ ಅಧಿಕಾರಿಗಳು ಸುಮ್ಮನಿರುತ್ತಿದ್ದರಾ? ಜನರ ತೆರಿಗೆ ಹಣದಲ್ಲಿ ನಿರ್ಮಿಸಿರುವ ಕಟ್ಟಡಗಳ ಬಗ್ಗೆ ಇಷ್ಟೊಂದು ತಾತ್ಸಾರವೇಕೆ?. ಪಾಲಿಕೆ ಸ್ವಂತ ಕಟ್ಟಡದಲ್ಲಿ ಕೆಲಸ ಮಾಡಲು ಅವರಿಗೆ ಇಷ್ಟವಿಲ್ಲದೆ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರವಾಗಲು ಈ ನಿರ್ಲಕ್ಷ್ಯಧೋರಣೆ ತಳೆದಿದ್ದಾರಾ? ಎಂದು ಪ್ರಶ್ನಿಸಿರುವ ಜನರು, ಈ ಕಟ್ಟಡಗಳನ್ನು ದುರಸ್ತಿ ಮಾಡಿಸಿ, ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು. ಇಲ್ಲವಾದರೆ ಕಟ್ಟಡಗಳು ದುಷ್ಕರ್ಮಿಗಳಿಗೆ ಆಶ್ರಯ ತಾಣವಾಗುವುದು ನಿಶ್ಚಿತ ಎಂದಿದ್ದಾರೆ.

ಕನಕ ಪೀಠದ ಈಶ್ವರಾನಂದಪುರಿ ಶ್ರೀಗಳ ಹೇಳಿಕೆ ಕುರಿತು ತನಿಖೆ ನಡೆಸಲಿ



ಬಿ.ಸುಬ್ರಹ್ಮಣ್ಯ

ಮೈಸೂರು,ಫೆ.4–ಕನಕ ಪೀಠದ ಈಶ್ವರಾನಂದಪುರಿ ಶ್ರೀಗಳ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ ಮುಜರಾಯಿ ಇಲಾಖೆ ಸಚಿವರು ಹಾಗೂ ಇಲಾಖೆ ಅಧಿಕಾರಿಗಳು ತನಿಖೆ ನಡೆಸಿ, ತಾರತಮ್ಯ ತೋರಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಒತ್ತಾಯಿಸಿದ್ದಾರೆ.

ಕುರುಬ ಸ್ವಾಮೀಜಿಗಳು ಬಾಗೂರು ಗ್ರಾಮದ ಚನ್ನಕೇಶವ ದೇಗುಲಕ್ಕೆ ಹೋಗಿದ್ದರೆಂದು ಅಲ್ಲಿನ ಕೆಲವರು ದೇವಸ್ಥಾನವನ್ನೇ ಸ್ವಚ್ಛಗೊಳಿಸಿದ್ದರು ಎಂದು ಕನಕ ಪೀಠದ ಈಶ್ವರಾನಂದಪುರಿ ಶ್ರೀಗಳು ಇತ್ತೀಚೆಗೆ ಚಿತ್ರದುರ್ಗದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ತಮಗೆ ಆದ ಕಹಿ ಅನುಭವನ್ನು ಹಂಚಿಕೊಂಡಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸುಬ್ರಹ್ಮಣ್ಯ, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಜಾತಿ ತಾರತಮ್ಯ, ಕೆಳ ವರ್ಗದ ಜನರನ್ನು ತುಳಿಯುವ ಪ್ರಯತ್ನಗಳು ಇಂದಿಗೂ ಮುಂದುವರಿದಿವೆ. ಗೌರವ ಸ್ಥಾನದಲ್ಲಿರುವ ಮಠಾಧೀಶರಿಗೇ ಅಸ್ಪೃಶ್ಯತೆಯ ಬಿಸಿ ತಟ್ಟಿದೆ ಎಂದಾದರೆ ಇನ್ನು ಸಾಮಾನ್ಯ ಜನರ ಗತಿ ಏನು? ಶ್ರೀಗಳು ಸುಖಾಸುಮ್ಮನೆ ಆರೋಪ ಮಾಡುವುದಿಲ್ಲ. ಹಾಗಾಗಿ ಅವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ, ಕಾನೂನು ವ್ಯಾಪ್ತಿಯಲ್ಲಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಕುರುಬ ಸಮಾಜ ಶೋಷಿತ ಹಾಗೂ ಹಿಂದುಳಿದ ವರ್ಗಗಳ ಸಮುದಾಯಗಳಲ್ಲಿ ಒಂದಾಗಿದೆ. ಶಿಕ್ಷಣ, ರಾಜಕೀಯ ಸೇರಿದಂತೆ ಅನೇಕ ಸೌಲಭ್ಯಗಳಿಂದ ವಂಚಿತವಾಗಿದೆ. ಇದರ ನಡುವೆ ಅಸ್ಪೃಶ್ಯತೆಯಿಂದ ಸಮಾಜವನ್ನು ತುಳಿಯುವ ಕೆಲಸ ಆಗಬಾರದು ಎಂದು ಆಗ್ರಹಿಸಿದ್ದಾರೆ.

ಸೌಜನ್ಯ ಅತ್ಯಾಚಾರ–ಕೊಲೆ ಪ್ರಕರಣ

ಆರೋಪಿಗೆ ನೋಟಿಸ್ ಜಾರಿ ಮಾಡಿದ ಹೈಕೋರ್ಟ್

ಬೆಂಗಳೂರು, ಫೆ.4– ಸೌಜನ್ಯ ಅತ್ಯಾಚಾರ–ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಸಂತೋಷ್ ರಾವ್‌ಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ವಿಶೇಷ (ಮಕ್ಕಳ) ನ್ಯಾಯಾಲಯವು ಸೌಜನ್ಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಆರೋಪಿಯನ್ನು ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ ಕೇಂದ್ರೀಯ ತನಿಖಾ ದಳವು (ಸಿಬಿಐ) ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸಂತೋಷ್ ರಾವ್‌ಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಸಿಬಿಐ ವಿಶೇಷ ನ್ಯಾಯಾಲಯವು ಆರೋಪಿ ಸಂತೋಷ್ ರಾವ್ ಅವರನ್ನು 2023ರ ಜೂನ್ 16ರಂದು ಪ್ರಕರಣದಲ್ಲಿ ಖುಲಾಸೆಗೊಳಿಸಿತ್ತು. ಇದನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಶ್ರೀನಿವಾಸ್ ಹರೀಶ್‌ಕುಮಾರ್ ಮತ್ತು ವಿಜಯಕುಮಾರ್ ಎ.ಪಾಟೀಲ್ ಅವರ ನೇತೃತ್ವದ ವಿಭಾಗೀಯ ಪೀಠವು ವಿಚಾರಣೆ ನಡೆಸಿತು.

2012ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯ ಕೊಲೆ ಮತ್ತು ಅತ್ಯಾಚಾರ ಘಟನೆ ನಡೆದಿತ್ತು. ಪ್ರಕರಣವನ್ನು ಮೊದಲಿಗೆ ಬೆಳ್ತಂಗಡಿ ಠಾಣಾ ಪೊಲೀಸರು ತನಿಖೆ ನಡೆಸಿದ್ದರು. ಬಳಿಕ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. 2013ರ ನವೆಂಬರ್ 6ರಂದು ಸರ್ಕಾರವು ಸಿಬಿಐಗೆ ತನಿಖೆಗೆ ಆದೇಶಿಸಿತ್ತು. ತನಿಖಾಧಿಕಾರಿಗಳು ಕಾರ್ಕಳ ಮೂಲದ ಸಂತೋಷ್ ರಾವ್ ಎಂಬಾತನನ್ನು ಆರೋಪಿಯಾಗಿ ಗುರುತಿಸಿದ್ದರು. ಆದರೆ, ಪ್ರಕರಣದ ವಿಚಾರಣೆಯ ನಂತರ ಸಿಬಿಐ ವಿಶೇಷ ನ್ಯಾಯಾಲಯವು 2023ರ ಜುಲೈ 16ರಂದು ಆರೋಪಿಯನ್ನು ಖುಲಾಸೆಗೊಳಿಸಿತ್ತು. ಇದರಿಂದ ವಿವಿಧ ಸಂಘಟನೆಗಳು ರಾಜಕೀಯ ಪಕ್ಷಗಳು ಪ್ರಕರಣದ ಮರುತನಿಖೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದವು. ಹೀಗಾಗಿ, ಮರುತನಿಖೆಗೆ ಆದೇಶಿಸಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಲಾಗಿತ್ತು. ಇದಕ್ಕೆ ಪ್ರತಿಕ್ರಿಯಿಸಿದ್ದ ಪೀಠವು ಪ್ರಕರಣದಲ್ಲಿ ಸರ್ಕಾರ, ಮೂಲ ದೂರುದಾರರು ಅಥವಾ ಸಂತ್ರಸ್ತ ಕುಟುಂಬವು ಆರೋಪಿಯನ್ನು ದೋಷಮುಕ್ತಗೊಳಿಸಿದ ವಿಚಾರಣಾಧೀನ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಾನೂನಿನಲ್ಲಿ ಅವಕಾಶವಿದೆ ಎಂದಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸಾಲಕ್ಕೆ ಹೆದರಿ ನಾಪತ್ತೆಯಾಗಿದ್ದ ಮೈಸೂರಿನ ಕುಟುಂಬ ಸುರಕ್ಷಿತ

ಸಂಬಂಧಿಕರಿಗೆ ಫೋನ್ ಮಾಡಿ ಸುರಕ್ಷಿತರಾಗಿದ್ದೇವೆ ಎಂದು ಮಾಹಿತಿ

ಮೈಸೂರು,ಫೆ.4(ಬಿಎಲ್‌ಯು)–ಸಾಲಕ್ಕೆ ಹೆದರಿ ನಾಪತ್ತೆಯಾಗಿದ್ದ ಮೈಸೂರಿನ ಕೆಜಿಕೊಪ್ಪಲ್‌ನ ಒಂದೇ ಕುಟುಂಬದ ಐವರು ಸುರಕ್ಷಿತರಾಗಿದ್ದಾರೆ ಎಂದು ತಿಳಿದುಬಂದಿದೆ.

ಸಾಲಕ್ಕೆ ಹೆದರಿದ ಮೈಸೂರಿನ ಕೆ.ಜಿ.ಕೊಪ್ಪಲ್ ವಾಸಿಗಳಾದ ಮಹೇಶ್(35), ಇವರ ಪತ್ನಿ ಭವಾನಿ(28), ಪುತ್ರಿ ಪ್ರೇಕ್ಷಾ(3), ತಾಯಿ ಸುಮಿತ್ರ(55), ತಂದೆ ಮಹದೇವಪ್ಪ (65) ಅವರು ಜನವರಿ 20ರಂದು ದಿಢೀರ್ ನಾಪತ್ತೆಯಾಗಿದ್ದರು. ಈ ಸಂಬಂಧ ಭವಾನಿ ಸೋದರ ಜಗದೀಶ್ ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ನಾಪತ್ತೆಯಾದವರ ಮೊಬೈಲ್ ಟವರ್ ಲೊಕೇಷನ್ ಆಧರಿಸಿ ಪತ್ತೆ ಮಾಡಲು ಪೊಲೀಸರು ಯತ್ನಿಸಿದ್ದರು. ಆದರೆ ಮಹೇಶ್ ಮತ್ತು ಕುಟುಂಬಸ್ಥರು ಮೊಬೈಲ್ ಆಫ್ ಮಾಡಿಕೊಂಡಿದ್ದರಿಂದ ಪತ್ತೆ ಅಸಾಧ್ಯವಾಗಿದೆ.

ಈ ಮಧ್ಯೆ ಸಂಬಂಧಿಕರೊಬ್ಬರಿಗೆ ಫೋನ್ ಮಾಡಿ ತಾವು ಸುರಕ್ಷಿತರಾಗಿದ್ದೇವೆ ಎಂದು ಮಹೇಶ್ ತಿಳಿಸಿದ್ದಾರೆ ಎಂದು ಭವಾನಿ ಸಹೋದರ ಜಗದೀಶ್ ಹೇಳಿದ್ದಾರೆ.



ಆದರೆ ಐವರು ಎಲ್ಲಿದ್ದಾರೆ ಎಂಬುವುದು ಇನ್ನು ಪತ್ತೆಯಾಗಿಲ್ಲ. ಸಂಬಂಧಿಕರಿಗೆ ಅವರೇ ಫೋನ್ ಮಾಡಿ ತಾವು ಸುರಕ್ಷಿತರಾಗಿದ್ದೇವೆ ಎಂದು ತಿಳಿಸಿರುವ ಕಾರಣ ಕುಟುಂಬಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.


ಮಾರ್ಕೆಟಿಂಗ್ ಬಿಜಿನೆಸ್‌ನಲ್ಲಿ ಹೆಚ್ಚಿನ ಲಾಭ ಬರುತ್ತದೆ ಎಂದು ವೀರೇಶ್ ಎಂಬಾತ ಮಹೇಶ್‌ಗೆ ಆಸೆ ತೋರಿಸಿ ಮೋಸದ ಖೆಡ್ಡಾಗೆ ಬೀಳಿಸಿದ್ದರು. ವೀರೇಶ್ ಮಾತು ನಂಬಿದ ಮಹೇಶ್ ದುಬಾರಿ ಬಡ್ಡಿಗೆ ಸಾಲ ಮಾಡಿ ಬಿಜಿನೆಸ್‌ಗೆ ಹಾಕಿದ್ದರು. ಜೊತೆಗೆ ತಾನು ಗ್ಯಾರಂಟಿಯಾಗಿ ವೀರೇಶ್‌ಗೆ ಕೂಡ ಸಾಲವನ್ನು ಕೊಡಿಸಿದ್ದನು.

ಇದರಿಂದ ಮಹೇಶ್‌ಗೆ ಸುಮಾರು 35 ಲಕ್ಷ ರೂ. ತನಕ ಸಾಲದ ಹೊರೆಯಾಯಿತು. ಸಾಲ ಕೊಟ್ಟವರು ಮಹೇಶ್ ಮನೆಗೆ ಬಂದು ಗಲಾಟೆ ಮಾಡಲು ಆರಂಭಿಸಿದರು. ಅಕ್ಕ ಪಕ್ಕದ ಮನೆಯವರ ಮುಂದೆ ಮರ್ಯಾದೆ ತೆಗೆದರು ಎನ್ನಲಾಗಿದೆ. ಇದರಿಂದ ಬೇಸತ್ತ ಮಹೇಶ್ ಪತ್ನಿ, ಮಗಳು ಹಾಗೂ ತಂದೆ ತಾಯಿ ಜೊತೆ ಜ.20 ರಂದು ದಿಢೀರ್ ನಾಪತ್ತೆಯಾದರು. ಆ ಸಂದರ್ಭದಲ್ಲಿ ತನ್ನ ಸ್ನೇಹಿತ ದರ್ಶನ್ ಎಂಬಾತನಿಗೆ ವಾಯ್ಸ್ ಮೆಸೇಜ್ ಕಳುಹಿಸಿದ್ದರು. ಮಧ್ಯಸ್ಥಿಕೆ ವಹಿಸಿ ವೀರೇಶ್‌ಗೆ ಸಾಲ ಕೊಡಿಸಿದ್ದೆ. ಈಗ ಸಾಲ ಕೊಟ್ಟವರು ಹಣಕ್ಕಾಗಿ ರಾಕ್ಷಸರಂತೆ ವರ್ತಿಸುತ್ತಿದ್ದಾರೆ. ನಾವು ಕೆರೆ ಅಥವಾ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ. ಒಂದು ವೇಳೆ ನಮ್ಮ ಮೃತದೇಹ ಸಿಕ್ಕರೆ ಅಂತ್ಯಕ್ರಿಯೆ ಮಾಡಿ. ಆದರೆ ನಮ್ಮ ಈ ಸ್ಥಿತಿಗೆ ಕಾರಣರಾದ ವೀರೇಶ್‌ನಂತೂ ಬಿಡಬೇಡಿ ಎಂದು ಸ್ನೇಹಿತನಿಗೆ ಕಳುಹಿಸಿದ್ದ ವಾಯ್ಸ್ ಮೆಸೇಜ್‌ನಲ್ಲಿ ಮಹೇಶ್ ಮನವಿ ಮಾಡಿಕೊಂಡಿದ್ದನು. ಅಂದು ನಾಪತ್ತೆಯಾದ ಮಹೇಶ್ ಈಗ ದಿಢೀರ್ ಸಂಬಂಧಿಕರಿಗೆ ಫೋನ್ ಮಾಡಿ ತಾವು ಸುರಕ್ಷಿತರಾಗಿದ್ದೇವೆ ಎಂದು ಹೇಳಿದ್ದಾರೆ. ಈಗ ಪೊಲೀಸರು ಮಹೇಶ್‌ನಿಂದ ಫೋನ್ ಸ್ವೀಕರಿಸಿ ಮಾತನಾಡಿರುವ ಸಂಬಂಧಿಕರಿಂದ ಮಾಹಿತಿ ಸಂಗ್ರಹಿಸಿ ಮಹೇಶ್ ಕುಟುಂಬಸ್ಥರ ಪತ್ತೆಗೆ ಮುಂದಾಗಿದ್ದಾರೆ.

ಸಮಿತಿ ಸದಸ್ಯರ ನಾಮನಿರ್ದೇಶನಕ್ಕೆ ಅರ್ಜಿ ಆಹ್ವಾನ

ಮೈಸೂರು, ಫೆ.4–ರಾಜ್ಯ ವಿಕಲಚೇತನರ ಅಭ್ಯುದಯಕ್ಕಾಗಿ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನುರಿತ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಮಹಿಳಾ ಪ್ರತಿನಿಧಿಗಳನ್ನೊಳಗೊಂಡಂತೆ, ವಿವಿಧ ವಿಕಲಚೇತನ ಕ್ಷೇತ್ರದ ತಜ್ಞರು ವ್ಯಕ್ತಿ ಹಾಗೂ ಸಂಸ್ಥೆಗಳಿಂದ ರಾಜ್ಯ ಸಲಹಾ ಮಂಡಳಿಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವ್ಯಕ್ತಿ, ಸಂಸ್ಥೆಗಳು ಫೆ.7ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ತಿಲಕ್‌ನಗರದ ಪುಲಿಕೇಶಿ ರಸ್ತೆಯಲ್ಲಿರುವ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯ ದೂ.ಸಂ: 0821–2490333 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.2.2024 ಸೋಮವಾರ, ಮಳೆ ನಕ್ಷತ್ರ: ಶ್ರವಣ 24.1.2024ರಿಂದ 05.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ,
ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ ಸಂಜೆ 4.30 ಗಂಟೆವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶಾರದಾ ವಿಲಾಸ್ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ಸ್, ಶಾರದಾ ವಿಲಾಸ್ ಕಾಲೇಜು ಆಫ್ ಫಾರ್ಮಸಿ:** ವಿಶ್ವ ಕ್ಯಾನ್ಸರ್ ದಿನಾಚರಣೆ–2024ರ ಅಂಗವಾಗಿ 'ಕ್ಲೋಸ್ ದ ಕೇರ್ ಗ್ಯಾಪ್' ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿ: ಕೆ.ಆರ್.ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ.ಶೋಭಾ, ಶಾರದಾ ವಿಲಾಸ್ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ ಕಾರ್ಯದರ್ಶಿ ಎನ್.ಚಂದ್ರಶೇಖರ್, ಅಧ್ಯಕ್ಷತೆ: ಶಾರದಾ ವಿಲಾಸ್ ಕಾಲೇಜ್ ಆಫ್ ಫಾರ್ಮಸಿ ಪ್ರಿನ್ಸಿಪಾಲ್ ಡಾ.ಹನುಮಂತಚಾರ್ ಜೋಷಿ, ಸ್ಥಳ: ಪ್ರೊ.ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಕಾಲೇಜಿನ ಆವರಣ, ಬೆಳಗ್ಗೆ 10 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶನಾಲಯ:** 2023–24ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ಉದ್ಘಾಟನೆ: ಖ್ಯಾತ ಚಲನಚಿತ್ರ ಹಾಗೂ ಕಿರುತೆರೆ ನಟರಾದ ನೀರ್ನಳ್ಳಿ ರಾಮಕೃಷ್ಣ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿ: ಖ್ಯಾತ ಚಲನಚಿತ್ರ ಮತ್ತು ಕಿರುತೆರೆ ನಟಿ ಪೂಜಾ ಲೋಕೇಶ್, ಸ್ಥಳ: ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11 ಗಂಟೆಗೆ.

■ **ಹಿರಿಯ ನಾಗರಿಕ ಮಂಡಳಿ:** ಮಾಸಿಕ ಉಪನ್ಯಾಸ, ಚಾರ್ಟೆಡ್ ಅಕೌಂಟೆಂಟ್ ಕೇಶವ ಡೊಂಗ್ರೆ ಅವರಿಂದ ನಾಗರಿಕರಿಗೆ ತೆರಿಗೆ ವಿನಾಯಿತಿ ಮತ್ತು ಇತರ ಅನುಕೂಲಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು, ಸ್ಥಳ: ಮಂಡಳಿಯ ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಮೈಸೂರು ಎಸ್.ರಾಜಲಕ್ಷ್ಮಿ–ವೀಣೆ, ಜಿ.ಎಸ್.ರಾಮಾನುಜನ್–ಮೃದಂಗ, ವಿ.ಎಸ್.ರಮೇಶ್–ಘಟ, ಸ್ಥಳ: ಆಳ್ವಾರ್ ಕೃಷ್ಣ ಮಂದಿರ, ಗೋಕುಲಂ ಮೂರನೇ ಹಂತ, ಸಂಜೆ 6ರಿಂದ ರಾತ್ರಿ 8.30ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಚಂದ್ರಶೇಖರ ತಾಳ್ಯ, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.05 ನೆನಪಿನಂಗಳ–ಸಾಹಿತಿ ಡಾ.ಪ್ರಭುಶಂಕರ್ ಅವರೊಂದಿಗೆ ಡಾ.ಜಿ.ಹೆಚ್.ನಾಯಕ್ ಅವರು ನಡೆಸಿದ ಸಂದರ್ಶನ, 10.00 ಎಂ.ಎಸ್.ಶೀಲಾ–ಹಾಡುಗಾರಿಕೆ. **ಮಧ್ಯಾಹ್ನ:** 12.30 ದೇವರನಾಮ–ಜಿ.ಶ್ರೀಕಾಂತ್, ಪರಮೇಶ್ವರ ಹೆಗಡೆ, 12.45 ನಮ್ಮ ಆರೋಗ್ಯ: ರುಮೆಟಾಯ್ಡ್ ಸಂಧೀವಾತ–ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಮಹಾಬಲೇಶ್ವರ ಮಮದಾಪುರ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು–ಪಿ.ಸುಮನಾ, 2.35 ರಾಮಾಯಣ ರಸ ಪ್ರಸಂಗಗಳು. ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕಾವ್ಯದಿಂದ ಆಯ್ದ ಭಾಗಗಳ ವಾಚನಾಭಿನಯ, ಪ್ರಸ್ತುತಿ: ಶ್ರೀ ಗಜಾನನ ಯುವಕ ಮಂಡಲ. ನಿರ್ವಹಣೆ ಟಿ.ವಿ.ವಿದ್ಯಾಶಂಕರ್, 3.00 ಡಿ.ಬಾಲಕೃಷ್ಣ–ವೀಣಾವಾದನ.

ಸಂಜೆ: 4.00 ಮಹಿಳಾರಂಗ: ಡಾಕ್ಟರ್ ಸಮಯ: ವಿಷಯ–ನವಜಾತ ಶಿಶುಗಳ ಆರೈಕೆ, ಲಾಲನೆ ಪಾಲನೆ ಭಾಗವಹಿಸುವವರು–ಡಾ.ಎಂ.ವಿ.ಶುಭಾ, ಪ್ರಸ್ತುತಿ–ಕೆ.ಬಿ.ಮೀನಾ, 4.45 ಹಿಂದಿ ಪಾಠ–ಶಾಂತಾ ಡಿ.ಕಿಣಿ, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ" ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು–ಹೊನ್ನು"–ಸಂಬಾರು ಈರುಳ್ಳಿ ಬೆಳೆಯ ಉತ್ಪಾದನಾ ತಾಂತ್ರಿಕತೆಗಳನ್ನು ಕುರಿತು ಡಾ.ಹೆಚ್.ಎಂ.ಪಲ್ಲವಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ. **ರಾತ್ರಿ:** 9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ".

ಮಾಲಿನ್ಯದಿಂದ ಭೂಮಿ ಮುಕ್ತಗೊಳಿಸದಿದ್ದರೆ ಮುಂದಿನ ಪೀಳಿಗೆ ನಮ್ಮನ್ನು ಶಪಿಸಲಿದೆ

● ಕವಯತ್ರಿ ಡಾ.ಲತಾ ರಾಜಶೇಖರ್ ಎಚ್ಚರಿಕೆ ನುಡಿ ● ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಸೇರಿ ಮೂವರಿಗೆ ಗಾಂಧಿ ಸದ್ಭಾವನ ಪ್ರಶಸ್ತಿ

ಮೈಸೂರು,ಫೆ.4(ಪಿಎಂ)– ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವುದು ಪ್ರಸ್ತುತ ಅತ್ಯಂತ ಅಗತ್ಯ. ಭೂಮಿಯನ್ನು ಮಾಲಿನ್ಯ ಮುಕ್ತಗೊಳಿಸಿ ಕಾಪಾಡದಿದ್ದರೆ ಮುಂದಿನ ಪೀಳಿಗೆ ನಮ್ಮನ್ನು ಶಪಿಸಲಿದೆ ಎಂದು ಕವಯತ್ರಿ ಡಾ.ಲತಾ ರಾಜಶೇಖರ್ ಅಭಿಪ್ರಾಯಪಟ್ಟರು.

ಮೈಸೂರಿನ ಜಯಲಕ್ಷ್ಮಿಪುರಂನ ಶ್ರೀವಿವೇಕಾನಂದ ಪದವಿಪೂರ್ವ ಕಾಲೇಜಿನ ಶ್ರೀಕುವೆಂಪು ರಂಗಮಂದಿರದಲ್ಲಿ ಅದಮ್ಯ ರಂಗಶಾಲೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 'ಗಾಂಧಿ ಸದ್ಭಾವನ ಪ್ರಶಸ್ತಿ' ಮತ್ತು 'ಅದಮ್ಯ ಚೇತನ ಪ್ರಶಸ್ತಿ' ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಈ ಸಮಾರಂಭದ ಬಳಿಕ ಪರಿಸರ ಸಂರಕ್ಷಣೆ ಕುರಿತ ಮಕ್ಕಳ ನಾಟಕ ಪ್ರದರ್ಶನ ಹಮ್ಮಿಕೊಂಡಿರುವುದು ಶ್ಲಾಘನೀಯ. ಪ್ರತಿಯೊಬ್ಬರು ತಮ್ಮ ಸುತ್ತಮುತ್ತಲ ಪರಿಸರದಲ್ಲಿ ಮಾಲಿನ್ಯಕ್ಕೆ ಅವಕಾಶ ನೀಡದೇ ಪರಿಸರ ಸ್ನೇಹಿಯಾಗಿ ಬದುಕಿದರೆ ಭೂಮಿಯ ಸುಂದರ ಪರಿಸರ ನಮ್ಮ ಮುಂದಿನ ಪೀಳಿಗೆಗೂ ಲಭ್ಯವಾಗಲಿದೆ ಎಂದರು.

ನಮ್ಮ ಅನೇಕ ಕ್ರಿಯೆಗಳು ಇಂದು ಪರಿಸರಕ್ಕೆ ಮಾರಕವಾಗಿ ಪರಿಣಮಿಸಿವೆ. ಪರಿಸರದ ಮೇಲೆ ವಾಯು ಮಾಲಿನ್ಯದ ದುಷ್ಪರಿಣಾಮ ವ್ಯಾಪಕವಾಗುತ್ತಿದ್ದು, ದೆಹಲಿಯು ತೀವ್ರತರ ವಾಯು ಮಾಲಿನ್ಯಕ್ಕೆ ತುತ್ತಾಗಿದೆ. ಬೆಂಗಳೂರಿನಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗುವ ಮೂಲಕ ವಾಯು ಮಾಲಿನ್ಯದ ದುಷ್ಪರಿಣಾಮ ಎದುರಿಸುವಂತಾಗಿದೆ. ಪರಿಸರ ಮಾಲಿನ್ಯ ಇಂದು ಇಡೀ ಜಗತ್ತನ್ನು ಆವರಿಸಿದೆ ಎಂದು ಆತಂಕ ವ್ಯಕ್ತಪಡಿಸಿದರು.

ನಮ್ಮಿಂದ ಉತ್ಪತ್ತಿಯಾಗುತ್ತಿರುವ ತ್ಯಾಜ್ಯದ ಪೈಕಿ ಪ್ಲಾಸ್ಟಿಕ್ ಪ್ರಮಾಣವೇ ಹೆಚ್ಚಾಗಿದ್ದು, ಈ ಪ್ಲಾಸ್ಟಿಕ್ ನೂರಾರು ವರ್ಷಗಳೇ ಕಳೆದರೂ ಭೂಮಿಯಲ್ಲಿ ಕೊಳೆಯದೇ ಮಾಲಿನ್ಯಕ್ಕೆ ಎಡೆಮಾಡಲಿದೆ. ಇನ್ನು ಮೈಕ್ರೋ ಪ್ಲಾಸ್ಟಿಕ್ ನಮ್ಮ ದೇಹದೊಳಗೆ ಸೇರಿದರೆ ಅತ್ಯಂತ ಅಪಾಯಕಾರಿ. ಕಾರ್ಖಾನೆಗಳ ತ್ಯಾಜ್ಯ ನೀರು ನದಿಗಳಿಗೆ ಸೇರದಂತೆ ಎಚ್ಚರ ವಹಿಸಬೇಕಿದೆ. ಇಲ್ಲವಾದರೆ ನಮ್ಮ ಜೀವನದಿಗಳು ಮಲಿನಗೊಂಡು ಪರಿಸರಕ್ಕೆ ದೊಡ್ಡ ಪೆಟ್ಟು ಬೀಳಲಿದೆ ಎಂದರು.

ವಾಹನ ಬಳಕೆ ಕಡಿಮೆ ಇರಲಿ: ಮನೆಯಿಂದ ಪಕ್ಕದ ಬೀದಿಗೆ ಹೋಗಲು ವಾಹನ ಅವಲಂಬಿಸುವ ಪ್ರವೃತ್ತಿ ಬಿಡಬೇಕು. ಯುರೋಪ್ ರಾಷ್ಟ್ರಗಳಲ್ಲಿ ಬಹುತೇಕ ಮಂದಿ ತಮ್ಮ ಕಾರಿನಲ್ಲಿ ಸೈಕಲ್‌ವೊಂದನ್ನು ಇಟ್ಟುಕೊಳ್ಳುತ್ತಾರೆ. ದೂರದ ಪ್ರದೇಶಕ್ಕೆ ಕಾರಿನಲ್ಲಿ ಹೋದರೂ ಅಲ್ಲಿನ ಸಮೀಪದ ಸ್ಥಳಗಳಿಗೆ ಸೈಕಲ್‌ನಲ್ಲಿ ಸವಾರಿ ಮಾಡುತ್ತಾರೆ. ಆ ಮೂಲಕ ಪೆಟ್ರೋಲ್ ಮತ್ತು ಡೀಸೆಲ್ ವಾಹನಗಳ ಬಳಕೆ ತಗ್ಗಿಸುವ ಪ್ರಯತ್ನದೊಂದಿಗೆ ವಾಯು ಮಾಲಿನ್ಯ ನಿಯಂತ್ರಣಕ್ಕೆ ಮುಂದಾಗಲಾಗಿದೆ. ಆದರೆ ನಮ್ಮ ಮೈಸೂರಿನಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಟ್ರಿಣ್ ಟ್ರಿಣ್ ಸೈಕಲ್ ವ್ಯವಸ್ಥೆ ಇದ್ದರೂ ಬಳಕೆ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಇದ್ದಂತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅದಮ್ಯ ರಂಗಶಾಲೆ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ ಮಾತನಾಡಿ, ರಂಗಭೂಮಿ, ಸಾಹಿತ್ಯ, ಕಲೆ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳು ನಮ್ಮಲ್ಲಿ ಅದಮ್ಯ ಚೈತನ್ಯ ಪುಟಿದೇಳುವಂತೆ ಮಾಡಲಿವೆ. ಹೀಗಾಗಿ ಅದಮ್ಯ ರಂಗಶಾಲೆಯು ಮಕ್ಕಳ ರಂಗ ಚಟುವಟಿಕೆಗೆ ವಿಶೇಷ ಒತ್ತು ನೀಡಿದೆ. ಅಲ್ಲದೆ, ಯುವ ಜನರು, ವಯಸ್ಕರೂ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು.

ಇದಕ್ಕೂ ಮುನ್ನ 'ಮೈಸೂರು ಮಿತ್ರ' ಅಂಕಣಕಾರ ಜಿ.ಎಲ್.ತ್ರಿಪುರಾಂತಕ, ಮಂಡ್ಯದ ಅನಿಕೇತನ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಡಾ.ರಾಮಲಿಂಗಯ್ಯ, ಮುಕ್ಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷ ಹನುಮಂತೇಶ್ ಅವರಿಗೆ 'ಗಾಂಧಿ ಸದ್ಭಾವನ ಪ್ರಶಸ್ತಿ', ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿರುವ ಚಿಕ್ಕಮಗಳೂರು ಮೂಡಿಗೆರೆಯ ಹೆಚ್.ಎಸ್.ಪ್ರನುಶ, ರಾಮನಗರದ ಆರ್.ಕಿರಣ್ ಹಾಗೂ ಕೆಆರ್ ಪೇಟೆ ಸಂತೆಬಾಚಳ್ಳಿಯ ಎಸ್.ಎಂ.ಅನನ್ಯ ಅವರಿಗೆ 'ಅದಮ್ಯ ಚೇತನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಬಳಿಕ ಅದಮ್ಯ ರಂಗಶಾಲೆ ಮಕ್ಕಳು 'ಪಂಚತಂತ್ರ ಕಥೆಯಾಧಾರಿತ' 'ರಂಗಣ್ಣನ ರಂಪಾಟ' ನಾಟಕದ ಪ್ರದರ್ಶನ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಉಪನಿರ್ದೇಶಕ ಮ.ಗು.ಸದಾನಂದಯ್ಯ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎನ್.ಸಂತೋಷ್ ಕುಮಾರ್, ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ಮತ್ತಿತರರು ಹಾಜರಿದ್ದರು.


ಮೈಸೂರಿನ ಶ್ರೀವಿವೇಕಾನಂದ ಪಿಯು ಕಾಲೇಜಿನ ಶ್ರೀಕುವೆಂಪು ರಂಗಮಂದಿರದಲ್ಲಿ ಭಾನುವಾರ ಗಣ್ಯರಿಗೆ 'ಗಾಂಧಿ ಸದ್ಭಾವನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

> ಪ್ರಸ್ತುತದ ಆಧುನಿಕ ಪ್ರಪಂಚದ ಜಂಜಾಟದಲ್ಲಿ ಮನುಷ್ಯ ಕೇವಲ ಮೊಬೈಲ್ ಸೇರಿದಂತೆ ಸಾಮಾಜಿಕ ಜಾಲತಾಣದಲ್ಲೇ ಕಳೆದು ಹೋಗುತ್ತಿದ್ದಾನೆ. ಅದರಿಂದ ಮುಕ್ತವಾಗಿ ರಂಗಭೂಮಿ, ಸಾಂಸ್ಕೃತಿಕ–ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಆ ಮೂಲಕ ಮುಂದಿನ ಪೀಳಿಗೆಗೂ ಈ ಮೌಲ್ಯಾಧಾರಿತ ಚಟುವಟಿಕೆಗಳನ್ನು ತಲುಪಿಸಬೇಕು. ಗಾಂಧಿ ಹೆಸರಿನಲ್ಲಿ ಪ್ರಶಸ್ತಿ ನೀಡಿರುವುದು ನನ್ನಲ್ಲಿ ಜವಾಬ್ದಾರಿ ಹೆಚ್ಚಿಸಿದೆ. ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ ಇನ್ನಷ್ಟು ಕೆಲಸ ಮಾಡಲು ಪ್ರೇರಣೆ ದೊರೆತಿದೆ.
>
> -ಜಿ.ಎಲ್.ತ್ರಿಪುರಾಂತಕ,
> ಅಂಕಣಕಾರರು, ಮೈಸೂರು ಮಿತ್ರ

ಹೈನುಗಾರಿಕೆ ರೈತರ ಪಾಲಿನ ಕಾಮಧೇನು

ಶಾಸಕ ಜಿ.ಟಿ.ದೇವೇಗೌಡ ಅಭಿಮತ

ಮೈಸೂರು, ಫೆ.4(ಎಸ್‌ಬಿಡಿ)– ರಾಜ್ಯದಲ್ಲಿ ನಿತ್ಯ ಸುಮಾರು 85 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಹೈನುಗಾರಿಕೆ ರೈತರ ಆರ್ಥಿಕ ಅಭಿವೃದ್ಧಿಗೆ ನೆರವಾಗಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ತಿ.ನರಸೀಪುರ ತಾಲೂಕಿನ ಬನ್ನೂರು ಹಾಲು ಉತ್ಪಾದಕರ ಬಳಗದ ವತಿಯಿಂದ ಬನ್ನೂರು ಹಾಲು ಉತ್ಪಾದಕರ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷ ಕೆ.ಕೃಷ್ಣಪ್ಪ ಸ್ಮರಣಾರ್ಥ ಬನ್ನೂರಿನಲ್ಲಿ ಆಯೋಜಿಸಿದ್ದ ಮೂರನೇ ವರ್ಷದ ಮೈಸೂರು ಜಿಲ್ಲಾ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೈನುಗಾರಿಕೆ ರೈತರ ಪಾಲಿನ ಕಾಮಧೇನು ಆಗಿದೆ. ಅವರ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದರು.

ರಾಜ್ಯದಲ್ಲಿ ನಿತ್ಯ 85–90 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಸುಮಾರು 24 ಕೋಟಿ ರೂ. ವಹಿವಾಟು ನಡೆಯುತ್ತಿದೆ. ಮೈಸೂರು ಜಿಲ್ಲೆಯಲ್ಲಿ ದಿನಕ್ಕೆ 7 ಲಕ್ಷ ಲೀಟರ್ ಹಾಲು ಉತ್ಪಾದನೆ ಯಾಗುತ್ತಿದ್ದು, 2.50 ಕೋಟಿ ರೂ. ಹಣವನ್ನು ಹಾಲು ಉತ್ಪಾದಕರಿಗೆ ಪಾವತಿಸಲಾಗುತ್ತಿದೆ. ತಿಂಗಳಿಗೆ ಸರಾಸರಿ 75 ಕೋಟಿ ರೂ.ನಂತೆ ವರ್ಷದಲ್ಲಿ 900 ಕೋಟಿ ರೂ. ಹಣ ಹಾಲು ಉತ್ಪಾದಕರಿಗೆ ಸೇರುತ್ತಿದೆ. ಹೈನುಗಾರಿಕೆಯಿಂದ ಮಹಿಳೆಯರು ಹಾಗೂ ಯುವಕರೂ ಆದಾಯ ಗಳಿಸಿ, ಬದುಕು ರೂಪಿಸಿಕೊಂಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಗುಜರಾತ್‌ನಲ್ಲಿ ಮೊದಲು ಹಾಲು ಉತ್ಪಾದಕರ ಸಹಕಾರ ಸಂಘ ಆರಂಭಿಸಿ, ರಾಷ್ಟ್ರೀಯ ಹೈನುಗಾರಿಕೆ ಮಹಾಮಂಡಳ ಸ್ಥಾಪನೆ ಮಾಡಲಾಯಿತು. ಹಾಗೆಯೇ ಕರ್ನಾಟಕದಲ್ಲಿ ಕೋಲಾರದ ಎಂ.ಕೃಷ್ಣಪ್ಪ ಅವರು ಹಾಲು ಉತ್ಪಾದಕರ ಸಹಕಾರ ಸಂಘ ಆರಂಭಿಸಲು ಕಾರಣವಾದರು. ವಿದೇಶಿ ತಳಿ ಹಸುಗಳನ್ನು ತಂದು ಹೈನುಗಾರಿಕೆ ಬಗ್ಗೆ ವ್ಯಾಪಕ ಪ್ರಚಾರ ಮಾಡಿದರು. ಕರ್ನಾಟಕದಲ್ಲಿ ಹಾಲು ಒಕ್ಕೂಟ ಸ್ಥಾಪಿಸಿ, ಎಲ್ಲೆಡೆ ಸಹಕಾರ ಸಂಘಗಳನ್ನು ಆರಂಭಿಸಿದ್ದರಿಂದ ಇದೀಗ ಹೈನುಗಾರಿಕೆ ಹೆಮ್ಮರವಾಗಿದೆ. ಹಾಲು ಉತ್ಪಾದನೆಯಲ್ಲಿ ಪ್ರಸ್ತುತ ಗುಜರಾತ್ ನಂತರ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂದರು.

ಬರ ಅಥವಾ ಪ್ರವಾಹದಿಂದ ಕೃಷಿಯಲ್ಲಿ ನಷ್ಟವಾದರೂ ಹೈನುಗಾರಿಕೆ ಕೈ ಹಿಡಿಯುತ್ತದೆ. ಇದರ ಮಹತ್ವದ ಬಗ್ಗೆ ಮತ್ತಷ್ಟು ಪ್ರಚಾರವಾಗಬೇಕು. ಮುಂದಿನ ವರ್ಷಗಳಲ್ಲಿ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆ ನಡೆಸಿ. ಹಾಲು ಉತ್ಪಾದಕರಿಗೆ ಒಕ್ಕೂಟದಿಂದ ಅಗತ್ಯ ನೆರವು ನೀಡಲು ಸಿದ್ಧರಿದ್ದೇವೆ ಎಂದು ಭರವಸೆ ನೀಡಿದರು.

ಬಹುಮಾನ ವಿತರಣೆ: ಕಾರ್ಯಕ್ರಮದಲ್ಲಿ ಹೇಮಾದ್ರಿ ಆದಿಶಕ್ತಿ ಶ್ರೀಗೌರಿ ರಾಸುವಿನ ಪಾಲಕ ಮಂಜು ಪ್ರಥಮ, ಕೇಶವಮೂರ್ತಿ ದ್ವಿತೀಯ, ತರುಣ್ ಕುಮಾರ್ ತೃತೀಯ, ರವಿ ನಾಲ್ಕನೇ ಬಹುಮಾನ, ಬಸವಣ್ಣ, ಧ್ರುವಕುಮಾರ್, ಸಿ.ಚಂದ್ರಶೇಖರ್, ಮಧು ಹಾಗೂ ಟಿ.ಎಸ್.ಭುವನ್ ಸಮಾಧಾನಕರ ಬಹುಮಾನ ವಿತರಿಸಲಾಯಿತು.

ಬನ್ನೂರು ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಬಿ.ಎನ್.ಕೃಷ್ಣೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಉಪಾಧ್ಯಕ್ಷ ಉಮೇಶ್ ಕುಮಾರ್, ನಿರ್ದೇಶಕರಾದ ಎಂ.ಚಂದ್ರು, ಮಹೇಶ, ಶ್ರೀಧರ್, ರಘು, ವೆಂಕಟೇಶ್, ನಿಂಗಪ್ಪ ಬಿ.ಎಸ್. ರಾಜೀವ, ಬಿ.ವಿ.ಉಮೇಶ, ಬಿ.ಕೆ.ಶೋಭಾ, ಸುಶೀಲ ಮತ್ತಿತರರು ಉಪಸ್ಥಿತರಿದ್ದರು.


ಬನ್ನೂರು ಹಾಲು ಉತ್ಪಾದಕರ ಬಳಗದಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಅಧಿಕ ಹಾಲು ಕರೆಯುವ ಸ್ಪರ್ಧೆ ಸಮಾರಂಭವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ರೈತರು ಜಮೀನು ಮಾರಬೇಡಿ...

ರೈತರು ಯಾವುದೇ ಕಾರಣಕ್ಕೂ ಜಮೀನು ಕಳೆದುಕೊಳ್ಳಬೇಡಿ. 10–20 ಗುಂಟೆಯಲ್ಲಿ ಏನೂ ಮಾಡಲಾಗದು ಎಂದು ಮಾರಾಟ ಮಾಡದೆ, ಅಲ್ಲಿಯೇ ತರಕಾರಿ ಇನ್ನಿತರ ಬೆಳೆ ಬೆಳೆಯುವುದರ ಜೊತೆಗೆ ಹೈನುಗಾರಿಕೆ, ಕುರಿ ಸಾಗಾಣಿಕೆ ಮಾಡಬಹುದು. ಜಮೀನು ಕಳೆದುಕೊಂಡರೆ ಮುಂದೆ ಜೀವನ ನಡೆಸುವುದು ಕಷ್ಟವಾಗುತ್ತದೆ. ದುಂದು ವೆಚ್ಚ ಮಾಡಬೇಡಿ, ಮಕ್ಕಳಿಗೆ ಸರಳ ವಿವಾಹ ಮಾಡಿ. ನಾನು ನನ್ನ ಮಕ್ಕಳಿಗೂ ತಿರುಪತಿಯಲ್ಲಿ ಸರಳವಾಗಿ ವಿವಾಹ ಮಾಡಿಸಿದ್ದು ನಿಮಗೆ ತಿಳಿದಿದೆ. ಅದ್ಧೂರಿ ಮದುವೆಗೆ ಬ್ರೇಕ್ ಹಾಕಿ ಮಂತ್ರಮಾಂಗಲ್ಯಕ್ಕೆ ಒತ್ತು ನೀಡಿ. ಕೃಷಿ ಜಮೀನನ್ನು ಉಳಿಸಿಕೊಂಡರೆ ನೀವೇ ಶ್ರೀಮಂತರು ಎಂದು ರೈತರಿಗೆ ಜಿ.ಟಿ.ದೇವೇಗೌಡರು ಕಿವಿಮಾತು ಹೇಳಿದರು.

ಭಾರತದ ರಾಯಭಾರ ಕಚೇರಿಯಲ್ಲಿದ್ದುಕೊಂಡೇ

ಪಾಕ್ ಪರ ಗೂಢಚಾರಿಕೆ

ಉತ್ತರ ಪ್ರದೇಶ ಎಸ್‌ಟಿಎಫ್‌ನಿಂದ ವ್ಯಕ್ತಿ ಬಂಧನ

ನವದೆಹಲಿ, ಫೆ.4– ಭಾರತದ ರಾಯಭಾರ ಕಚೇರಿಯಲ್ಲಿದ್ದುಕೊಂಡೇ ಪಾಕ್ ಪರ ಗೂಢಚಾರಿಕೆ ಮಾಡಿದ ಆರೋಪದ ಮೇರೆಗೆ ಉತ್ತರ ಪ್ರದೇಶ ಎಸ್‌ಟಿಎಫ್ ಅಧಿಕಾರಿಗಳು ಶಂಕಿತ ವ್ಯಕ್ತಿಯೋರ್ವನನ್ನು ಬಂಧಿಸಿದ್ದಾರೆ.



ರಷ್ಯಾದ ಮಾಸ್ಕೋದಲ್ಲಿನ ಭಾರತೀಯ ರಾಯಭಾರ ಕಚೇರಿಯಲ್ಲಿ ನಿಯೋಜಿಸಲಾಗಿದ್ದ ಪಾಕಿಸ್ತಾನದ ಇಂಟರ್ ಸರ್ವೀಸಸ್ ಇಂಟೆಲಿಜೆನ್ಸ್ (ISI Agent) ಏಜೆಂಟ್‌ನನ್ನು ಉತ್ತರಪ್ರದೇಶದ ಭಯೋತ್ಪಾದನಾ ನಿಗ್ರಹ ದಳ ಬಂಧಿಸಿದ್ದು, ಈತ ಭಾರತೀಯನಾಗಿದ್ದರೂ ಪಾಕ್ ಬೇಹುಗಾರಿಕಾ ಸಂಸ್ಥೆಗೆ ನಮ್ಮ ಗೌಪ್ಯ ಮಾಹಿತಿಗಳನ್ನು ರವಾನೆ ಮಾಡುತ್ತಿದ್ದ ಎಂದು ಆರೋಪಿಸಲಾಗಿದೆ.

ಬಂಧಿತ ಏಜೆಂಟ್‌ನನ್ನು ಸತ್ಯೇಂದ್ರ ಸಿವಾಲ್ ಎಂದು ಗುರುತಿಸಲಾಗಿದ್ದು, ಈತನನ್ನು 2021ರಿಂದ ಮಾಸ್ಕೋದಲ್ಲಿನ ಭಾರತದ ರಾಯಭಾರ ಕಚೇರಿಯಲ್ಲಿ ನೇಮಿಸಲಾಗಿತ್ತು. ಅಲ್ಲಿ ಭಾರತ ಮೂಲದ ಭದ್ರತಾ ಸಹಾಯಕರಾಗಿ (ಐಬಿಎಸ್‌ಎ) ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಅಧಿಕೃತ ಹೇಳಿಕೆಯ ಪ್ರಕಾರ, ಭಯೋತ್ಪಾದನಾ ನಿಗ್ರಹ ದಳವು ಮಾಸ್ಕೋದಲ್ಲಿನ ಭಾರತೀಯ ರಾಯಭಾರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸತ್ಯೇಂದ್ರನ ಬಗ್ಗೆ ತನ್ನ ಮೂಲಗಳಿಂದ ಸುಳಿವು ಪಡೆದಿತ್ತು. ಇದೀಗ ಮೀರತ್‌ನಲ್ಲಿ ಆತನನ್ನು ಬಂಧಿಸಿದೆ. ಉತ್ತರ ಪ್ರದೇಶದ ಎಟಿಎಸ್ ಸಿವಾಲ್‌ನನ್ನು ವಿಚಾರಣೆ ನಡೆಸಿದ್ದು ಆರಂಭದಲ್ಲಿ ಅತೃಪ್ತಿಕರ ಉತ್ತರ ಗಳನ್ನು ನೀಡಿದ್ದ ಆತನನ್ನು ತೀವ್ರ ವಿಚಾರಗೊಳಪಡಿಸಿದ ಬಳಿಕ ಬೇಹುಗಾರಿಕೆಯನ್ನು ಒಪ್ಪಿಕೊಂಡಿದ್ದಾನೆ. ಆತ ಅಕ್ರಮ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ್ದ ಮತ್ತು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನೊಂದಿಗೆ ಕ್ರಿಮಿನಲ್ ಪಿತೂರಿಯಲ್ಲಿ ಭಾಗಿಯಾಗಿದ್ದ ಎಂದು ಉತ್ತರ ಪ್ರದೇಶದ ಎಸ್‌ಟಿಎಫ್ ತಿಳಿಸಿದೆ.

ರಾಫೆಲ್ ವಿಮಾನದ ಚಿತ್ರ ಕಳುಹಿಸಿದ್ದ: ಉದ್ವಿಗ್ನತೆಯನ್ನು ಸೃಷ್ಟಿಸುವ ಮತ್ತು ದೇಶದಲ್ಲಿ ಸಾಮರಸ್ಯ ಭಂಗ ಗೊಳಿಸುವ ಸಲುವಾಗಿ ಶಸ್ತ್ರಾಸ್ತ್ರ ಗಳನ್ನು ಸಂಗ್ರಹಿಸಿದ್ದ ಎಂದು ಹೇಳಿಕೆ ತಿಳಿಸಿದ್ದು, ದೇಶದ ಆಂತರಿಕ ಮತ್ತು ಬಾಹ್ಯ ಭದ್ರತಾ ಸ್ಥಿತಿಯ ಕುರಿತ ಚಿತ್ರಗಳನ್ನು ತೆಗೆದುಕೊಂಡು ಮಾಹಿತಿಯನ್ನು ಸಂಗ್ರಹಿಸಿ ಪಾಕಿಸ್ತಾನದ ಐಎಸ್‌ಐನೊಂದಿಗೆ ಹಂಚಿಕೊಳ್ಳುವ ಪ್ರಮಾದವನ್ನೇ ಮಾಡಿದ್ದಾನೆ. ಆರೋಪಿ ವಾಟ್ಸಾಪ್ ಮೂಲಕ ಫೋಟೋಗಳನ್ನು ಹಂಚಿಕೊಳ್ಳುತ್ತಿದ್ದ. ಪಾಕಿಸ್ತಾನದ ಗುಪ್ತಚರ ಸಂಸ್ಥೆ ಕೇಳಿದ ಮಾಹಿತಿಯನ್ನು ಸಂಗ್ರಹಿಸಿ ರವಾನಿಸುತ್ತಿದ್ದ. ಭಾರತದಲ್ಲಿ ಭದ್ರತೆಗೆ ಸಂಬಂಧಿಸಿದ ಸ್ಥಳಗಳ ಛಾಯಾಚಿತ್ರಗಳು ಮತ್ತು ವಾಟ್ಸಾಪ್ ಸಂದೇಶಗಳನ್ನು ಐಎಸ್‌ಐ ಮತ್ತು ಪಾಕಿಸ್ತಾನದ ಭಯೋತ್ಪಾದಕ ಸಂಘಟನೆಗಳಿಗೆ ಕಳುಹಿಸಲಾಗಿದೆ ಎಂದು ಉತ್ತರ ಪ್ರದೇಶದ ಎಟಿಎಸ್ ತಿಳಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಬಡ ಕಲಾವಿದರಿಗೆ ಪ್ರೋತ್ಸಾಹ ಧನ ಕೊಡಲು ಅನುದಾನವಿಲ್ಲ

— ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಬೇಸರ —

ಮೈಸೂರು, ಫೆ.4(ಎಸ್‌ಪಿಎನ್)– ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ರಾಜ್ಯ ಸರ್ಕಾರ ಅಲ್ಪ ಮೊತ್ತದ ಅನುದಾನ ನೀಡುತ್ತಿದೆ. ಇದರಿಂದ ಜಿಲ್ಲಾ ಮತ್ತು ತಾಲೂಕು ಮಟ್ಟದ ಬಡ ಕಲಾವಿದರಿಗೆ ಪ್ರೋತ್ಸಾಹ ಧನ ನೀಡಲು ಅನುದಾನವಿಲ್ಲದಂತಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ರಘುನಾಥಲಕ್ಷ್ಮೀಬಾಯಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಶ್ರೀ ಮೌನೇಶ ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಸುಗಮ ಸಂಗೀತ ಹಾಗೂ ಹಿರಿಯ ಕಲಾವಿದರಿಗೆ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಿಂಗಾಪುರ, ಜಪಾನ್ ಸೇರಿದಂತೆ ಏಷ್ಯಖಂಡ ರಾಷ್ಟ್ರಗಳಿಗೆ ಆಗಾಗ ಪ್ರವಾಸ ಕೈಗೊಳ್ಳುತ್ತೇನೆ. ಆ ಸಂದರ್ಭದಲ್ಲಿ ಆಯಾಯ ದೇಶದ ಸಾಂಸ್ಕೃತಿಕ ಚಟುವಟಿಕೆಗಳು ಆಯೋಜಿಸುವ ಕಾರ್ಯಕ್ರಮಗಳಿಗೆ ಹೋಗುತ್ತೇನೆ. ಆ ಸಂದರ್ಭದಲ್ಲಿ ಅಲ್ಲಿನ ಸಂಗೀತ ಕೇಳಿದಾಗ ಆ ಸಂಗೀತ ಸಂಯೋಜನೆ ಕರ್ನಾಟಕ ಸಂಗೀತದ ಧಾಟಿಯಲ್ಲಿರುತ್ತದೆ. ಹಾಗಾಗಿ ಕರ್ನಾಟಕ ಸಂಗೀತ ಪ್ರಕಾರ ವಿಶ್ವದಲ್ಲೇ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ವಿದೇಶಗಳಲ್ಲಿ ಅಲ್ಲಿನ ಕಲೆ, ಸಾಹಿತ್ಯ, ಸಂಗೀತ, ನೃತ್ಯ ಸೇರಿದಂತೆ ಇತರೆ ಕಲೆಗಳಲ್ಲಿ ತೊಡಗಿಸಿಕೊಳ್ಳುವ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ಇರುತ್ತದೆ. ಅದು ಎಷ್ಟರ ಮಟ್ಟಿಗೆ ಎಂದರೆ, ಸರ್ಕಾರಕ್ಕೆ ಮತ್ತೆ ತೆರಿಗೆ ಕಟ್ಟುವಷ್ಟು ಅನುದಾನ ಸಿಗುತ್ತದೆ. ಆದರೆ, ನಮ್ಮಲ್ಲಿ ಕಲೆ, ಸಾಹಿತ್ಯ ಹಾಗೂ ಲಲಿತಾ ಕಲೆಗಳಲ್ಲಿ ತೊಡಗಿಸಿಕೊಂಡ ಕಲಾವಿದರಿಗೆ ಸರ್ಕಾರ ನೀಡುತ್ತಿರುವ ಅನುದಾನ ಯಾವುದಕ್ಕೂ ಸಾಕಾಗುತ್ತಿಲ್ಲ. ಈ ವರ್ಷ ಬಿಡುಗಡೆಯಾದ ಅನುಧಾನ ಹಿಂದಿನ ವರ್ಷದಲ್ಲಿ ನಡೆದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪಾವತಿಸುವಷ್ಟು ಮಾತ್ರ. ಇದು ನಮ್ಮ ಸರ್ಕಾರಗಳು ಕಲೆಗೆ ನೀಡುತ್ತಿರುವ ಗೌರವ ಎಂದು ಕುಟುಕಿದರು.

ಇತ್ತೀಚೆಗೆ ಯುರೋಪ್ ಪ್ರವಾಸ ಕೈಗೊಂಡಿದ್ದೆ. ಆ ವೇಳೆ ಮೆಲ್ಬೋರ್ನ್ ನಗರದಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಓರ್ವ ಕಲಾವಿದನಿಗೆ ಗೌರವ ಪೂರಕವಾಗಿ 5 ಡಾಲರ್ ಪ್ರೋತ್ಸಾಹ ಧನ ನೀಡಲು ಮುಂದಾಗಿದ್ದೆ. ಆಗ ಆ ಕಲಾವಿದರೂ ಸರ್ಕಾರವೇ ನಮಗೆ ಕೈತುಂಬಾ ಹಣ ನೀಡುತ್ತದೆ. ಇಲ್ಲಿನ ಜನರು ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಾರೆ ಎಂದು ತಿಳಿಸಿದ ಪ್ರಸಂಗವನ್ನು ವಿವರಿಸಿದರು.

ನಮ್ಮ ದೇಶದಲ್ಲಿ ಸಂಸ್ಕೃತಿಗೆ ಹೆಚ್ಚಿನ ಆದ್ಯತೆಯನ್ನು ಸರ್ಕಾರ ನೀಡುತ್ತಿದೆ. ಆದರೆ, ಅದಕ್ಕೆ ಬೇಕಾದ ಅನುದಾನ ಸರಿಯಾಗಿ ಒದಗಿಸುತ್ತಿಲ್ಲ. ಪ್ರಾಥಮಿಕ ಶಾಲಾ ಹಂತದಿಂದಲೇ ವಿದ್ಯಾರ್ಥಿಗಳಿಗೆ ಸಂಗೀತ ಹಾಗೂ ಕಲೆಗಳನ್ನು ಪರಿಚಯಿಸಿದರೆ ಬೌದ್ಧಿಕ ವಿಕಸನಕ್ಕೆ ನಾಂದಿಯಾಗುತ್ತದೆ. ಹಾಗಾಗಿ ಮಕ್ಕಳಿಗೆ ಚಿಕ್ಕವಯಸ್ಸಿನಿಂದಲೇ ಸಂಗೀತ, ನೃತ್ಯ, ಕಲೆ ಹಾಗೂ ನಾಟಕ ಅಭಿರುಚಿ ಬೆಳೆಸಿದರೆ, ಸಮಾಜದ ಸ್ವಾಸ್ತ್ಯ ಹಾಗೂ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೂ ನಾಂದಿಯಾಗುತ್ತದೆ ಎಂದರಲ್ಲದೆ, ಮೈಸೂರಿನಲ್ಲಿ ಕಲೆ, ಸಾಹಿತ್ಯ, ನಾಟಕ, ನೃತ್ಯ, ಚಿತ್ರಕಲೆ ಸೇರಿದಂತೆ ಎಲ್ಲಾ ರಂಗಕ್ಕೂ ಹೆಚ್ಚಿನ ಅವಕಾಶ ಸಿಗಲು ಮೈಸೂರು ಮಹಾರಾಜರ ಪ್ರೋತ್ಸಾಹವೇ ಕಾರಣ. ಈ ನಿಟ್ಟಿನಲ್ಲಿ 'ಸಾಂಸ್ಕೃತಿಕ ನಗರಿ ಮೈಸೂರು' ಬಿರುದು ಅವಿಸ್ಮರಣೀಯ ಎಂದರು.

ಈ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರಾದ ಮಡಿಕೇರಿ ನಾಗೇಂದ್ರ ಹಾಗೂ ಸಿ.ಅಶ್ವಥ್ ಅವರ ಸ್ಮರಣಾರ್ಥ ಸುಗಮ ಸಂಗೀತ ಕಾರ್ಯಕ್ರಮ ಆಯೋಜಿಸಿರುವುದು ಉತ್ತಮ ಸಂಗತಿ. ಹಿರಿಯ ಕಲಾವಿದರನ್ನು ನೆನೆದರೆ, ಇಂದಿನ ಮಕ್ಕಳು ಕಲೆಯಲ್ಲಿ ತೊಡಗಿಸಿಕೊಳ್ಳಲು ಉತ್ಸುಕರಾಗಿರುತ್ತಾರೆ ಎಂದರು.

ಈ ವೇಳೆ ಹಿರಿಯ ಕಲಾವಿದೆ ಇಂದ್ರಾಣಿ ಅನಂತರಾಮು ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜು, ವಿಪ್ರಮುಖಂಡ ಕೆ.ರಘುರಾಂ ವಾಜಪೇಯಿ, ಶ್ರೀ ಮೌನೇಶ ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ಉಮಾಪತಿ ಇನ್ನಿತರರು ಉಪಸ್ಥಿತರಿದ್ದರು.


ಶ್ರೀ ಮೌನೇಶ ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ್ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಹಿರಿಯ ಕಲಾವಿದರನ್ನು ಸನ್ಮಾನಿಸಲಾಯಿತು.



ಬಿಜೆಪಿ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ ಅವರನ್ನು ಬಿಜೆಪಿ ಎಸ್‌ಟಿ ಮೋರ್ಚಾ ಪದಾಧಿಕಾರಿಗಳು ಅಭಿನಂದಿಸಿದರು. ಈ ಸಂದರ್ಭದಲ್ಲಿ ಟೆನಿಸ್ ಗೋಪಿ, ನಜರ್‌ಬಾದ್ ನಾರಾಯಣ, ಮಾರ್ಕೆಟ್ ರಮೇಶ್, ಮದಕರಿ ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಅಜ್ಜ (ಮೊಮ್ಮಗನಿಗೆ) : ನಿಮ್ಮ ಟೀಚರ್ ಬರ್ತಾ ಇದ್ದಾರೆ, ಹೋಗು ಬಚ್ಚಿಟ್ಟುಕೊ...!

ಮೊಮ್ಮಗ : ಅಜ್ಜ ಮೊದಲು ನೀನು ಹೋಗಿ ಬಚ್ಚಿಟ್ಟುಕೊ. ನೀನು ಸತ್ತು ಹೋಗಿದ್ದೀಯಾ ಅಂತ ಹೇಳಿ ಒಂದು ವಾರದಿಂದ ನಾನು ಸ್ಕೂಲ್‌ಗೆ ಹೋಗಿಲ್ಲಾ!!

ಮೈಸೂರು ಮಿತ್ರ

ಸೋಮವಾರ, 5 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಹಣಕ್ಕೂ, ಗುಣಕ್ಕೂ ಎರಡೇ ವ್ಯತ್ಯಾಸ, ಹಣ ಇದ್ದವರ ಜೊತೆಗೆ ಮನುಷ್ಯರು ಹಿಂಬಾಲಿಸುತ್ತಾರೆ, ಗುಣ ಇದ್ದವರ ಜೊತೆಗೆ ದೇವರು ಹಿಂಬಾಲಿಸುತ್ತಾರೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಇದ್ದರೆ ನಾನಾ ಚಿಂತೆ, ಇಲ್ಲದಿದ್ದರೆ ಒಂದೇ ಚಿಂತೆ'

ನಿಮ್ಮ ಪತ್ರಗಳು

■ ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ಔಷಧಗಳು ಲಭ್ಯವಾಗಲಿ

ಮಾನ್ಯರೆ,

ತತ್ವಜ್ಞಾನಿಗಳ ಪ್ರಕಾರ ಸರ್ಕಾರಗಳು ಶಿಕ್ಷಣ ಮತ್ತು ಆರೋಗ್ಯವನ್ನು ಉಚಿತವಾಗಿ ನೀಡಿದರೆ ಅದು ದೇಶಕ್ಕೆ ಹೊರೆಯಾಗದೆ ಸಂಪತ್ತಾಗಿ ಮಾರ್ಪಾಡುತ್ತದೆ. ಪ್ರಸ್ತುತ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲವೊಂದು ಔಷಧಗಳು ಮಾತ್ರ ದೊರೆಯುತ್ತದೆ ಮತ್ತು ಕೆಲವೊಂದು ಔಷಧಗಳನ್ನು ಹೊರಗಡೆ ಮೆಡಿಕಲ್ ಅಂಗಡಿಗಳಲ್ಲಿ ಕೊಳ್ಳಲು ವೈದ್ಯರು ಬರೆದುಕೊಡುವುದು ನ್ಯಾಯಸಮ್ಮತವಲ್ಲದಾಗಿದೆ.

ಔಷಧಗಳ ಬೆಲೆ ಹೆಚ್ಚಾಗಿದ್ದು, ಅದೇ ಔಷಧಗಳನ್ನು ವೈದ್ಯರು ಸೂಚಿಸುವುದು ಸರಿಯಾದ ಕ್ರಮವಲ್ಲ. ಇನ್ನೂ ಕೆಲವು ಆಸ್ಪತ್ರೆಗಳಲ್ಲಿ ತಮಗೆ ಬೇಕಾದ ಮೆಡಿಕಲ್ ಶಾಪ್‌ಗಳಿಗೆ ಮಾತ್ರ ಅರ್ಥವಾಗುವಂತೆ ಔಷಧ ಚೀಟಿಗಳನ್ನು ಬರೆಯುವುದರ ಮೇಲೆ ಕಡಿವಾಣ ಅಗತ್ಯವಾಗಿದೆ.

ಸರ್ಕಾರದ ಆರೋಗ್ಯ ಇಲಾಖೆಯು ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯವಾಗಿ ಬೇಕಾದ ಔಷಧಗಳ ಪೂರೈಕೆಯ ಬಗ್ಗೆ ಗಮನಹರಿಸಬೇಕು ಮತ್ತು ಒಂದೇ ನಿರ್ದಿಷ್ಟ ಕಂಪನಿಯ ಮಾತ್ರೆಯ ಬದಲು ಅದೇ ಗುಣಮಟ್ಟದ ಕಡಿಮೆ ದರದ, ಲಭ್ಯವಿರುವ ಮಾತ್ರೆಗಳನ್ನು ಸೂಚಿಸುವಂತೆ ಸರ್ಕಾರ ಸುತ್ತೋಲೆ ಹೊರಡಿಸಬೇಕು.

ಹಲವಾರು ಔಷಧಗಳ ಮೂಲ ಬೆಲೆ ಕಡಿಮೆಯಿದ್ದು, ಮುದ್ರಿತ ಬೆಲೆಯನ್ನು ಮೆಡಿಕಲ್ ಶಾಪ್‌ಗಳಲ್ಲಿ ಪಡೆಯಲಾಗುತ್ತದೆ. ಅದ್ದರಿಂದ ಸರ್ಕಾರಗಳು ಮುದ್ರಿತ ಬೆಲೆಗಳನ್ನು ಪರಿಷ್ಕರಿಸಲು ಔಷಧ ಅಂಗಡಿಗಳಿಗೆ ಸೂಚಿಸಬೇಕು. ಇತ್ತೀಚೆಗೆ ಕೇಂದ್ರ ಸರ್ಕಾರ ಜನೌಷಧ ಕೇಂದ್ರಗಳನ್ನು ತೆರೆಯುವ ಮೂಲಕ ಜನಸಾಮಾನ್ಯರಿಗೆ ಅನುಕೂಲವಾಗಿದ್ದು, ಆರೋಗ್ಯ ಇಲಾಖೆಯ ಅಧಿಕಾರಿಗಳು ಕಾಲ ಕಾಲಕ್ಕೆ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಿ ವೈದ್ಯರುಗಳು ಔಷಧಗಳಿಗಾಗಿ ಜನರು ಜನೌಷಧ ಕೇಂದ್ರಗಳನ್ನು ಸೂಚಿಸುವಂತೆ ಸಲಹೆ ನೀಡಬೇಕು.

ಕೇಂದ್ರ ಸರ್ಕಾರದ ಪ್ರಾಯೋಜಕತ್ವದ ಜನೌಷಧ ಕೇಂದ್ರಗಳು ಕೇವಲ ನಗರ ಪ್ರದೇಶಗಳಲ್ಲಿ ಸ್ಥಾಪನೆಯಾಗಿದ್ದು, ಪ್ರತಿಯೊಂದು ಸರ್ಕಾರಿ ಆಸ್ಪತ್ರೆಗಳ ಬಳಿ ಜನೌಷಧ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಜನರ ಆರೋಗ್ಯಕ್ಕೆ ಮಹತ್ವ ನೀಡಬೇಕು ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಜನಸಾಮಾನ್ಯರಿಗೆ ಎಲ್ಲಾ ಆರೋಗ್ಯ ಸೌಲಭ್ಯಗಳು ಉಚಿತವಾಗಿ ದೊರೆಯವ ಯೋಜನೆಗಳನ್ನು ಜಾರಿಗೆ ತರಬೇಕೆಂದು ದೇಶದ ಎಲ್ಲಾ ಜನತೆಯ ಪರವಾಗಿ ಆಗ್ರಹಿಸೋಣ.

– ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

■ ದುರ್ವಾಸನೆಯಿಂದ ಮುಕ್ತಿ ನೀಡಿ

ಮಾನ್ಯರೆ,

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿರುವ ಹೋಟೆಲ್‌ನವರು ಫುಟ್‌ಪಾತ್‌ನಲ್ಲೇ ಪ್ರತಿನಿತ್ಯ ಮೀನು ಹುರಿಯುತ್ತಿರುವುದರಿಂದ ಅಕ್ಕಪಕ್ಕದ ಬೀದಿಗೂ ದುರ್ನಾತ ಬೀರುತ್ತಿದ್ದು, ವಾಕರಿಕೆ ಬರುತ್ತಿದೆ. ಫುಟ್‌ಪಾತ್‌ನಲ್ಲಿ ನಿಯಮಬಾಹಿರವಾಗಿ ಮೀನು ಹುರಿಯುತ್ತಿದ್ದರೂ ನಗರಪಾಲಿಕೆ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೋ ಅಥವಾ ಲಂಚದ ಆಮಿಷಕ್ಕೆ ಒಳಗಾಗಿದ್ದಾರೋ ತಿಳಿಯುತ್ತಿಲ್ಲ. ಸಂಬಂಧಪಟ್ಟವರು ಈಗಲಾದರೂ ಇತ್ತ ಗಮನಹರಿಸಿ ರಸ್ತೆಬದಿ ಮೀನು ಹುರಿಯುವುದನ್ನು ತಡೆಗಟ್ಟಿದರೆ ಜನರಿಗೆ ವಾಸನೆಯಿಂದ ಮುಕ್ತಿ ನೀಡಿದಂತಾಗುತ್ತದೆ.

– ಎ.ಆರ್.ಕೌಸಲ್ಯ, ಮೈಸೂರು.

■ ಕಾಂಗ್ರೆಸ್ ಮತ್ತೆ ದುಡುಕಿದ್ದು ಎಲ್ಲಿ?

ಮಾನ್ಯರೆ,

ಪಕ್ಷಗಳ ಭಿನ್ನಾಭಿಪ್ರಾಯ ಏನೇ ಇರಲಿ, ನಮ್ಮ ಜನ ಸಹಿಸಬಲ್ಲರು. ಆದರೆ ಅಂತರ್ಯದ ಭಾವಗಳಿಗೆ ಚುಚ್ಚ ಹೊರಟರೆ ಯಾರೂ ಸುಮ್ಮನಿರುವುದಿಲ್ಲ. ಅದೂ ತಮ್ಮ ಸನಾತನ ಧರ್ಮ, ನಂಬಿಕೆಗಳು, ಆಚಾರ ವಿಚಾರಗಳನ್ನು ಕೆಣಕಿದರೆ ಜನ ತಿರುಗಿಬೀಳುವುದು ಸಹಜ. ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ ಈ ಸೂಕ್ಷ್ಮವೂ ಅರ್ಥವಾಗಲಿಲ್ಲವೆ? ಇದು ಯಾವ ಹಠ? 'ರಾಮ' 'ಶಿವ' ಹೆಸರಿಗಂಟಿದ್ದರೆ ಆಯಿತೆ? 'ದೀಪ 'ಎಂದು ಹೆಸರಿಟ್ಟು ಕೊಂಡವರು ಕತ್ತಲಲ್ಲೇ ನಡೆದಾಡಬಹುದಲ್ಲವೆ? ಹಲವಾರು ವರ್ಷಗಳ ಶ್ರಮದ ಯತ್ನವಿದು. ಆಗ ಸಿದ್ಧರಾಮಯ್ಯನವರು ಯಾರು? ಡಿ.ಕೆ.ಯಾರು? ಇನ್ನು ಮೊಯಿಲಿಯವರ ಅಜ್ಞಾನಕ್ಕೆ ಏನು ಹೇಳಬೇಕು? "ಮಹಾಸ್ವಾಮಿ ನಮ್ಮ ದೇಹಕ್ಕೆ ಬೇಕಾಗಿರುವುದು ಕೇವಲ ಗ್ಲೂಕೋಸ್ ಅಷ್ಟೆ. ಎಳನೀರಿನಲ್ಲಿ ಅದು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುತ್ತದೆ. ಮೋದಿಜಿ ಅವರಿಗೆ ಅಷ್ಟು ಸಾಕಾಗಿರುತ್ತದೆ. ಮಹಾಕಾವ್ಯ ಬರೆದು ಪ್ರಶಸ್ತಿ ಪಡೆದಿರುವ ತಮಗೆ ಜೈನ ಧರ್ಮದವರ 'ಸಲ್ಲೇಖನ' ವ್ರತ ತಿಳಿದಿರಬೇಕಲ್ಲಾ!? 48 ದಿನಗಳ ಈ ವ್ರತದಲ್ಲಿ ಅವರು ಕಟ್ಟುನಿಟ್ಟಾಗಿ ನೀರನ್ನೂ ಕುಡಿಯದೆ ಈ ವ್ರತ ಆಚರಿಸುತ್ತಾರೆ! ಬದುಕಿಯೂ ಇರುತ್ತಾರೆ ಸ್ವಾಮಿ! ಇದು ಯಾರನ್ನೋ ಮೆಚ್ಚಿಸಲು ಕೈಗೊಳ್ಳುವ ವ್ರತವಲ್ಲ. ದೃಷ್ಟಿಯಂತೆ ಸೃಷ್ಟಿ, ಇದನ್ನು ತಳ್ಳಿಹಾಕದಿರಿ. ವ್ಯಂಗ್ಯ ಹುಡುಕಲು ಹೊರಟರೆ ಇಡೀ ನಿಮ್ಮ ಜೀವನ ಇಷ್ಟೇ. ಇಲ್ಲೇ ವಿಶಾಲಬುದ್ಧಿ ತೋರಿ ದೊಡ್ಡಗುಣದಿಂದ ನಡೆದುಕೊಂಡಿದ್ದರೆ ಈ ಕಾಂಗ್ರೆಸ್ ಪಕ್ಷಕ್ಕೂ ಒಂದು ಸ್ಥಾನ ಮಾನ ಲಭ್ಯವಾಗುತ್ತಿತ್ತು.

– ಭಾಗ್ಯ ಕೃಷ್ಣಮೂರ್ತಿ, ಪತ್ರಕರ್ತೆ ಲೇಖಕಿ.

■ ಪ್ರೋತ್ಸಾಹ ಧನಕ್ಕೆ ಅರ್ಜಿ ಹಾಕಲು ಮತ್ತೊಮ್ಮೆ ಅವಕಾಶ ಕಲ್ಪಿಸಿ

ಮಾನ್ಯರೇ,

ಸ್ನಾತಕೋತ್ತರ ಪದವಿ ಮುಗಿಸಿರುವ 2023–24ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನೀಡುವ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನಿಸಲಾಗಿತ್ತು. ಆದರೆ ಫಲಿತಾಂಶ ತಡವಾಗಿ ಪ್ರಕಟವಾದ ಕಾರಣ ಕೆಲವು ವಿದ್ಯಾರ್ಥಿಗಳು ಅರ್ಜಿಗಳನ್ನು ಹಾಕಲು ಸಾಧ್ಯವಾಗಿರುವುದಿಲ್ಲ. ಡಿಸೆಂಬರ್ 31,2023 ಅರ್ಜಿಗಳನ್ನು ಹಾಕಲು ಕೊನೆಯ ದಿನಾಂಕವಾಗಿತ್ತು. ಫಲಿತಾಂಶ ಜನವರಿ ತಿಂಗಳಿನಲ್ಲಿ ಪ್ರಕಟವಾಗಿರುತ್ತದೆ. ಹೀಗಿದ್ದಾಗ ಹೇಗೆ ಅರ್ಜಿ ಹಾಕಲು ಸಾಧ್ಯ? ಇದರಿಂದಾಗಿ ಎಷ್ಟೋ ವಿದ್ಯಾರ್ಥಿಗಳು ಪ್ರೋತ್ಸಾಹ ಧನದಿಂದ ವಂಚಿತರಾಗಿದ್ದಾರೆ. ಹಾಗಾಗಿ ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಹಾಕಲು ಅವಕಾಶ ಮಾಡಿ ಕೊಡಬೇಕಾಗಿ ಸಂಬಂಧ ಪಟ್ಟ ಅಧಿಕಾರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

– ಐಶ್ವರ್ಯ, ಚಟ್ನಹಳ್ಳಿ, ವಿದ್ಯಾರ್ಥಿನಿ



ಜಿ.ಎಲ್. ತ್ರಿಪುರಾಂತಕ

ಮೊಬೈಲ್ ನಂ.: 96866–77284

ಬೆರಗು

ಸಹಜ ಅಂತರ ಸಾಮರಸ್ಯಕ್ಕೆ ಸರಿದಾರಿ

ಪದ ತಾಂಬೂಲ: ಅಸಹಜ ಅಂತರ ಅಮೂಲ್ಯ ಸ್ನೇಹಕ್ಕೆ ಸಂಚಕಾರ

ಮನುಷ್ಯನಿಗೆ ಅರಿಷಡ್ವರ್ಗಗಳಲ್ಲಿ ಒಂದಾದ ಮತ್ಸರ ಎಂಬುದು ಅನೇಕ ಸ್ನೇಹ ಸಂಬಂಧಗಳನ್ನು ಹಾಳುಗೆಡ ವಿದೆ. ರಾಮಾಯಣ ಹಾಗೂ ಮಹಾ ಭಾರತದಲ್ಲಿ ಮತ್ಸರಕ್ಕೆ ಸಂಬಂಧಿಸಿದಂತೆ ಅನೇಕ ದೃಷ್ಟಾಂತಗಳಿವೆ. ದೂರದ ಸಂಬಂಧಿಗಳಿರಲಿ ರಕ್ತಸಂಬಂಧಿ ಗಳೇ ತಮ್ಮ ಹತ್ತಿರದವರ ಏಳಿಗೆಯನ್ನು ಸಹಿಸದೆ, ಏನಾದರೂ ಸಾಧನೆ ಮಾಡಿದರೆ ಅದರಲ್ಲಿ ಏನಾದರೂ ನ್ಯೂನತೆ ಹುಡುಕುವ ಹುಳುಕು ಮನಸ್ಸನ್ನು ಹೊಂದಿರು ತ್ತಾರೆ. ಸಂಬಂಧಿ ಸಾಧಕನಿಗೆ ಸನ್ಮಾನ ಮಾಡುವುದು, ಅಭಿನಂದಿಸುವುದು ಬೇಡ, ಅವರು ಸುಮ್ಮನಿದ್ದರೆ ಅದೇ ಸನ್ಮಾನ ಎನಿಸಿಬಿಡುತ್ತದೆ. 'ಅಪಪ್ರಚಾರ ಎಂಬುದು ಕೈಲಾಗದವರ ಅಸ್ತ್ರ' ಎಂಬ ಮಾತಿನಂತೆ ತಾವು ಏನೂ ಸಾಧಿಸದಿದ್ದರೂ, ಸಾಧನೆ ಮಾಡಿದ ತಮ್ಮ ಬಂಧುವಿನ ಕುರಿತು ಅಪಪ್ರಚಾರ ಮಾಡುತ್ತಾ ತಮ್ಮ ಕೀಳುಮಟ್ಟದ ವ್ಯಕ್ತಿತ್ವವನ್ನು ಅನಾವರಣಗೊಳಿಸಿಬಿಡುತ್ತಾರೆ.



'ನಡುವೆ ಅಂತರವಿರಲಿ' ಎಂಬ ಸಾಲನ್ನು ಅನೇಕ ವಾಹನಗಳ ಹಿಂದೆ ಗಮನಿಸಿರಬಹುದು. ಈ ಸಾಲನ್ನು ಓದಿದಾಗ ಇದೊಂದು ಸಾಧಾರಣ ಎರಡು ಪದಗಳ ವಾಕ್ಯ, ವಾಹನಗಳು ಒಂದರ ಹಿಂದೆ ತೆರಳುವಾಗ ನಿರ್ದಿಷ್ಟ ಅಂತರ ಕಾಪಾಡಿಕೊಂಡು ಆಗುವ ಅಪಘಾತವನ್ನು ತಪ್ಪಿಸುವ ಎಚ್ಚರಿಕೆಯ ಸಾಲು ಎಂದು ಭಾವಿಸುತ್ತೇವೆ. ಆದರೆ ಈ ಸಾಲನ್ನು ಮನುಷ್ಯನ ಬದುಕಿನ ಅನೇಕ ವಿಚಾರಗಳಿಗೆ ಅನ್ವಯಿಸಿಕೊಂಡರೆ ಬದುಕಿನಲ್ಲಿ ಆಗಬಹುದಾದ ಅನಾಹುತಗಳನ್ನು ತಪ್ಪಿಸಬಹುದಾದ ಸಾಧ್ಯತೆ ಇರುತ್ತದೆ. ರಕ್ತ ಸಂಬಂಧ, ಸ್ನೇಹ ಸಂಬಂಧ ಮುಂತಾದ ವಿಚಾರಗಳಲ್ಲಿ ಇತಿಮಿತಿ ತಿಳಿಯದೆ, ಅಂತರದ ಅರಿವಿಲ್ಲದೆ ಅನೇಕ ಅವಾಂತರಗಳಿಗೆ ಅವಕಾಶ ಮಾಡಿಕೊಡುವ ಸಾಧ್ಯತೆ ಇರುತ್ತದೆ. ಎಲ್ಲದಕ್ಕೂ ಒಂದು ಮಿತಿ, ಎಲ್ಲೆ, ಅಂತರವಿದ್ದರೆ ಅದಕ್ಕೆ ಅರ್ಥ ಲಭಿಸುತ್ತದೆ. ತಾಯಿ–ತಂದೆ, ಸಹೋದರ–ಸಹೋದರಿ, ಪತಿ–ಪತ್ನಿ, ಸ್ನೇಹಿತರು, ಅಧಿಕಾರಿ–ಸಹೋದ್ಯೋಗಿ..... ಹೀಗೆ ಅನೇಕ ಸಂಬಂಧಗಳಲ್ಲಿ ಒಂದು ಆರೋಗ್ಯಕರ ಅಂತರ ಕಾಪಾಡಿಕೊಳ್ಳುವುದು ಅಗತ್ಯವಾಗಿದೆ. ಎಲ್ಲೆ ಮೀರಿದರೆ ಅನರ್ಥವಾಗಿಬಿಡುವ ಸಂಭವವಿರುತ್ತದೆ. ಪ್ರತಿಯೊಂದು ಸಂಬಂಧಕ್ಕೂ ಅದರದೆ ಆದ ವ್ಯಾಪ್ತಿ ಇರುತ್ತದೆ. ಸಂಬಂಧಗಳ ನಿರ್ವಹಣೆಯಲ್ಲಿ ವ್ಯಾಪ್ತಿ ಮೀರಿದಲ್ಲಿ ಕಷ್ಟ ಪ್ರಾಪ್ತಿಯಾಗುವುದರಲ್ಲಿ ಅನುಮಾನವೇ ಇಲ್ಲ. ಆದ್ದರಿಂದ ಸಹಜ ಅಂತರ ಕಾಪಾಡಿಕೊಂಡಲ್ಲಿ ಸಾಮರಸ್ಯ ಉಳಿಯುತ್ತದೆ. ಇಲ್ಲವಾದಲ್ಲಿ ನಿತ್ಯವೂ ನೆಮ್ಮದಿ, ಸಮಾಧಾನಕ್ಕಾಗಿ ಹುಡುಕಾಡಬೇಕಾದ ಅನಿವಾರ್ಯತೆ ಉಂಟಾಗುತ್ತದೆ.

ಬದುಕೆಂಬ ಯಾತ್ರೆಯಲ್ಲಿ ನಮ್ಮೊಟ್ಟಿಗೆ ಪ್ರಯಾಣ ಮಾಡುವವರು ಸಾವಿರಾರು ಜನರಿರುತ್ತಾರೆ. ಆದರೆ ಎಲ್ಲರನ್ನು ಅತ್ಯಂತ ಹತ್ತಿರದಲ್ಲಿ ಇರಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ವಿನಾಕಾರಣ ದೂರ ತಳ್ಳಲೂ ಸಹ ಸಾಧ್ಯವಿಲ್ಲ. ಹಿರಿಯರು ಒಂದು ಮಾತು ಹೇಳುತ್ತಾರೆ, 'ಯಾರ್ಯಾರನ್ನು ಎಲ್ಲೆಲ್ಲಿ ಇರಿಸಬೇಕು ಎಂದು ತಿಳಿದು ಅಲ್ಲಲ್ಲಿ ಇರಿಸಿದರೆ ಒಳ್ಳೆಯದು' ಎಂದು. ಈ ಮಾತು ಅಕ್ಷರಶಃ ಸತ್ಯ. ಪ್ರೀತಿ, ಸ್ನೇಹ, ವಿಶ್ವಾಸದ ಭಾವಾತಿರೇಕದಲ್ಲಿ ಮೈಮರೆತು ವೈಯಕ್ತಿಕ ಗಡಿಯೊಳಗೆ ಅನ್ಯರು ಹೊಕ್ಕಲು ಬಿಟ್ಟರೆ ಅದರಿಂದ ಎಷ್ಟು ಒಳ್ಳೆಯದಾಗುತ್ತದೆ ಎಂದು ಭಾವಿಸಿರುತ್ತೇವೆಯೋ ಅದಕ್ಕಿಂತ ತದ್ವಿರುದ್ಧವಾಗಿ ಕೆಟ್ಟದೂ ಆಗಿಬಿಡಬಹುದು. ಆದ್ದರಿಂದ ಪರಿಚಯದವರೇ ಆದರೂ ನಮ್ಮ ವ್ಯಕ್ತಿತ್ವದ ಪರಿಧಿಯೊಳಗೆ ಅವರನ್ನು ಸೇರಿಸಿಕೊಳ್ಳುವ ಮುನ್ನ ಹತ್ತು ಸಾರಿ ಯೋಚಿಸಬೇಕು. ಒಮ್ಮೆ ಸೇರಿಸಿಕೊಂಡು ಹತ್ತು ಸಾರಿ ಚಿಂತಿಸುವಂತಾಗಬಾರದು.

ಪ್ರತಿನಿತ್ಯದ ಬದುಕಿನಲ್ಲಿ ಒಬ್ಬರು ಬಹುಸಮಯವನ್ನು ಅನೇಕರ ಜೊತೆ ಕಳೆಯುತ್ತಾರೆ. ನಿರ್ದಿಷ್ಟ ಸಮಯದಲ್ಲಿ ಅವರೊಟ್ಟಿಗೆ ಇರುವಾಗ ಅವರು ಅಡಿಕ್ಟ್ ಆಗಿಬಿಡುತ್ತಾರೆ. ಆ ಸಮಯಕ್ಕೆ ಅವರು ಸಿಗದೇ ಇರುವಾಗ ಏನೋ ಒಂದನ್ನು ಮಿಸ್ ಮಾಡಿಕೊಂಡ ಭಾವ ಮೂಡುತ್ತದೆ. ಪ್ರತಿನಿತ್ಯ ಪಾರ್ಕಿಗೆ ವಾಕ್ ಮಾಡಲು ಸಾಥ್ ಕೊಡುತ್ತಿದ್ದ ಹಿತೈಷಿಗಳೊಬ್ಬರು ಕಾರಣಾಂತರಗಳಿಂದ ಒಂದೆರಡು ದಿನ ಬರದೇ ಇದ್ದಲ್ಲಿ ಅವರು ಇಲ್ಲದಿದ್ದರೆ ವಾಕಿಂಗ್ ನೀರಸ ಎನಿಸಿಬಿಡಬಹುದು. ಅವರನ್ನು ಮತ್ತೆ ಮತ್ತೆ ಬಯಸುವ, ಅವರಿಗೆ ಫೋನ್ ಮಾಡಿ ವಾಕಿಂಗ್‌ಗೆ ಬರುವಂತೆ ಕೋರೋಣ ಅನಿಸಿಬಿಡಬಹುದು. ಆದರೆ ಕಾಲಕ್ರಮೇಣ ಎಲ್ಲವೂ ಸರಿಯಾಗುತ್ತದೆ. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ 'Out of Sight, Out of Mind' ಎಂದು ಹಾಗೆ ನಮ್ಮ ದೃಷ್ಟಿಗೆ ಅನೇಕ ದಿನಗಳವರೆಗೆ ಬೀಳದೆ ಇದ್ದಲ್ಲಿ ಅವರು ಕ್ರಮೇಣ ಮರತೇ ಹೋಗಿಬಿಡುವ ಸಾಧ್ಯತೆ ಇರುತ್ತದೆ.

ಅನೇಕ ಸಂಬಂಧಗಳು ಅತಿರೇಕದಿಂದ ದುರಂತ ಅಂತ್ಯ ಕಂಡ ಉದಾಹರಣೆಗಳು ಕಾಣಸಿಗುತ್ತವೆ. ಸಂಬಂಧಗಳ ಪಾವಿತ್ರ್ಯತೆಯ ಅರ್ಥವನ್ನೇ ಗ್ರಹಿಸದೆ ನೈತಿಕತೆಯ ಎಲ್ಲೆ ಮೀರಿ ವರ್ತಿಸಿದಾಗ ಸಮಾಜದ ಸ್ವಾಸ್ಥ್ಯ ಕದಡುತ್ತದೆ. ಸಂಬಂಧದಲ್ಲಿ ಒಂದು ನಿಯಮವನ್ನು ಅನ್ವಯಿಸಿಕೊಂಡರೆ ಎಲ್ಲವೂ ಸಹಜ ಹಾಗೂ ಸುಂದರವಾಗಿರುತ್ತದೆ. ಅದೇನೆಂದರೆ ಯಾರಿಂದ ಏನನ್ನು ನಿರೀಕ್ಷಿಸಬೇಕೋ ಅದನ್ನು ನಿರೀಕ್ಷಿಸಿದರೆ ಯಾರಿಗೂ ತೊಂದರೆ ಇರುವುದಿಲ್ಲ. ಇಲ್ಲಸಲ್ಲದ ಸಂಗತಿಗಳನ್ನು ಸಂಬಂಧಪಡದ ಜನರಿಂದ ಅಪೇಕ್ಷಿಸಿದಾಗಲೇ ಅಪಾಯ ಎದುರಾಗುವುದು. ಸ್ನೇಹ ಸಂಬಂಧಗಳು ಪ್ರೇಮ ಸಂಬಂಧಗಳಾಗಿ ಪರಿವರ್ತನೆಯಾದ ಕಾರಣಕ್ಕೆ ಅನೇಕ ಅನಿರೀಕ್ಷಿತ ತಿರುವುಗಳು ಎದುರಾಗಿ ಬದುಕಿನ ಹಳಿಯೇ ಬದಲಾಗಿ ಬಿಡುವ ಸಾಧ್ಯತೆ ಇರುತ್ತದೆ. 'ಹರ್ಷದ ಕೂಳಿಗೆ ವರ್ಷದ ಕೂಳನ್ನು ಕಳೆದುಕೊಂಡಂತೆ' ಎಂಬ ಮಾತಿನಂತೆ ಕೆಲವು ಕ್ಷಣದ ಸುಖಸಂತೋಷಕ್ಕೆ ಇಡೀ ಜೀವಮಾನವನ್ನೇ ನರಕ ಮಾಡಿಕೊಂಡವರು ಅನೇಕರಿದ್ದಾರೆ.

ದಾಂಪತ್ಯದಲ್ಲಿ ಅನ್ಯೋನ್ಯತೆ ಎಂಬುದು ಬಹಳ ಮುಖ್ಯ ಪಾತ್ರವಹಿಸುತ್ತದೆ. ಅನೇಕ ಸಂಬಂಧಗಳು ಕೇವಲ ಯಾಂತ್ರಿಕ ಸಂಬಂಧಗಳಾಗಿ ಉಳಿದಿರುತ್ತವೆ. ಅನಾರೋಗ್ಯಕರ ಅಂತರ ಕಾಪಾಡುವುದರಿಂದ ಯಶಸ್ವಿ ದಾಂಪತ್ಯ ಎನಿಸಿಕೊಳ್ಳುವುದಿಲ್ಲ. ಪರಸ್ಪರ ಹೊಂದಾಣಿಕೆ, ಸಹಕಾರದಿಂದ ಸಂಬಂಧದಲ್ಲಿ ಜೀವಂತಿಕೆ ಉಳಿಸಿಕೊಳ್ಳಬೇಕಾಗುತ್ತದೆ. ವ್ಯವಹಾರಿಕವಾಗಿ ಪತಿ–ಪತ್ನಿ ಎಂದು ಭಾವಿಸಿದರೆ ಅನೇಕ ಅನರ್ಥಗಳು ಏರ್ಪಾಡಾಗುತ್ತವೆ. ಕೆಲವು ಸಂಬಂಧಗಳನ್ನು ನಮಗೆ ಇಷ್ಟವಿಲ್ಲದಿದ್ದರೂ ಅವರೊಟ್ಟಿಗೆ ಬದುಕುವ ಅಗತ್ಯ ಏರ್ಪಾಡಾಗುತ್ತದೆ. ಅವರನ್ನು ಮಾನಸಿಕವಾಗಿ ದೂರಮಾಡಿಕೊಂಡರೂ ದೈಹಿಕವಾಗಿ ಅವರಿಂದ ದೂರಸರಿಯಲು ಸಾಧ್ಯವೇ ಆಗುವುದಿಲ್ಲ. ಅನೇಕ ರಕ್ತ ಸಂಬಂಧಗಳಲ್ಲಿ ಈ ರೀತಿ ಆಗುತ್ತದೆ. ವ್ಯಕ್ತಿಗತವಾಗಿ ಇಷ್ಟವಿಲ್ಲದಿದ್ದರೂ, ಅಗತ್ಯವಿಲ್ಲದಿದ್ದರೂ ಸಮಾಜದ ದೃಷ್ಟಿಯಿಂದ ಅವರನ್ನು ಸಹಿಸಿಕೊಂಡು ಇರಬೇಕಾಗುತ್ತದೆ. ಕಚೇರಿಗಳಲ್ಲಿ ಮೇಲಾಧಿಕಾರಿಗಳ, ಸಹೋದ್ಯೋಗಿಗಳ ವರ್ತನೆ, ವ್ಯಕ್ತಿತ್ವ ಇಷ್ಟವಿಲ್ಲದಿದ್ದರೂ, ಅವರ ಮಾತುಕತೆ ಸೂಕ್ತವಿಲ್ಲದಿದ್ದರೂ ವ್ಯವಸ್ಥೆಯ ದೃಷ್ಟಿಯಿಂದ ಸರಿದೂಗಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ಇರುತ್ತದೆ. ದೈನಂದಿನ ಬದುಕಿನ ಬಹುಮುಖ್ಯ ಸಮಯವನ್ನು ಕಳೆಯುವ ಸಂದರ್ಭದಲ್ಲಿ ಅನೇಕ ರೀತಿಯ ವ್ಯತಿರಿಕ್ತ ವ್ಯಕ್ತಿತ್ವದ ಜನರೊಂದಿಗೆ ವ್ಯವಹರಿಸಬೇಕಾಗುತ್ತದೆ. ನಮ್ಮ ವ್ಯಕ್ತಿತ್ವ ಗಟ್ಟಿತನದಿಂದ ಕೂಡಿದ್ದರೆ ಅವರು ನಮ್ಮ ಮನಃಶಾಂತಿಯನ್ನು ಕದಡಲು ಸಾಧ್ಯವಿಲ್ಲ.

ಅನೇಕ ಅಂಗಡಿಗಳಲ್ಲಿ 'ಸಾಲ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ' ಎಂಬ ಬೋರ್ಡ್‌ನ್ನು ಹಾಕಿರುತ್ತಾರೆ. ಈ ಬೋರ್ಡ್‌ನ್ನು ಔಪಚಾರಿಕವಾಗಿ ಹಾಕಿದ್ದರೂ ಅದರಲ್ಲಿನ ಸಂದೇಶ ಮಾತ್ರ ಅಮೂಲ್ಯವಾದುದು. ಅನೇಕ ಸ್ನೇಹ ಸಂಬಂಧಗಳು ಸಾಲ ಪಡೆದು ಸರಿಯಾದ ಸಮಯಕ್ಕೆ ಹಿಂತಿರುಗಿಸದೇ ಇರುವ ಕಾರಣಕ್ಕೆ ಹಾಳಾಗಿರುವ ಉದಾಹರಣೆಗಳಿವೆ. ಅನೇಕರು ಸಂಬಂಧಿಗಳು ಹಾಗೂ ಸ್ನೇಹಿತರು ಇರುವುದೇ ಸಾಲ ನೀಡಲು ಎಂದು ಭಾವಿಸಿ, ಯಾವುದೇ ಮುಜುಗರ ವಿಲ್ಲದೆ ಸಾಲ ಕೊಟ್ಟವರ ಹಾಗೆ ಸಾಲವನ್ನು ಕೇಳುವ ಪರಿಪಾಠ ಹೊಂದಿರುತ್ತಾರೆ. ಇನ್ನು ಕೆಲವರು ಕಂಡಹುಂಡವ ರಲ್ಲಿ ಸಾಲ ಮಾಡಿ ಮರುಪಾವತಿ ಮಾಡಲಾಗದೆ, ಸಾಲಕ್ಕೆ ಅಂಜಿ ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳಿವೆ.

'ಹತ್ತಿರವಿದ್ದೂ ದೂರ ನಿಲ್ಲುವೆವು ನಮ್ಮ ಅಹಮ್ಮಿನ ಕೋಟೆಯಲಿ' ಎಂಬುದು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರ ಕವಿತೆಯೊಂದರ ಸಾಲು. ಈ ಸಾಲು ನಿಜಕ್ಕೂ ಮನುಷ್ಯನ ಅಹಂಕಾರದ ಮನೋಭಾವಕ್ಕೆ ಹಿಡಿದ ಕೈಗನ್ನಡಿಯಂತಿದೆ. ಎಷ್ಟೋ ಜನ ಬಂಧುಗಳು ವಿನಾಕಾರಣ ಅನಾರೋಗ್ಯಕರ ಅಂತರ ಕಾಪಾಡಿಕೊಂಡು ಹತ್ತಿರದಲ್ಲೇ ಇದ್ದರೂ ಮಾನಸಿಕವಾಗಿ ಬಹುದೂರ ಸರಿದುಬಿಡುತ್ತಾರೆ. ಒಂದು ಕಿರುನಗೆ, ಒಂದು ಹಸ್ತಲಾಘವ ಅನೇಕ ಸಂಬಂಧಗಳನ್ನು ಉಳಿಸುತ್ತದೆ. ಅದರ ಅರಿವಿಲ್ಲದೆ, ಸಣ್ಣಪುಟ್ಟ ಕಾರಣಗಳಿಗೆ, ತಮ್ಮದೇ ಊಹೆಗಳಿಂದ, ಪ್ರತಿಷ್ಠೆಯಿಂದ ಬಹುಜನರಿಂದ ದೂರ ಸರಿದುಬಿಡುತ್ತಾರೆ. ಸ್ನೇಹ ಸಂಬಂಧಗಳು ಏರ್ಪಾಡಾಗುವುದು ಎಷ್ಟು ಮುಖ್ಯವೋ ಅದನ್ನು ಉಳಿಸಿಕೊಂಡು ಹೋಗುವುದು ಅಷ್ಟೇ ಮುಖ್ಯವಾಗುತ್ತದೆ. ನಕ್ಕುಬಿಟ್ಟರೆ ತಮ್ಮ ಆಸ್ತಿಯನ್ನೇ ಕೇಳಿಬಿಟ್ಟಾರು ಎಂದು ಅನೇಕರು ಭಾವಿಸಿದಂತಿದೆ. ಮನುಷ್ಯ ಮೂಲಭೂತವಾಗಿ ಸಂಘಜೀವಿ ಎಂಬುವುದನ್ನೇ ಮರೆತಿರುತ್ತಾರೆ. ಮತ್ತೆ ಕೆಲವರಿಗೆ ಮಾನಸಿಕ ಖಾಯಿಲೆ ಇರುತ್ತದೆ. ಸಂತೋಷವಾಗಿರುವವರನ್ನು ಕಂಡರೇ ಅವರಿಗೆ ಕೋಪ ಬರುತ್ತದೆ.

'ಹತ್ತಿರ ಇರುವವರೆಲ್ಲಾ ಹತ್ತಿರದವರಲ್ಲ, ದೂರವಿರುವವರೆಲ್ಲಾ ದೂರದವರಲ್ಲ' ಎಂಬ ಮಾತೊಂದಿದೆ. ನಮ್ಮಿಂದ ದೂರವಿರುವ ಅನೇಕ ಹಿತೈಷಿಗಳು ನಮ್ಮ ಸುಖ, ಸಂತೋಷ, ಏಳಿಗೆ ಬಯಸುತ್ತಿರುತ್ತಾರೆ. ಆದರೆ ನಮ್ಮೊಟ್ಟಿಗೆ ಇರುವ, ನಿತ್ಯ ನಮ್ಮ ಸುಖ–ದುಃಖಗಳಲ್ಲಿ ಭಾಗಿಯಾಗಬೇಕಾದ ಜನ ಮುಖ ಸಿಂಡರಿಸಿಕೊಂಡು ಬದುಕುತ್ತಿರುತ್ತಾರೆ. ಒಬ್ಬರ ಏಳಿಗೆಯನ್ನು ಸಹಿಸದಷ್ಟು ಕನಿಷ್ಠ ವ್ಯಕ್ತಿತ್ವ ಹೊಂದಿರುತ್ತಾರೆ. ಮನುಷ್ಯನಿಗೆ ಅರಿಷಡ್ವರ್ಗಗಳಲ್ಲಿ ಒಂದಾದ ಮತ್ಸರ ಎಂಬುದು ಅನೇಕ ಸ್ನೇಹ ಸಂಬಂಧಗಳನ್ನು ಹಾಳುಗೆಡವಿದೆ. ರಾಮಾಯಣ ಹಾಗೂ ಮಹಾಭಾರತದಲ್ಲಿ ಮತ್ಸರಕ್ಕೆ ಸಂಬಂಧಿಸಿದಂತೆ ಅನೇಕ ದೃಷ್ಟಾಂತಗಳಿವೆ. ದೂರದ ಸಂಬಂಧಿಗಳಿರಲಿ ರಕ್ತಸಂಬಂಧಿಗಳೇ ತಮ್ಮ ಹತ್ತಿರದವರ ಏಳಿಗೆಯನ್ನು ಸಹಿಸದೆ, ಏನಾದರೂ ಸಾಧನೆ ಮಾಡಿದರೆ ಅದರಲ್ಲಿ ಏನಾದರೂ ನ್ಯೂನತೆ ಹುಡುಕುವ ಹುಳುಕು ಮನಸ್ಸನ್ನು ಹೊಂದಿರುತ್ತಾರೆ. ಸಂಬಂಧಿ ಸಾಧಕನಿಗೆ ಸನ್ಮಾನ ಮಾಡುವುದು, ಅಭಿನಂದಿಸುವುದು ಬೇಡ, ಅವರು ಸುಮ್ಮನಿದ್ದರೆ ಅದೇ ಸನ್ಮಾನ ಎನಿಸಿಬಿಡುತ್ತದೆ. 'ಅಪಪ್ರಚಾರ ಎಂಬುದು ಕೈಲಾಗದವರ ಅಸ್ತ್ರ ಎಂಬ ಮಾತಿನಂತೆ ತಾವು ಏನೂ ಸಾಧಿಸದಿದ್ದರೂ, ಸಾಧನೆ ಮಾಡಿದ ತಮ್ಮ ಬಂಧುವಿನ ಕುರಿತು ಅಪಪ್ರಚಾರ ಮಾಡುತ್ತಾ ತಮ್ಮ ಕೀಳುಮಟ್ಟದ ವ್ಯಕ್ತಿತ್ವವನ್ನು ಅನಾವರಣಗೊಳಿಸಿಬಿಡುತ್ತಾರೆ.

ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಸ್ವಸ್ಥ ಸಂಬಂಧಗಳು ಏರ್ಪಾಡಾಗಬೇಕಿದೆ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮೋಹ, ಮದ, ಮತ್ಸರ, ಲೋಭಕ್ಕೆ ಒಳಗಾಗಿ ಸುಗಮ ಬದುಕಿಗೆ ರಹದಾರಿ ಇದ್ದರೂ ಸರಿದಾರಿಯಲ್ಲಿ ನಡೆಯದ ಕಾರಣ ಬದುಕು ಹಳ್ಳ ಹಿಡಿಯುವ ಸಾಧ್ಯತೆ ಇರುತ್ತದೆ. ಸಂಬಂಧಗಳು ನದಿಯಲ್ಲಿನ ಪರಿಶುದ್ಧವಾದ ನೀರಿನ ರೀತಿ. ಅದನ್ನು ಕಲುಷಿತಗೊಳಿಸಿದರೆ ನೀರು ದುರ್ಗಂಧ ಬೀರಿ ಅನುಪಯುಕ್ತವಾಗುತ್ತದೆ. ಆದ್ದರಿಂದ ಸಂಬಂಧಗಳ ಮೌಲ್ಯವನ್ನು ಅರಿತು ಕಾಪಾಡಿಕೊಳ್ಳುವ ಅಗತ್ಯವಿದೆ. ಸಂದರ್ಭ, ಸನ್ನಿವೇಶದ ಆವೇಶಕ್ಕೆ ಒಳಗಾದರೆ ಬದುಕು ಹೈರಾಣವಾಗಿಬಿಡುತ್ತದೆ. ಕೆಲವು ಸ್ವಯಂಕೃತ ತಪ್ಪುಗಳಿಂದ ಸಂಬಂಧ ಹಳಸಿಬಿಡುತ್ತದೆ. ಆದ್ದರಿಂದ ಸಂಬಂಧಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳುವ ಅಗತ್ಯವಿದೆ. ಏನಂತೀರಿ?

ಬಿಜೆಪಿ ಸಂಸದರು ಕೇಂದ್ರದ ಅನುದಾನ ಮಾಹಿತಿ ಅಭಿಯಾನ ಹಮ್ಮಿಕೊಳ್ಳಲಿ


ಮೈಸೂರು, ಫೆ4– ಕೇಂದ್ರ ಸರ್ಕಾರದ ವಿವಿಧ ಯೋಜನೆಗಳು ಮತ್ತು ಅನುದಾನದ ಮಾಹಿತಿಯನ್ನು ರಾಜ್ಯದ ಜನರಿಗೆ ತಿಳಿಸುವ ಕೆಲಸವನ್ನು ಕರ್ನಾಟಕ ಬಿಜೆಪಿ ಸಂಸದರು ಕೈಗೊಳ್ಳಬೇಕು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.



ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಅಗತ್ಯ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಆರೋಪಿಸಿ, ಕಾಂಗ್ರೆಸ್ ಜನಪ್ರತಿನಿಧಿಗಳು ದೆಹಲಿಯಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದು, ಈ ಸಂದರ್ಭದಲ್ಲಿ ರಾಜ್ಯದ ಕೇಂದ್ರ ಸಚಿವರು, ಸಂಸದರು ಹಾಗೂ ಶಾಸಕರು ಕೇಂದ್ರ ಸರ್ಕಾರದ ಯೋಜನೆಗಳ ವಿವರವನ್ನು ನಾಡಿನ ಜನರಿಗೆ ತಿಳಿಸುವ ಮೂಲಕ ಉತ್ತರ ಕೊಡುವುದು ಅವಶ್ಯಕ ಎಂದಿದ್ದಾರೆ.

ಕಳೆದ ಒಂಬತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ವಿವಿಧ ಯೋಜನೆಗಳಿಗಾಗಿ ನೀಡಿರುವ ಅನುದಾನವೆಷ್ಟು, ಜಿಎಸ್ ಟಿ ಪಾಲೆಷ್ಟು ಎಂಬ ಮಾಹಿತಿಯನ್ನು ಬಿಡುಗಡೆ ಮಾಡಬೇಕಿದೆ. ಮತ್ತು ರಾಜ್ಯದ ಪ್ರತಿ ಜಿಲ್ಲೆಯುಲ್ಲಿ ಹಾಗೂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಬಗ್ಗೆ ಪ್ರಚಾರ ಅಭಿಯಾನ ಹಮ್ಮಿಕೊಳ್ಳಬೇಕಿದೆ ಎಂದು ತಿಳಿಸಿದ್ದಾರೆ. ಪ್ರತಿಪಕ್ಷದವರು ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡುತ್ತಿಲ್ಲವೆಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಆದರೆ ಬಿಡುಗಡೆ ಮಾಡಿದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳದ ಕಾರಣ ವಾಪಸ್ಸು ಹೋಗಿರುವ ಉದಾಹರಣೆಗಳಿವೆ. ಸಮರ್ಪಕವಾಗಿ ಅನುದಾನ ಬಳಕೆ ಮಾಡಿದ ನಂತರ ವೆಚ್ಚದ ಪ್ರಮಾಣಪತ್ರ ಸಲ್ಲಿಸಿದರೆ ಮಾತ್ರ, ಹೊಸ ಅನುದಾನ ಬಿಡುಗಡೆ ಮಾಡುವುದು ನಿಯಮ. ಹೀಗಾಗಿ ರಾಜ್ಯ ಸರ್ಕಾರ ಈವರೆಗೆ ಎಷ್ಟು ಅನುದಾನ ಪಡೆದಿದೆ, ಎಷ್ಟು ವಾಪಸ್ಸು ಮಾಡಿದೆ ಎಂಬುವ ಪಟ್ಟಿಯನ್ನು ರಾಜ್ಯದಲ್ಲಿನ ಕೇಂದ್ರ ಸಚಿವರು ಪಡೆದು, ಜನರಿಗೆ ಸತ್ಯಸಂಗತಿ ತಿಳಿಸಬೇಕಿದೆ ಎಂದಿದ್ದಾರೆ.

ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಮತದಾರರಿಗೆ ತಪ್ಪು ಸಂದೇಶ ನೀಡಲು ಕುತಂತ್ರ ನಡೆಸಿದೆ. ಇದಕ್ಕೆ ನಮ್ಮ ನಾಯಕರು ಕೇವಲ ಪ್ರತಿಕ್ರಿಯೆ ನೀಡಿದರಷ್ಟೆ ಸಾಲದು. ಅಂಕಿಅಂಶಗಳ ಸಹಿತ ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡುತ್ತಿರುವ ಅನುದಾನಗಳ ಬಗ್ಗೆ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಪ್ರಚಾರ ಅಭಿಯಾನ ನಡೆಸಬೇಕು. ಪಕ್ಷದ ಕಾರ್ಯಕರ್ತರು ಇಂತಹ ಅಭಿಯಾನ ಕೈಗೊಳ್ಳುವುದು ಸಾಮಾನ್ಯ. ಅದರೆ ಅಧಿಕಾರ ಹೊಂದಿರುವ ಸಂಸದರು ಕಾರ್ಯೋನ್ಮುಖರಾಗಬೇಕು. ಈ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪಕ್ಷದ ಸಂಸದರಿಗೆ ಹಾಗೂ ಸಚಿವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.



ಮೈಸೂರಿನ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಆಶ್ರಯದಲ್ಲಿ, ಬೆಂಗಳೂರಿನ ಶ್ರೀಮತಿ ನಾಗರತ್ನಮ್ಮ ವೆಂಕಟಸುಬ್ಬಯ್ಯ ಮತ್ತು ಮಕ್ಕಳು, ಶ್ರೀ ವೈದ್ಯಪ್ಪ, ಶ್ರೀಮತಿ ಸೀತಮ್ಮ, ನರಸಿಂಹಯ್ಯ ಮತ್ತು ಮಕ್ಕಳ ಧಾರ್ಮಿಕ, ಶೈಕ್ಷಣಿಕ ದತ್ತಿ ವತಿಯಿಂದ ಮೂಗೂರು ಕರ್ನಾಟಕ ಬ್ರಾಹ್ಮಣ ಸಮಾಜದ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಯಿತು. ಸಮಾರಂಭದಲ್ಲಿ ಧಾರ್ಮಿಕ ಶೈಕ್ಷಣಿಕ ದತ್ತಿಯ ಮುಖ್ಯಸ್ಥರಾದ ಶೇಷಾದ್ರಿ, ಅನಂತರಾಮು, ನಾಗರಾಜ ಶರ್ಮಾ, ಎಂ.ವಿ.ರಮೇಶ್, ನರಸಿಂಹ ಸಾತ್ವಿಕ್, ಶ್ರೀಮತಿ ಪೂಜಾ, ಮಾಸ್ಟರ್ ಪೂರ್ವಿಕ್ ಹಾಗೂ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ, ಕಾರ್ಯದರ್ಶಿ ಎಂ.ವಿ.ನಂದಕುಮಾರ್, ಸಹ ಕಾರ್ಯದರ್ಶಿ ರಾವ್ ಸೋಮಶೇಖರ್ ಮತ್ತು ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ನಿರ್ದೇಶಕರು ಭಾಗವಹಿಸಿದ್ದರು.

2ನೇ ಟೆಸ್ಟ್: ಇಂಗ್ಲೆಂಡ್‌ಗೆ 399 ರನ್ ಗುರಿ



ವಿಶಾಖಪಟ್ಟಣ, ಫೆ.4– ಶುಭ್‌ಮನ್ ಗಿಲ್ ಶತಕ ಹಾಗೂ ಅಕ್ಷರ್ ಪಟೇಲ್ ಸಮಯೋಚಿತ ಬ್ಯಾಟಿಂಗ್ ನೆರವಿನಿಂದ ಎರಡನೇ ಟೆಸ್ಟ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಭಾರತ 255 ರನ್‌ಗಳಿಗೆ ಆಲೌಟಾಯಿತು. ಆ ಮೂಲಕ ವೈಜಾಗ್ ಟೆಸ್ಟ್ ಪಂದ್ಯ ಗೆಲ್ಲಲು ಇಂಗ್ಲೆಂಡ್‌ಗೆ 399 ರನ್‌ಗಳ ಸವಾಲಿನ ಗುರಿ ನೀಡಿದೆ.

2ನೇ ದಿನದ ಅಂತ್ಯಕ್ಕೆ 28 ರನ್ ಗಳಿಸಿದ್ದ ಭಾರತ ಬೃಹತ್ ಮೊತ್ತ ಕಲೆಹಾಕುವ ಲೆಕ್ಕಾಚಾರದೊಂದಿಗೆ 3ನೇ ದಿನದಾಟ ಆರಂಭಿಸಿತು. ಆದರೆ ತಂಡದ ಮೊತ್ತ 30 ರನ್ ಆಗುವಷ್ಟರಲ್ಲೇ 13 ರನ್ ಗಳಿಸಿದ್ದ ರೋಹಿತ್ ಶರ್ಮಾ ಹಾಗೂ 17 ರನ್ ಗಳಿಸಿದ್ದ ಯಶಸ್ವಿ ಜೈಸ್ವಾಲ್ ಜೇಮ್ಸ್ ಆಂಡರ್‌ಸನ್‌ಗೆ ವಿಕೆಟ್ ಒಪ್ಪಿಸಿದರು.

ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ಶುಭ್‌ಮನ್ ಗಿಲ್ ಹಾಗೂ ಶ್ರೇಯಸ್ ಅಯ್ಯರ್ 81 ರನ್‌ಗಳ ಜತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. 52 ಎಸೆತಗಳಲ್ಲಿ 29 ರನ್ ಸಿಡಿಸಿದ್ದ ಅಯ್ಯರ್ ದೊಡ್ಡ ಹೊಡೆತಕ್ಕೆ ಯತ್ನಿಸಿ ಬೆನ್ ಸ್ಟೋಕ್ಸ್ ಹಿಡಿದ ಅದ್ಭುತ ಕ್ಯಾಚ್‌ಗೆ ಬಲಿಯಾದರು.

ನಂತರ ಬಂದ ರಜತ್ ಪಾಟೀದಾರ್ 9 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಆಗಮಿಸಿದ ಅಕ್ಷರ್ ಪಟೇಲ್, ಶುಭ್‌ಮನ್ ಗಿಲ್ ಜೊತೆಗೂಡಿ 89 ರನ್ ಜೊತೆಯಾಟವಾಡಿದರು. ಮತ್ತೊಂದೆಡೆ ಇಂಗ್ಲೆಂಡ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ ಗಿಲ್ 132 ಎಸೆತಗಳಲ್ಲಿ ಟೆಸ್ಟ್ ವೃತ್ತಿ ಜೀವನದ ಮೂರನೇ ಶತಕ ಸಿಡಿಸಿ ಸಂಭ್ರಮಿಸಿದರು. ಅಂತಿಮವಾಗಿ ಗಿಲ್ 147 ಎಸೆತಗಳಲ್ಲಿ 11 ಬೌಂಡರಿ ಹಾಗೂ 2 ಸಿಕ್ಸರ್ ಒಳಗೊಂಡ 104 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು.

ಗಿಲ್‌ಗೆ ಉತ್ತಮ ಸಾಥ್ ನೀಡಿದ ಅಕ್ಷರ್ ಪಟೇಲ್ 84 ಎಸೆತಗಳಲ್ಲಿ 6 ಬೌಂಡರಿ ಒಳಗೊಂಡ 45 ರನ್ ಬಾರಿಸಿದರು. ಉಳಿದಂತೆ ಶ್ರೀಕರ್ ಭರತ್ 6, ರವಿಚಂದ್ರನ್ ಅಶ್ವಿನ್ 29 ರನ್ ಗಳಿಸಿದರು. ಇಂಗ್ಲೆಂಡ್ ಪರ ಟಾಮ್ ಹಾರ್ಟ್ಲೀ 4, ರಿಯಾನ್ ಅಹಮದ್ 3, ಜೇಮ್ಸ್ ಆಂಡರ್‌ಸನ್ 2, ಶೋಯೆಬ್ ಬಷೀರ್ 1 ವಿಕೆಟ್ ಉರುಳಿಸಿದರು. ಇನ್ನು ಭಾರತ ನೀಡಿದ 399 ರನ್‌ಗಳ ಗೆಲುವಿನ ಗುರಿಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿರುವ ಇಂಗ್ಲೆಂಡ್ 3ನೇ ದಿನದಂತ್ಯಕ್ಕೆ 1 ವಿಕೆಟ್ ನಷ್ಟಕ್ಕೆ 67 ರನ್ ಗಳಿಸಿದ್ದು, ಝಾಕ್ ಕ್ರಾಲಿ 29 ಹಾಗೂ ರಿಯಾನ್ ಅಹಮದ್ 9 ರನ್ ಗಳಿಸಿ ನಾಲ್ಕನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಭಾರತದ ಪರ ಅಶ್ವಿನ್ 1 ವಿಕೆಟ್ ಉರುಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

'ಪ್ರತ್ಯೇಕ ರಾಷ್ಟ್ರ' ಹೇಳಿಕೆ

ಡಿ.ಕೆ.ಸುರೇಶ್ ನಿವಾಸಕ್ಕೆ ಬಿಜೆಪಿ ಕಾರ್ಯಕರ್ತರ ಮುತ್ತಿಗೆ

ದೇಶ ವಿಭಜನೆ ಬಗ್ಗೆ ಹೇಳಿಲ್ಲ: ಡಿಕೆಸು ಯೂಟರ್ನ್



ಸಂಸದ ಡಿ.ಕೆ.ಸುರೇಶ್ ಬೆಂಗಳೂರಿನ ನಿವಾಸಕ್ಕೆ ಬಿಜೆಪಿ ಕಾರ್ಯಕರ್ತರು ಮುತ್ತಿಗೆ ಹಾಕಿದರು.

ಬೆಂಗಳೂರು, ಫೆ.4– ಪ್ರತ್ಯೇಕ ರಾಷ್ಟ್ರದ ಕುರಿತು ಹೇಳಿಕೆ ನೀಡಿರುವ ಸಂಸದ ಡಿಕೆ ಸುರೇಶ್ ನಿವಾಸಕ್ಕೆ ಮುತ್ತಿಗೆ ಹಾಕಲು ಬಿಜೆಪಿ ಕಾರ್ಯಕರ್ತರು ಯತ್ನಿಸಿದ ಘಟನೆ ಭಾನುವಾರ ನಡೆಯಿತು.

ಬೆಂಗಳೂರಿನ ಸದಾಶಿವನಗರದಲ್ಲಿರುವ ಡಿಕೆ ಸುರೇಶ್ ಅವರ ನಿವಾಸಕ್ಕೆ ಬಿಜೆಪಿ ಕಾರ್ಯಕರ್ತರು ನುಗ್ಗಿದ್ದರು. ಇದರಿಂದ ಸ್ಥಳದಲ್ಲಿ ಕೆಲ ಕಾಲ ಹೈಡ್ರಾಮಾ ನಡೆಯಿತು.

ಬಿಜೆಪಿ ಕಾರ್ಯಕರ್ತರು ಏಕಾಏಕಿ ಸುರೇಶ್ ಅವರ ನಿವಾಸಕ್ಕೆ ನುಗ್ಗುತ್ತಿದ್ದಂತೆಯೇ ಪೊಲೀಸರು ತಡೆದರು. ಈ ವೇಳೆ ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ಉಂಟಾಯಿತು.

ಈ ನಡುವೆ ತಮ್ಮ ಹೇಳಿಕೆ ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ಸುರೇಶ್ ಅವರು ಹೇಳಿಕೆಯಿಂದ ಯೂಟರ್ನ್ ಹೊಡೆದಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ನಾನು ಈ ದೇಶ ವಿಭಜನೆ ಆಗಬೇಕು ಎಂದು ಹೇಳಿಲ್ಲ. ನನ್ನ ಹೇಳಿಕೆ ಬಹಳ ಸ್ಪಷ್ಟವಾಗಿದೆ. ಹಾಗಾಗಿ ಬಿಜೆಪಿಯವರಿಗೆ ಉತ್ತರ ಕೊಡುವ ಅವಶ್ಯಕತೆಯಿಲ್ಲ. ಅವರ ಹೋರಾಟ ಯಶಸ್ವಿಯಾಗಲಿದೆ. ಅವರವರ ಭಾವನೆ ಹೇಳಲು ಎಲ್ಲರಿಗೂ ಹಕ್ಕಿದೆ. ನನ್ನ ಹೇಳಿಕೆಯನ್ನು ಸ್ಪಷ್ಟವಾಗಿ ರಾಜ್ಯ ಮತ್ತು ದೇಶದ ಜನತೆಗೆ ತೋರಿಸಬೇಕು. ಪ್ರಜಾಪ್ರಭುತ್ವದ ನಾಲ್ಕನೇ ಅಂಗ ಮಾಧ್ಯಮ. ಮಾಧ್ಯಮಗಳು ಕೆಲವರನ್ನ ಗುರಿ ಮಾಡುತ್ತಿರುವುದು ಸರಿನಾ ತಪ್ಪಾ ಎಂದು ವಿಶ್ಲೇಷಣೆ ಮಾಡಬೇಕು ಎಂದು ಮನವಿ ಮಾಡುತ್ತೇನೆ ಎಂದರು.

ಕೇಂದ್ರ ಸರ್ಕಾರ ಮಧ್ಯಂತರ ಬಜೆಟ್ ಮಂಡನೆ ಮಾಡಿದ್ದು, ಈ ಬಜೆಟ್ ಅನ್ನು ಟೀಕಿಸುವ ಬರದಲ್ಲಿ ಕಾಂಗ್ರೆಸ್ ಸಂಸದ ಡಿಕೆ ಸುರೇಶ್ ಅವರು ಪ್ರತ್ಯೇಕ ರಾಷ್ಟ್ರದ ಹೇಳಿಕೆಯನ್ನು ನೀಡಿದ್ದರು.

ಕೇಂದ್ರದ ಬಜೆಟ್‌ನಲ್ಲಿ ಹೊಸತೇನು ಇಲ್ಲ. ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರ ಹಣ ಬಿಡುಗಡೆ ಮಾಡುತ್ತಿಲ್ಲ. ಹೀಗೆ ಅನ್ಯಾಯ ಆಗುತ್ತಿದ್ದರೆ ಪ್ರತ್ಯೇಕ ರಾಷ್ಟ್ರ ಕೇಳಬೇಕಾಗುತ್ತದೆ. ದಕ್ಷಿಣ ಭಾರತದವರು ಧ್ವನಿ ಎತ್ತಬೇಕಾಗುತ್ತದೆ ಎಂದಿದ್ದರು.

'ಹಿಂದು ಅಶ್ಲೀಲ' ಎಂದಿದ್ದ ಸತೀಶ್ ಜಾರಕಿಹೊಳಿ ವಿರುದ್ಧ ಕ್ರಿಮಿನಲ್ ಕೇಸ್‌ಗೆ ನ್ಯಾಯಾಲಯ ಒಪ್ಪಿಗೆ



ಬೆಂಗಳೂರು, ಫೆ.4– 'ಹಿಂದು ಪದಕ್ಕೆ ಅಶ್ಲೀಲ ಎಂಬ ಅರ್ಥವಿದೆ' ಎಂಬ ಹೇಳಿಕೆ ನೀಡಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರ ಕಿಹೊಳಿಗೆ ಸಂಕಷ್ಟ ಎದುರಾಗಿದ್ದು, ಈ ಸಂಬಂಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲು ಜನಪ್ರತಿನಿದಿಗಳ ನ್ಯಾಯಾಲಯ ಒಪ್ಪಿಗೆ ಸೂಚಿಸಿ ಆದೇಶ ಹೊರಡಿಸಿದೆ.

2022ರ ನವೆಂಬರ್ 6ರಂದು ಬೆಳಗಾವಿಯಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಕಾಂಗ್ರೆಸ್ ನಾಯಕ ಸತೀಶ್ ಜಾರಕಿಹೊಳಿ, ಹಿಂದು ಪದಕ್ಕೆ ಅಶ್ಲೀಲ ಎಂಬ ಅರ್ಥವಿದೆ ಎಂದು ಹೇಳಿದ್ದರು. ಇದರ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಟೀಕೆ, ಆಕ್ರೋಶಗಳು ವ್ಯಕ್ತವಾಗಿದ್ದವು. ಈ ಸಂಬಂಧ ಬಿಜೆಪಿ ನಾಯಕರು, ಹಿಂದು ಕಾರ್ಯಕರ್ತರು, ರಾಜ್ಯದ ಹಲವು ಕಡೆ ಸತೀಶ್ ಜಾರಕಿಹೊಳಿ ವಿರುದ್ಧ ದೂರು ನೀಡಿದ್ದರು. ವಕೀಲ ದಿಲೀಪ್ ಕುಮಾರ್ ಅವರು ಕೋರ್ಟ್ ಮೊರೆ ಹೋಗಿದ್ದರು. ಈ ಪ್ರಕರಣದ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ನ್ಯಾಯಾಲಯವು ಈಗ ಸತೀಶ್ ಜಾರಕಿಹೊಳಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವಂತೆ ಆದೇಶ ನೀಡಿದೆ.

ಸದೃಢ ರಾಷ್ಟ್ರ ಕಟ್ಟುತ್ತಿರುವ ಕರ್ನಾಟಕವೇ ಭಾರತಕ್ಕೆ ಮಾದರಿ

ಸಿಎಂ ಸಿದ್ದರಾಮಯ್ಯ



ಬೆಂಗಳೂರು, ಫೆ.4–ಕನ್ನಡಿಗರು ಬೆವರು ಸುರಿಸಿ ಕಟ್ಟುವ ತೆರಿಗೆ ಹಣವು ರಾಜ್ಯದ ಕಷ್ಟಕಾಲಕ್ಕೆ ಉಪಯೋಗಕ್ಕೆ ಬರದೆ ಉತ್ತರ ಭಾರತದ ರಾಜ್ಯಗಳ ಪಾಲಾಗುತ್ತಿದೆ. ಶ್ರಮದಿಂದ ಸದೃಢ ರಾಷ್ಟ್ರಕಟ್ಟುತ್ತಿರುವ ಕರ್ನಾಟಕವೇ ಭಾರತಕ್ಕೆ ಮಾದರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ತೆರಿಗೆ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯ ಖಂಡಿಸಿ ಕನ್ನಡಿಗರು ನಡೆಸುತ್ತಿರುವ ಅಭಿಯಾನ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ದಕ್ಷಿಣ ಭಾರತದ ರಾಜ್ಯಗಳ ತೆರಿಗೆಯ ಋಣದಲ್ಲಿರುವ ಉತ್ತರದ ರಾಜ್ಯಗಳು ಎಂದಿಗೂ ನಮಗೆ ಮಾದರಿ ಆಗಲಾರವು. ಈ ಹುಸಿ ಕಲ್ಪನೆಯಿಂದ ಎಲ್ಲರೂ ಹೊರಬರಬೇಕು ಎಂದು ಕುಟುಕಿದ್ದಾರೆ. 'ನನ್ನ ತೆರಿಗೆ ನನ್ನ ಹಕ್ಕು' ಎಂಬ ಟ್ವಿಟರ್ ಅಭಿಯಾನಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ ಎಂದರು.

'ಕೂತು ತಿನ್ನುವವನಿಗೆ ಮೃಷ್ಟಾನ್ನ ಕೊಟ್ಟು, ದುಡಿಯುವ ಮಗನಿಗೆ ಬರೆ ಎಳೆದರು' ಎಂಬಂತಿದೆ ದೇಶದಲ್ಲಿ ಕನ್ನಡಿಗರ ಸ್ಥಿತಿ. ಇದು ಬದಲಾಗಲೇಬೇಕು. ನ್ಯಾಯಕ್ಕಾಗಿ ಧ್ವನಿ ಎತ್ತುತ್ತಿರುವ ನಾಡಿನ ಪ್ರಜ್ಞಾವಂತರಿಗೆ ನನ್ನ ಧನ್ಯವಾದಗಳು. ನಿಮ್ಮ ಜೊತೆ ನಾನಿದ್ದೇನೆ, ನಮ್ಮೆಲ್ಲರ ಧ್ವನಿ ಒಟ್ಟಾದರೆ ದೆಹಲಿಯವರೆಗೆ ಕೇಳುವುದು ಶತಸಿದ್ಧ ಎಂದು ತಿಳಿಸಿದ್ದಾರೆ.

ಇಂದು ವಿಶ್ವಾಸ ಮತ: ಜಾರ್ಖಂಡ್ ಶಾಸಕರು ರಾಂಚಿಗೆ ವಾಪಸ್

ಹೈದರಾಬಾದ್, ಫೆ.4– ಕಳೆದ ಮೂರು ದಿನಗಳಿಂದ ಹೈದರಾಬಾದ್‌ನ ರೆಸಾರ್ಟ್‌ನಲ್ಲಿ ತಂಗಿದ್ದ ಜಾರ್ಖಂಡ್‌ನ ಆಡಳಿತಾರೂಢ ಜಾರ್ಖಂಡ್ ಮುಕ್ತಿ ಮೋರ್ಚಾ ನೇತೃತ್ವದ ಮೈತ್ರಿಕೂಟದ ಶಾಸಕರು ವಿಧಾನಸಭೆಯಲ್ಲಿ ವಿಶ್ವಾಸ ಮತಯಾಚನೆಗೂ ಒಂದು ದಿನ ಮುಂಚಿತವಾಗಿ ಭಾನುವಾರ ರಾಂಚಿಗೆ ತೆರಳಿದ್ದಾರೆ.

ಹೊಸದಾಗಿ ರಚನೆಯಾದ ಚಂಪೈ ಸೋರೆನ್ ಸರ್ಕಾರವು ಸೋಮವಾರ ವಿಧಾನಸಭೆಯಲ್ಲಿ ವಿಶ್ವಾಸ ಮತಯಾಚಿಸಲಿದೆ. ಪ್ರತಿಪಕ್ಷ ಬಿಜೆಪಿ ತಮ್ಮ ಶಾಸಕರನ್ನು ಖರೀದಿಸಬಹುದು ಎಂಬ ಆತಂಕದಿಂದ ಮೈತ್ರಿಕೂಟದ ಸುಮಾರು 40 ಶಾಸಕರು ಫೆಬ್ರವರಿ 2 ರಂದು ಎರಡು ವಿಮಾನಗಳಲ್ಲಿ ಹೈದರಾಬಾದ್‌ಗೆ ಆಗಮಿಸಿದ್ದರು.

ಇಂದು ಸಂಜೆ ಹೈದರಾಬಾದ್‌ನ ಶಂಶಾಬಾದ್‌ನಲ್ಲಿರುವ ಆರ್‌ಜಿಐ ವಿಮಾನ ನಿಲ್ದಾಣದಿಂದ ಎಲ್ಲಾ 40 ಶಾಸಕರು ರಾಂಚಿಗೆ ವಿಮಾನದ ಮೂಲಕ ತೆರಳಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕಳೆದ ಮೂರು ದಿನಗಳ ಹಿಂದೆ ನಗರದ ಹೊರವಲಯದ ಶಾಮೀರ್‌ಪೇಟೆಯಲ್ಲಿರುವ ಐಷಾರಾಮಿ ರೆಸಾರ್ಟ್‌ನಲ್ಲಿ ಶಾಸಕರಿಗೆ ವಸತಿ ಕಲ್ಪಿಸಲಾಗಿತ್ತು.

81 ಸದಸ್ಯರ ಜಾರ್ಖಂಡ್ ವಿಧಾನಸಭೆಯಲ್ಲಿ ಜೆಎಂಎಂ ನೇತೃತ್ವದ ಮೈತ್ರಿಕೂಟ 43 ಶಾಸಕರ ಬೆಂಬಲವನ್ನು ಹೊಂದಿದೆ. 43 ಶಾಸಕರ ಬೆಂಬಲ ವಿರುವ ಮೈತ್ರಿ ಸರ್ಕಾರವನ್ನು ಉರುಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಕಾಂಗ್ರೆಸ್ ನಾಯಕ ಪ್ರಾವ್ ಝಾ ಆರೋಪಿಸಿದ್ದಾರೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 5 ಫೆಬ್ರವರಿ 2024

ಹೆಣ್ಣು ಮಕ್ಕಳ ಏಳಿಗೆಗೆ ಸಾಧಕ ಮಹಿಳೆಯರು ಸ್ಫೂರ್ತಿ

ವಿಶ್ವ ಆರ್ಥಿಕ ವೇದಿಕೆ ಭಾರತ ಪ್ರತಿನಿಧಿ ಗಾಯಿತ್ರಿ ಕುಪೇಂದ್ರರೆಡ್ಡಿ ಕರೆ



ಪಿಯುಸಿ, ಎಸ್ಎಸ್ಎಲ್‌ಸಿಯಲ್ಲಿ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ 10 ಗ್ರಾಂ ಚಿನ್ನದ ಸರ ನೀಡಿ ಅಭಿನಂದಿಸಲಾಯಿತು.

ಪಾಂಡವಪುರ, ಫೆ.4– ಹೆಣ್ಣು ಮಕ್ಕಳು ಎಲ್ಲಾ ಕ್ಷೇತ್ರದಲ್ಲೂ ಮಹತ್ತರ ಸಾಧನೆ ಮಾಡಿದ್ದಾರೆ. ಅಂತಹ ಸಾಧಕ ಮಹಿಳೆಯರನ್ನು ಸ್ಫೂರ್ತಿಯಾಗಿ ತೆಗೆದುಕೊಂಡು ಮುನ್ನಡೆಯಬೇಕು ಎಂದು ವಿಶ್ವ ಆರ್ಥಿಕ ವೇದಿಕೆ ಭಾರತ ಪ್ರತಿನಿಧಿ, ನವೋದ್ಯಮಶೀಲತೆ ಸಲಹಾ ಸಂಸ್ಥೆಯ ಸಂಸ್ಥಾಪಕಿ ಗಾಯಿತ್ರಿ ಕುಪೇಂದ್ರರೆಡ್ಡಿ ತಿಳಿಸಿದರು.

ಪಟ್ಟಣದ ಬಾಲಕಿಯರ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆಯಲ್ಲಿ ನಡೆದ ವಿಜ್ಞಾನ ವಿಭಾಗದ ನೂತನ ಕೊಠಡಿಗಳ ಉದ್ಘಾಟನೆ ಹಾಗೂ 2023–24ನೇ ಸಾಲಿನ ವಿದ್ಯಾರ್ಥಿಗಳ ಸಂಘ ಮತ್ತು ಕ್ರೀಡಾ ಹ್ಯಾಸಿ ಸಂಘಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ಶೈಕ್ಷಣಿಕ ಪ್ರಗತಿಗಾಗಿ ಬಾಲಕಿಯರ ಕಾಲೇಜಿನಲ್ಲಿ ವಿಜ್ಞಾನ ವಿಭಾಗವನ್ನು ಆರಂಭಿಸಿ, ಅಗತ್ಯ ಕೊಠಡಿಗಳು, ಲ್ಯಾಬ್ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು, ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಆರಂಭಿಸಬೇಕೆನ್ನುವುದು ಹಿರಿಯ ಆಸೆಯಾಗಿತ್ತು ಎಂದರು.

ಗಾಯಿತ್ರಿ ಕುಪೇಂದ್ರರೆಡ್ಡಿ ಅವರು ಚಿಕ್ಕ ವಯಸ್ಸಿನಲ್ಲಿಯೇ ಸಮಾಜ ಸೇವೆ ಮಾಡುವ ಮೂಲಕ ಮಾದರಿಯಾಗಿದ್ದಾರೆ. ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಗೆ ಭಾರತ ಪ್ರತಿನಿಧಿಯಾಗಿ ಭಾಗವಹಿಸುವ ಮೂಲಕ ಸಾಧನೆ ಮಾಡಿದ್ದಾರೆ ಎಂದರು.

ಪ್ರೊ.ಎಚ್.ಆರ್.ತಿಮ್ಮೇಗೌಡ ಮಾತನಾಡಿ, ಪಿಯುಸಿ ಮತ್ತು ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ನಗರ ಪ್ರದೇಶದ ಹೈಟೆಕ್ ಶಾಲೆಗಳಲ್ಲಿಯೇ ಚಿನ್ನದ ಬಹುಮಾನ ನೀಡುವುದಿಲ್ಲ. ಆದರೆ, ಪುಟ್ಟರಾಜು ಅವರು ಅಧಿಕ ಅಂಕಗಳಿಸಿದ ಇಬ್ಬರು ವಿದ್ಯಾರ್ಥಿಗಳಿಗೆ ತಲಾ 10 ಗ್ರಾಂ ಚಿನ್ನದ ಸರವನ್ನು ನೀಡಿ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದಾರೆ. ಶಾಲೆಗೆ ಗ್ರಾಮೀಣ ಪ್ರದೇಶದ ಬಡ ಹೆಣ್ಣು ಮಕ್ಕಳು ಬರುವುದರಿಂದ ಅಂತಹ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಎಲ್ಲಾ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದರು.

ಇದೇ ವೇಳೆ ಅತಿಹೆಚ್ಚು ಅಂಕಪಡೆದ ಎಸ್ಎಸ್ಎಲ್‌ಸಿ ವಿದ್ಯಾರ್ಥಿನಿ ಮೋನಿಕ, ಪಿಯುಸಿ– ಪ್ರಕೃತಿಗೆ ತಲಾ 10 ಗ್ರಾಂ ಚಿನ್ನದ ಸರವನ್ನು ನೀಡಿ ಗೌರವಿಸಲಾಯಿತು. ಶಾಲಾ–ಕಾಲೇಜು ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಎರಡು ತಲೆಯುಳ್ಳ ಮೇಕೆ ಮರಿ ಜನನ

ಕುತೂಹಲದಿಂದ ವೀಕ್ಷಿಸುತ್ತಿರುವ ಸಾರ್ವಜನಿಕರು



2 ತಲೆಯುಳ್ಳ ಮೇಕೆ ಮರಿಯೊಂದಿಗೆ ನಿಂಗಮ್ಮ ರಾಮಚಂದ್ರ

ಮದ್ದೂರು, ಫೆ.4– ತಾಲೂಕಿನ ಗೆಜ್ಜಲಗೆರೆ ಗ್ರಾಮದ ನಿಂಗಮ್ಮ ರಾಮಚಂದ್ರ ಎಂಬುವರಿಗೆ ಸೇರಿದ ಮೇಕೆಗೆ 2 ತಲೆಯುಳ್ಳ ಮೇಕೆ ಮರಿ ಜನಿಸಿದ್ದು ಗ್ರಾಮಸ್ಥರಲ್ಲಿ ಅಚ್ಚರಿ ಮೂಡಿಸಿದೆ.

ಮೂರು ವರ್ಷಗಳಿಂದ ರಾಮಚಂದ್ರ ದಂಪತಿ ಮೇಕೆ ಸಾಕುತ್ತಿದ್ದು ಶುಕ್ರವಾರ ಮಧ್ಯಾಹ್ನ 2 ತಲೆಯುಳ್ಳ ಮೇಕೆ ಜನಿಸಿದ್ದು ಆರೋಗ್ಯದಿಂದಿದೆ.

ಗೆಜ್ಜಲಗೆರೆ ಗ್ರಾಮದ ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕ ಕೆ.ಬಿ.ಶಂಕರೇಗೌಡ ಹಾಗೂ ಹಿರಿಯ ವೈದ್ಯಾಧಿಕಾರಿ ಶಿವಶಂಕರ್ ಅವರು ಮೇಕೆ ಮರಿಯನ್ನು ಪರೀಕ್ಷಿಸಿ ಮೇಕೆ ಮರಿ ಆರೋಗ್ಯವಾಗಿರುವುದಾಗಿ ತಿಳಿಸಿದ್ದು, ಆಶ್ಚರ್ಯವೆಂಬಂತೆ 2 ತಲೆ ಮೇಕೆ ಮರಿಯನ್ನು ವೀಕ್ಷಿಸಲು ಸುತ್ತಮುತ್ತಲ ಗ್ರಾಮಸ್ಥರು ಮುಗಿಬಿದ್ದಿದ್ದಾರೆ.

ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ಮೇಲುಕೋಟೆ ನಾದಸ್ವರ ವಿದ್ವಾಂಸರಿಂದ ನಾದಮಾಧುರ್ಯ

ಮಂಡಲ ಪೂಜೆಯ 48 ದಿನಗಳ ಕಾಲವೂ ಪ್ರತೀ ದಿನ ಸಂಗೀತ ಸೇವೆ



ಅಯೋಧ್ಯೆ ಶ್ರೀರಾಮ ಜನ್ಮಭೂಮಿಯ ಬಾಲರಾಮನ ಮಂದಿರದಲ್ಲಿ ಮೇಲುಕೋಟೆ ನಾದಸ್ವರ ವಿದ್ವಾಂಸ ಎಂ.ಪಿ. ನಾಗರಾಜು ತಂಡದ ನಾದಸ್ವರ ಸೇವೆ.



ಶ್ರೀರಾಮನ ಜನ್ಮಭೂಮಿ ಅಯೋಧ್ಯೆಯಲ್ಲಿ ಬಾಲ ರಾಮನ ಪ್ರತಿಷ್ಠಾಪನೆಯ ನಂತರ ದೈವೀಕ ಸಾನ್ನಿಧ್ಯ ನೆಲೆಸಿದೆ. ಪ್ರಧಾನ ಮಂತ್ರಿ ಮೋದೀಜಿ, ಮುಖ್ಯಮಂತ್ರಿ ಯೋಗೀಜಿ ಸಮ್ಮುಖದಲ್ಲಿ ಶ್ರೀರಾಮನಿಗೆ ಭಕ್ತಿಯಿಂದ ನಾದಸ್ವರ ಸೇವೆ ಮಾಡುತ್ತಿದ್ದೇವೆ. ಇಡೀ ತಂಡ ಹಣದಾಸೆಗೆ ಕೆಲಸ ಮಾಡದೆ ಭಕ್ತಿಯಿಂದ ಸೇವೆ ಮಾಡುತ್ತಿದ್ದೇವೆ.
–ಎಂ.ಪಿ ನಾಗರಾಜು, ಮೇಲುಕೋಟೆ ನಾದಸ್ವರ ಯುವವಿದ್ವಾನ್

ಮೇಲುಕೋಟೆ, ಫೆ.4– ಹೆಸರಾಂತ ಧಾರ್ಮಿಕ ಕ್ಷೇತ್ರ ಮೇಲುಕೋಟೆ ಚೆಲುವನಾರಾಯಣಸ್ವಾಮಿ ಸನ್ನಿಧಿಯ ನಾದಸ್ವರ ವಿದ್ವಾಂಸರ ತಂಡ ರಾಮಜನ್ಮಭೂಮಿ ಆಯೋಧ್ಯಾ ಬಾಲರಾಮನ ದೇಗುಲದಲ್ಲೂ ನಾದಮಾಧುರ್ಯ ಹರಿಸುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ದೇಗುಲ ಉದ್ಘಾಟಿಸಿದ ದಿನದಿಂದ ನಾದ ಕೈಂಕರ್ಯ ಆರಂಭಿಸಿರುವ ತಂಡ ಮಂಡಲ ಪೂಜೆಯ 48 ದಿನಗಳ ಕಾಲವೂ ಪ್ರತಿದಿನ ಸೇವೆ ಮಾಡುತ್ತಿದೆ.

ಮೇಲುಕೋಟೆಯ ನಾದಸ್ವರ ವಿದ್ವಾಂಸ ಎಂ.ಎಸ್. ನಾಗರಾಜು ಮತ್ತುಡೋಲು ವಿದ್ವಾನ್ ಅಶೋಕ್ ಒಳಗೊಂಡ ನಾದಸ್ವರ ವಿದ್ವಾಂಸರ ತಂಡ ಅಲ್ಲಿನ ಉತ್ಸವ, ಶ್ರೀಬಾಲರಾಮನ ವಿಶೇಷ ಪೂಜೆ, ಸಹಸ್ರನಾಮ ಮಂಗಳಾರತಿಯ ವೇಳೆ ಸುಶ್ರಾವ್ಯವಾಗಿ ನಾದಸ್ವರ ನುಡಿಸುವ ಮೂಲಕ ಭಕ್ತರು ಹಾಗೂ ದೇವಾಲಯದ ಸಿಬ್ಬಂದಿಯ ಮನಸೂರೆಗೊಂಡಿದೆ. ಆಕಾಶವಾಣಿ ದೂರದರ್ಶನ ಕಲಾವಿದ ಮೇಲುಕೋಟೆಯ ನಾದಸ್ವರ ವಿದ್ವಾಂಸ ಪುಟ್ಟರಾಜು ಅವರ ಪುತ್ರನಾದ ಯುವ ನಾದಸ್ವರ ವಿದ್ವಾಂಸ ಎಂ.ಪಿ ನಾಗರಾಜು ಚೆಲುವನಾರಾಯಣನ ವೈರಮುಡಿ ಉತ್ಸವ ರಾಮಾನುಜರ ಜಯಂತ್ಯುತ್ಸವ ರಥಸಪ್ತಮಿ ಅಂಗಮಣಿ ಮುಂತಾದ ಮೇಲುಕೋಟೆಯ ಉತ್ಸವಗಳಲ್ಲಿ ಮಾಡಿದ ನಾದಸ್ವರ ಸೇವೆಯನ್ನು ಪರಿಗಣಿಸಿ ಅಯೋಧ್ಯೆಯ ಬಾಲರಾಮನ ಸನ್ನಿಧಿಯಲ್ಲಿ ನಾದಸ್ವರ ಸೇವೆಗೆ ರಾಮಮಂದಿರ ನಿರ್ಮಾ ಟ್ರಸ್ಟ್ ಈ ಅವಕಾಶ ನೀಡಿದೆ.

ಈ ಅವಕಾಶವನ್ನು ಸಮರ್ಪಕವಾಗಿ ಬಳಿಸಿಕೊಂಡು ತ್ಯಾಗರಾಜರು ಇತರ ದಾರ್ಶನಿಕರು ರಚಿಸಿದ ಶ್ರೀರಾಮನ ಕೀರ್ತನೆಗಳನ್ನು ಸುಶ್ರಾವ್ಯವಾಗಿ ನುಡಿಸುತ್ತಿರುವ ಮೇಲುಕೋಟೆ ಎಂ.ಪಿ. ನಾಗರಾಜು. ಬಾಲರಾಮನ ದೇಗುಲದ ಉದ್ಘಾಟನೆ ಹಾಗೂ ಮಂಡಲ ಪೂಜೆಯಲ್ಲಿ ನಾದಸ್ವರ ನುಡಿಸಲು ಅವಕಾಶ ಪಡೆದು ಕೊಂಡಿರುವುದು ನನಗೆ ಮತ್ತು ನಮ್ಮ ತಂಡಕ್ಕೆ ದೊರೆತಿರುವ ಸೌಭಾಗ್ಯವಾಗಿದೆ. ಶ್ರೀರಾಮನ ಆರಾಧ್ಯ ದೈವವಾದ ರಾಮಪ್ರಿಯ ಶ್ರೀ ಚೆಲುವ ನಾರಾಯಣಸ್ವಾಮಿಯ ಕೃಪೆಯಿಂದಲೇ ನಮಗೆ ಈ ಅವಕಾಶ ದೊರೆತಿದ್ದು, ಶ್ರೀರಾಮನ ಸೇವೆಯಲ್ಲಿ ನಿರತನಾಗಿದ್ದೇವೆ ಎನ್ನುತ್ತಾರೆ.

ಮಂಡ್ಯ ಬಂದ್ ಮಾಡದಂತೆ ಗಣಿಗ ರವಿ ಮನವಿ

ಮಂಡ್ಯ,ಫೆ.4– ಕೆರಗೋಡು ಹನುಮ ಧ್ವಜ ವಿವಾದಕ್ಕೆ ಸಂಬಂಧಿಸಿದಂತೆ 2 ದಿನಗಳ ಅಂತರದಲ್ಲಿ ಎರಡೆರಡು ಪರ–ವಿರೋಧ ಬಂದ್‌ಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಮಂಡ್ಯ ಬಂದ್ ಮಾಡದಂತೆ ಎರಡು ಬಂದ್‌ಗೆ ಕರೆ ನೀಡಿರುವ ಆಯೋಜಕರಿಗೆ ಶಾಸಕ ಗಣಿಗ ರವಿಕುಮಾರ್ ಮನವಿ ಮಾಡಿದ್ದಾರೆ.

ಹನುಮಧ್ವಜ ತೆರವು ಖಂಡಿಸಿ ಫೆ.9 ರಂದು ಬಜರಂಗದಳದಿಂದ ಮಂಡ್ಯ ಬಂದ್ ಕರೆ ನೀಡಿದ್ದು, ಫೆ.9ರ ಬಂದ್ ವಿರೋಧಿಸಿ ಫೆ.7ರಂದು ಸಮಾನಮನಸ್ಕರ ವೇದಿಕೆಯಿಂದ ಬಂದ್ ಕರೆ ಕೊಡಲಾಗಿದೆ. ಈ ವಿಚಾರಕ್ಕೆ ಪ್ರತಿಕ್ರಿಯೆ ನೀಡಿರುವ ಶಾಸಕ ರವಿ, ಬಂದ್ ಮಾಡುವುದರಿಂದ ಯಾರಿಗೂ ಲಾಭವಿಲ್ಲ. ಕೆರಗೋಡು ಗ್ರಾಮಸ್ಥರು ನೆಮ್ಮದಿಯಿಂದ ಇರಬೇಕು. ಶಾಂತಿ ಕಾಪಾಡಲು ಮತ್ತೊಂದು ಧ್ವಜಸ್ತಂಭ ಅಥವಾ ಮಂದಿರ ಕಟ್ಟಲು ಸಿದ್ಧನಿದ್ದು, ವಿವಾದವಿಲ್ಲದ ಜಾಗದಲ್ಲಿ ಹನುಮ ಧ್ವಜ ಹಾರಾಟಕ್ಕೆ ನನ್ನ ಒಪ್ಪಿಗೆ ಇದೆ ಎಂದು ಸ್ಪಷ್ಟಪಡಿಸಿದ್ದಾರೆ.

ಪರಿಸ್ಥಿತಿ ಸಹಜ ಸ್ಥಿತಿಗೆ ತರಲು ಗ್ರಾಮಸ್ಥರ ಜೊತೆ ಮಾತುಕತೆಗೆ ತಯಾರಿದ್ದೇನೆ. ಆದರೆ 4–5 ಮಂದಿಗೆ ಸಮಸ್ಯೆ ಬಗೆಹರಿಸುವುದು ಇಷ್ಟವಿಲ್ಲ. ಹಾಗಾಗಿ ವಿವಾದ ಸೃಷ್ಟಿಸುತ್ತಾ, ಪ್ರಚೋದನೆ ಮಾಡುತ್ತಿದ್ದಾರೆ. ಈ ಹಿನ್ನೆಲೆ, ಅವರ ಉದ್ದೇಶದ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದೇನೆ ಎಂದರು.

ಕೆರಗೋಡು ಸಮೀಪ ವಿಶ್ವದರ್ಜೆಯ ಜ್ಞಾನ ಮಂದಿರ ನಿರ್ಮಾಣವಾಗಲಿದೆ ಮಂದಿರದ ಶಂಕುಸ್ಥಾಪನೆಗೆ ಅಮೆರಿಕಾದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಹಾಗೂ ಟಿಬೆಟಿಯನ್ ಧರ್ಮಗುರು ದಲೈಲಾಮ ಆಗಮಿಸುತ್ತಾರೆ. ಅವರು ಬಂದು ಹೋದ ಬಳಿಕ ಕೆರಗೋಡು ಭಾಗ ದೊಡ್ಡ ಮಟ್ಟದಲ್ಲಿ ಅಭಿವೃದ್ಧಿ ಕಾಣಲಿದೆ. ಉದ್ಯೋಗಗಳು ಸೃಷ್ಟಿಯಾಗಲಿವೆ, ಜಾಗಕ್ಕೆಚಿನ್ನದ ಬೆಲೆ ಬರಲಿದೆ ವಿವಾದ ಮುಂದುವರೆದರೆ ಅಭಿವೃದ್ಧಿ ಕುಂಠಿತವಾಗಲಿದೆ ಎಂದರು.



ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯಲ್ಲಿ ಮಡಿವಾಳ ಮಾಚಿದೇವರ ಜಯಂತ್ಯುತ್ಸವದ ಅಂಗವಾಗಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ಜೆ.ಡಿ.ಎಸ್ ಅಧ್ಯಕ್ಷರಾದ ಪೈ.ಮುಕುಂದ, ಗ್ರಾಪಂ ಸದಸ್ಯ ಲೋಕೇಶ್, ಪೈ.ನರಸಿಂಹ, ಬಿ.ನಾರಾಯಣ, ಮಂಜುನಾಥ, ಪ್ರಿಯಾ ರಮೇಶ್, ನಿವೃತ್ತ ಪೊಲೀಸ್ ಅಧಿಕಾರಿ ಸಂಜೀವಯ್ಯ, ರಂಗಪ್ಪ, ರೇಡಿಯೋ ರಮೇಶ್, ಬೆಟ್ಟಪ್ಪ, ಗ್ರಾಮಸ್ಥರು ಉಪಸ್ಥಿತರಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್ ಟಿಕೆಟ್ ಸಿಗುವ ವಿಶ್ವಾಸವಿದೆ



ವಿವೇಕಾನಂದ

ಮಂಡ್ಯ, ಫೆ.4– ಇದೇ ವರ್ಷದ ಮಧ್ಯದಲ್ಲಿ ನಡೆಯಲಿರುವ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಟಿಕೆಟ್ ಸಿಗುವ ವಿಶ್ವಾಸವಿದೆ ಎಂದು ಜೆಡಿಎಸ್‌ನ ಪ್ರಬಲ ಟಿಕೆಟ್ ಆಕಾಂಕ್ಷಿ ಅವ್ವೇರಹಳ್ಳಿ ವಿವೇಕಾನಂದ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಹಲವು ವರ್ಷಗಳಿಂದ ಜೆಡಿಎಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಶ್ರಮಿಸುತ್ತಿರುವ ನಾನು, ಈ ಬಾರಿಯ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಆ ಕಾರಣಕ್ಕೆ ಈಗಾಗಲೇ ಮಂಡ್ಯ ಜಿಲ್ಲೆಯ ಎಲ್ಲಾ ತಾಲೂಕುಗಳು ಹಾಗೂ ಕ್ಷೇತ್ರ ವ್ಯಾಪ್ತಿಯ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ, ಪಕ್ಷ ಸಂಘಟಿಸುತ್ತಾ ಚುನಾವಣೆಗೆ ಸಿದ್ಧತೆ ನಡೆಸುತ್ತಿದ್ದೇನೆ ಎಂದರು.

ಈಗಾಗಲೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ರಾಜ್ಯ ಹಾಗೂ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದು, ಹೆಚ್ಚಿಕೆ ಬಳಿ ಟಿಕೆಟ್‌ಗಾಗಿ ಮನವಿ ಸಲ್ಲಿಸಿದ್ದೇನೆ. ಜೊತೆಗೆ ಈ ಬಾರಿ ನನಗೆ ಟಿಕೆಟ್ ಸಿಗುವ ವಿಶ್ವಾಸವಿದ್ದು, ಟಿಕೆಟ್ ಸಿಕ್ಕರೆ ಚುನಾವಣೆ ಎದುರಿಸಲು ಸಿದ್ಧನಿದ್ದೇನೆ ಎಂದು ತಿಳಿಸಿದರು.

ಶಿಕ್ಷಣ ಇಲಾಖೆ ಲಿಪಿಕರು, ಡಿ–ಗ್ರೂಪ್ ನೌಕರರ ಸಂಘದ ಅಧ್ಯಕ್ಷರಾಗಿ ಆನಂದ್ ಆಯ್ಕೆ

ಮೈಸೂರು: ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಡಿ–ಗ್ರೂಪ್ ನೌಕರರ ಸಂಘದ ಮೈಸೂರು ಜಿಲ್ಲಾ ಶಾಖೆ ಪುನರ್ ರಚಿತಗೊಂಡಿದ್ದು, ಮೈಸೂರು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಚೇರಿ ಅಧೀಕ್ಷಕ ಕೆ.ಬಿ. ಆನಂದ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ಕೆ.ಜಿ.ಜಯಕಾಂತು, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಮತಿ ರೂಪಾ ಜಿ.ಸಿ., ಸಂಘಟನಾ ಕಾರ್ಯದರ್ಶಿಗಳಾಗಿ ಯೋಗೇಶ್, ಸಿ.ಮಧುಸೂದನ್, ಕೆ.ಎಂ.ಯತೀಶ್, ಆರ್. ರೊನಾಲ್ಡ್, ಉಪಾಧ್ಯಕ್ಷರಾಗಿ ಶ್ರೀಮತಿ ಆರ್.ಕಲ್ಪನಾ, ಮೋಹನ್ ಕುಮಾರ್, ಧನರಾಜ್, ಖಜಾಂಚಿಯಾಗಿ ಸುಬ್ರಹ್ಮಣ್ಯ ಬಾಬು ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಅಂತಾರಾಷ್ಟ್ರೀಯ ಕರಾಟೆ ಚಾಂಪಿಯನ್ ಶಿಪ್‌ಗೆ ಕೋಲಾರದ ಮಹಿಳೆ ಆಯ್ಕೆ

ಕೋಲಾರ: ಮೇ ತಿಂಗಳಿನಲ್ಲಿ ಮಲೇಷ್ಯಾದ ಓಕಿನೋವಾ ಗೋಜೋ ರಿಯೋ ಇಫೋ ಕ್ರೀಡಾಂಗಣದಲ್ಲಿ ನಡೆಯಲಿರುವ 20ನೇ ಅಂತರರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್‌ಗೆ ನಗರದ ರುಮಾನಾ ಕೌಸರ್ ಬೇಗ್ ಆಯ್ಕೆಯಾಗಿದ್ದಾರೆ.

ಈಗಾಗಲೇ ರುಮಾನಾ ಕೌಸರ್ ಬೇಗ್, ಹೈದರಾಬಾದ್‌ನಲ್ಲಿ ನಡೆದ 2024ರ ಚಾಂಪಿಯನ್‌ಶಿಪ್ ಹಾಗೂ ಮೆರಿಟ್ ಸರ್ಟಿಫಿಕೇಟ್ ಪಡೆದುಕೊಂಡಿದ್ದಾರೆ. ಅಲ್ಲದೇ ರಾಜ್ಯ ಮಟ್ಟದಲ್ಲಿ 30 ಪದಕಗಳು ಮತ್ತು 100 ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕರಾಟೆ ಟ್ರೋಫಿಗಳನ್ನು ಗಳಿಸಿ ಸಾಧನೆ ಮಾಡಿದ್ದಾರೆ. ಸಾಧಕ ರತ್ನ ರಾಷ್ಟ್ರೀಯ ಪ್ರಶಸ್ತಿ ಕರಾಟೆ 2023, ಇಂಡಿಯಾ ಬುಕ್ ಆಫ್ ರೆಕಾರ್ಡ್ ಚಿನ್ನದ ಪದಕಗಳ ಜೊತೆಗೆ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಇವರು ವಸತಿ ಶಾಲೆಗಳಲ್ಲಿ ಸುಮಾರು 3000 ಬಾಲಕಿಯರಿಗೆ ಆತ್ಮರಕ್ಷಣೆಗಾಗಿ ಕರಾಟೆ ತರಬೇತಿ ನೀಡುತ್ತಿದ್ದಾರೆ. ಇವರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವಕಾಶ ಸಿಕ್ಕಿರುವುದಕ್ಕೆ ಜಿಲ್ಲೆಯ ಜನ ಸಂಭ್ರಮಿಸಿದ್ದಾರೆ.

ಪದವಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಅಹ್ವಾನ

ಮೈಸೂರು, ಫೆ.4– 2024ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ 19ನೇ ವಾರ್ಷಿಕ ಘಟಿಕೋತ್ಸವವನ್ನು ಮಾರ್ಚ್ ತಿಂಗಳ ಎರಡನೇ ವಾರದಲ್ಲಿ ನಡೆಸಲಾಗುತ್ತಿದ್ದು, ಅಭ್ಯರ್ಥಿಗಳಿಂದ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಆನ್‌ಲೈನ್ ಮುಖಾಂತರವೇ ಸಲ್ಲಿಸಿ 'ಉಪಸ್ಥಿತಿಯಲ್ಲಿ' ಅಥವಾ 'ಅನುಪಸ್ಥಿತಿಯಲ್ಲಿ' ಪದವಿ ಪ್ರಮಾಣ ಪತ್ರವನ್ನು ಪಡೆಯಬಹುದಾಗಿದೆ.

ಘಟಿಕೋತ್ಸವ ಪ್ರಮಾಣಪತ್ರ ಪಡೆಯಲು ನಿಗದಿತ ನಮೂನೆಯ ಆನ್‌ಲೈನ್ ಅರ್ಜಿಯನ್ನು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ wwwksoumysuru.ac.in ಪ್ರಕಟಪಡಿಸಲಾಗಿದ್ದು, ಆನ್‌ಲೈನ್ ಅರ್ಜಿಯಲ್ಲಿ ಕೋರಿರುವ ಎಲ್ಲಾ ಮಾಹಿತಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಭರ್ತಿ ಮಾಡಿ ಸಲ್ಲಿಸಲು ಮತ್ತು ಆನ್‌ಲೈನ್ ಮುಖಾಂತರವೇ ಶುಲ್ಕ ಪಾವತಿಸಲು ತಿಳಿಸಲಾಗಿದೆ. ಅರ್ಜಿಯಲ್ಲಿ ಸೂಚಿಸಿರುವ ಜಾಗದಲ್ಲಿ ಪಾಸ್ ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರವನ್ನು ಕಡ್ಡಾಯವಾಗಿ ಸ್ಕ್ಯಾನ್ ಮಾಡಿ ನಮೂದಿಸುವುದು (ಅಧಿಕೃತವಾದ, ಕರಾರುವಕ್ಕಾದ, Plain Background ಹೊಂದಿರುವ ಭಾವಚಿತ್ರವನ್ನು ಮಾತ್ರ ನಮೂದಿಸುವುದು ತಪ್ಪಿದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.) ಶುಲ್ಕ ಪಾವತಿಸಲು ಕೊನೆಯ ದಿನಾಂಕ (ಉಪಸ್ಥಿತರಿಗೆ ಮಾತ್ರ) ದಂಡ ಶುಲ್ಕವಿಲ್ಲದೆ ಫೆ.20, 100/– ರೂ. ದಂಡ ಶುಲ್ಕದೊಡನೆ ಫೆ.25 ಕೊನೆಯ ದಿನಾಂಕವಾಗಿರುತ್ತದೆ.

ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮತ್ತು ಘಟಿಕೋತ್ಸವದಲ್ಲಿ ಭಾಗವಹಿಸಲು ಸಾಧ್ಯವಾಗದಂತಹ ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರವನ್ನು ಘಟಿಕೋತ್ಸವ ಕಾರ್ಯಕ್ರಮ ನಡೆದ ನಂತರ ತ್ವರಿತ ಅಂಚೆ ಮೂಲಕ ಕಳುಹಿಸಿಕೊಡಲಾಗುವುದು.

ಯಾವುದೇ ವಿದ್ಯಾರ್ಥಿಯ ಅಂತಿಮ ವರ್ಷದ ಅಂಕಪಟ್ಟಿಯಲ್ಲಿ ದರ್ಜೆ ಘೋಷಣೆಯಾಗದಿದ್ದಲ್ಲಿ Not Completed Lower Examination (NCL) ತೆರವುಗೊಂಡಿರದಿದ್ದಲ್ಲಿ ಅಥವಾ ಇನ್ಯಾವುದೇ ತಿದ್ದುಪಡಿಗಳಿದ್ದಲ್ಲಿ, ತಿದ್ದುಪಡಿಗಾಗಿ ತಮ್ಮ ಮೂಲ ಅಂಕಪಟ್ಟಿಗಳನ್ನು ಕುಲಸಚಿವರು(ಪರೀಕ್ಷಾಂಗ) ಕರಾಮುವಿ, ಮೈಸೂರುರವರ ವಿಳಾಸಕ್ಕೆ ಫೆ.15ರೊಳಗೆ ಸಲ್ಲಿಸಿ ಸರಿಪಡಿಸಿಕೊಂಡು ದರ್ಜೆ ಘೋಷಣೆ ಮಾಡಿಸಿಕೊಳ್ಳುವುದು. ತಪ್ಪಿದಲ್ಲಿ ಪದವಿ ಪ್ರಮಾಣ ಪತ್ರವನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಪರಿದೃಶ್ಯ ಅಂತಾರಾಷ್ಟ್ರೀಯ ಕಿರುಚಿತ್ರ, ಸಾಕ್ಷ್ಯ ಚಿತ್ರೋತ್ಸವಕ್ಕೆ ತೆರೆ

ವಿವಿಧ ವಿಭಾಗಗಳಿಗೆ ಪ್ರಶಸ್ತಿ ಪ್ರದಾನ



ಎರಡು ದಿನಗಳ 'ಪರಿದೃಶ್ಯ' ಅಂತಾರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವದ ಸಮಾರೋಪ ಸಮಾರಂಭವನ್ನು ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಉದ್ಘಾಟಿಸಿದರು. ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಮೈಸೂರು ಸಿನಿಮಾ ಸೊಸೈಟಿ ಅಧ್ಯಕ್ಷ ಡಾ.ಚಂದ್ರಶೇಖರ್ ಉಪಸ್ಥಿತರಿದ್ದರು.

ಮೈಸೂರು, ಫೆ.4(ಎಂಕೆ)– ಮೈಸೂರು ಸಿನಿಮಾ ಸೊಸೈಟಿ ಹಾಗೂ ಭಾರತೀಯ ಚಿತ್ರ ಸಾಧನದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಪರಿದೃಶ್ಯ' ಅಂತಾರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವಕ್ಕೆ ಭಾನುವಾರ ಯಶಸ್ವಿ ತೆರೆಬಿದ್ದಿತು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಡೆದ ಅಂತರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವದಲ್ಲಿ 20 ದೇಶಗಳಿಂದ 300ಕ್ಕೂ ಹೆಚ್ಚು ಚಿತ್ರಗಳು ಪಾಲ್ಗೊಂಡಿದ್ದು, 25 ಪ್ರಶಸ್ತಿಗಳನ್ನು ವಿತರಿಸಲಾಯಿತು. ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಪದ್ಮಶ್ರೀ ಪುರಸ್ಕೃತ, ಸ್ವರ್ಣ ಕಮಲ ಪ್ರಶಸ್ತಿ ವಿಜೇತ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಖ್ಯಾತ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಹಾಗೂ ಮೈಸೂರು ಸಿನಿಮಾ ಸೊಸೈಟಿ ಅಧ್ಯಕ್ಷ ಡಾ.ಚಂದ್ರಶೇಖರ್ ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

ಕರ್ನಾಟಕದಲ್ಲಿ ಕಲೆ ನತದೃಷ್ಟ ಪರಿಸ್ಥಿತಿ ಎದುರಿಸುತ್ತಿದೆ...

ಫಿಲಂ ಇನ್‌ಸ್ಟಿಟ್ಯೂಟ್ ಮೈಸೂರಿನಲ್ಲೇ ಆಗಬೇಕಿತ್ತು ಎಂದಿತ್ತು. ಆದರೆ, ಸರ್ಕಾರ ಜಾಗ ಕೊಡಲಿಲ್ಲ... ಫಿಲಂ ಸೌಂಡ್ ನೆಗೆಟಿವ್ ಪ್ರೊಸೆಸ್ ಸಂಸ್ಥೆಗೆ ಕೆಆರ್‌ಎಸ್ ಬಳಿ ಸರ್ಕಾರ ಜಾಗಕೊಡದಿದ್ದರಿಂದ ಅದು ಊಟಿಗೆ ಹೋಯ್ತು... ಪೂನಾ ಸಂಸ್ಥೆ ಪೂನಾಗೆ ಹೋಯ್ತು... ಮೈಸೂರಿನಲ್ಲಿ ಚಿಲ್ಡ್ರನ್ ಇನ್‌ಸ್ಟಿಟ್ಯೂಟ್ ಫಿಲಂ ಮಾಡಬೇಕು ಎಂದಾಗಿತ್ತು. ಆದರೆ ಅದಕ್ಕೂ ಸರ್ಕಾರ ಜಾಗಕೊಡದೆ ಇದ್ದಿದ್ದರಿಂದ ಅದು ಹೈದರಾಬಾದ್‌ಗೆ ಹೋಯ್ತು... ಒಟ್ಟಿನಲ್ಲಿ ರಾಜಕೀಯದವರ ನಾವೇ ಮುಖ್ಯವೆಂಬ ಧೋರಣೆಯಿಂದ ಕರ್ನಾಟಕದ ಕಲೆ ನತದೃಷ್ಟ ಪರಿಸ್ಥಿತಿ ಎದುರಿಸುತ್ತಿದೆ.
–ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಖ್ಯಾತ ನಿರ್ದೇಶಕ

ವಿವಿಧ ವಿಭಾಗಗಳಲ್ಲಿ ನಡೆದ ಚಿತ್ರೋತ್ಸವದಲ್ಲಿ **ಬೆಸ್ಟ್ ಎಡಿಟಿಂಗ್ ವಿದ್ಯಾರ್ಥಿ ವಿಭಾಗದಲ್ಲಿ** 'ಲಾಸ್ಟ್ ಇನ್ ಮೆಮೊರಿ'(ಇಂಗ್ಲಿಷ್) ಕಿರುಚಿತ್ರದ ಹಿಂದೋಲ್ ಎಚ್ ಶಿಹಾನ್, **ಬೆಸ್ಟ್ ಎಡಿಟಿಂಗ್ ವೃತ್ತಿಪರ ವಿಭಾಗದಲ್ಲಿ** 'ಪಿನ್ನಿ'(ಕನ್ನಡ) ಕಿರುಚಿತ್ರದ ಭುವನ್ ಸತ್ಯ, **ಬೆಸ್ಟ್ ದೃಶ್ಯ ಪರಿಣಾಮ ವಿದ್ಯಾರ್ಥಿ ವಿಭಾಗದಲ್ಲಿ** 'ಡ್ರೀಮ್ಸ್'(ಇಂಗ್ಲಿಷ್, ಹಿಂದಿ) ಕಿರುಚಿತ್ರದ ರಿಷಬ್ ಗೊಗೋಯ್, **ಬೆಸ್ಟ್ ದೃಶ್ಯ ಪರಿಣಾಮ ವೃತ್ತಿಪರ ವಿಭಾಗದಲ್ಲಿ** 'ಪೊರ್ ಪುರುಖುಕ್ಕಲ್'(ಮಲೆಯಾಳಂ) ಕಿರುಚಿತ್ರದ ಸುಬಿನ್, **ಪ್ರೊಡಕ್ಷನ್ ಡಿಸೈನ್ ವಿದ್ಯಾರ್ಥಿ ವಿಭಾಗದಲ್ಲಿ** 'ಸಿ ಫಾರ್ ಮಿಂಟಾಂವ್'(ಹಿಂದಿ) ಕಿರುಚಿತ್ರದ ಹರತಾಗ್ನ ಪಾಂಡ್ಯ, **ಪ್ರೊಡಕ್ಷನ್ ಡಿಸೈನ್ ವೃತ್ತಿಪರ ವಿಭಾಗದಲ್ಲಿ** 'ಪೊಟ್ರೈಟ್'(ಬಂಗಾಳ) ಕಿರುಚಿತ್ರದ ಸ್ರೋಮೋನಾ ಘೋಷ್, ಕುನಾಲ್ ಚೌಧರಿ ಅತ್ಯುತ್ತಮ ಪ್ರಶಸ್ತಿ ಪಡೆದುಕೊಂಡರು.

ಹಾಗೆಂಯೇ **ಸಿನಿಮಾಟೋಗ್ರಫಿ ವಿದ್ಯಾರ್ಥಿ ವಿಭಾಗದಲ್ಲಿ** 'ದಿ ಹೋಂ ಇನ್ ಸೌಂಡ್'(ಬಂಗಾಳ) ಕಿರುಚಿತ್ರದ ಆಸಿಫ್ ಉದ್ದೀನ್, ಫೌದ್ದುಜ್ಜಮಾನ್, **ಸಿನಿಮಾಟೋಗ್ರಫಿ ವೃತ್ತಿಪರ ವಿಭಾಗದಲ್ಲಿ** 'ಎನ್ವನ್‌ಗ್ಲೆಡ್'(ಮರಾಠಿ) ಕಿರುಚಿತ್ರದ ಸೂರಜ್ ಠಾಕೂರ್, **ಸಂಗೀತ ವಿದ್ಯಾರ್ಥಿ ವಿಭಾಗದಲ್ಲಿ** 'ಡಬಲ್ ಟಿಕ್'(ಕನ್ನಡ) ಕಿರುಚಿತ್ರದ ಸಂವತ್ಸರ, **ಸಂಗೀತ ವೃತ್ತಿಪರ ವಿಭಾಗದಲ್ಲಿ** 'ಪೊಟ್ರೈಟ್'(ಬಂಗಾಳ) ಭೀಷ್ಮಪ್ರತಿಂ ಚಕ್ರಬರ್ತಿ, **ಸಂಗೀತ ವಿನ್ಯಾಸ ವಿದ್ಯಾರ್ಥಿ ವಿಭಾಗದಲ್ಲಿ** 'ಎ ಟೈಗರ್ ಎಲ್, ದೇರ್‌ಫೋರ್'(ಬಂಗಾಳ, ಹಿಂದಿ, ಮರಾಠಿ) ಕಿರುಚಿತ್ರದ ಅರ್ಕಾದೇ, **ಸಂಗೀತ ವಿನ್ಯಾಸ ವೃತ್ತಿಪರ ವಿಭಾಗದಲ್ಲಿ** 'ಎನ್ವನ್‌ಗ್ಲೆಡ್'(ಮರಾಠಿ) ಕಿರುಚಿತ್ರದ ಸುನೀಲ್ ಲೆವಿ, **ಸ್ಕ್ರೀನ್ ಪ್ಲೆ ವಿದ್ಯಾರ್ಥಿ ವಿಭಾಗದಲ್ಲಿ** 'ಅಸ್ಯೆವಃ'(ಇಂಗ್ಲಿಷ್) ವೀರೇನ್ ಮಯಾಪುರಿ, **ಸ್ಕ್ರೀನ್ ಪ್ಲೆ ವೃತ್ತಿಪರ ವಿಭಾಗದಲ್ಲಿ** ಪಿನ್ನಿ(ಕನ್ನಡ) ಚಿತ್ರದ ಭುವನ್ ಸತ್ಯ ಪ್ರಶಸ್ತಿ ಪಡೆದರು.

ನಿರ್ದೇಶಕ ವಿದ್ಯಾರ್ಥಿ ವಿಭಾಗದಲ್ಲಿ 'ಡಬಲ್ ಟಿಕ್'(ಕನ್ನಡ) ಕಿರುಚಿತ್ರದ ಕೆ.ಆರ್.ಈಶಾನ್ಯ ಶರ್ಮಾ, **ನಿರ್ದೇಶಕ ವೃತ್ತಿಪರ ವಿಭಾಗದಲ್ಲಿ** 'ಪೊಟ್ರೈಟ್'(ಬಂಗಾಳ) ಕಿರುಚಿತ್ರದ ಕುನಾಲ್ ಚೌಧರಿ, **ಬೆಸ್ಟ್ ಆಕ್ಟರ್ ಮಹಿಳಾ ವಿದ್ಯಾರ್ಥಿ ವಿಭಾಗದಲ್ಲಿ** ಮಟನ್(ಹಿಂದಿ) ಕಿರುಚಿತ್ರದ ಫಲಾಕ್ ಖಾನ್ ಚಂಪರನ್, **ಬೆಸ್ಟ್ ಆಕ್ಟರ್ ಮಹಿಳಾ ವೃತ್ತಿಪರ ವಿಭಾಗದಲ್ಲಿ** ತುನ್ಯೆ(ತಮಿಳು) ಕಿರುಚಿತ್ರದ ಲೀಲಾ ಸಾಮ್ಸನ್, **ಬೆಸ್ಟ್ ಆಕ್ಟರ್ ಪುರುಷ ವಿದ್ಯಾರ್ಥಿ ವಿಭಾಗದಲ್ಲಿ** 'ಎ ಟೈಗರ್ ಎಲ್, ದೇರ್‌ಫೋರ್'(ಬಂಗಾಳ, ಹಿಂದಿ, ಮರಾಠಿ) ಕಿರುಚಿತ್ರದ ಸೋಮನಾಥ್ ಮಂಡಲ್, **ಬೆಸ್ಟ್ ಆಕ್ಟರ್ ಪುರುಷ ವೃತ್ತಿಪರ ವಿಭಾಗದಲ್ಲಿ** 'ಎನ್ವನ್‌ಗ್ಲೆಡ್'(ಮರಾಠಿ) ಕಿರುಚಿತ್ರದ ರಾಜೇಶ್ ಆರ್.ಪಡ್ನೇಕರ್ ಪ್ರಶಸ್ತಿ ಬಾಚಿಕೊಂಡರು.

ಸಾಕ್ಷ್ಯಚಿತ್ರ ವಿಶೇಷ ಉಲ್ಲೇಖ ವಿದ್ಯಾರ್ಥಿ ವಿಭಾಗದಲ್ಲಿ 'ಕೃಷ್ಣನ್ ಟು ಪಿಂಚ್ ಇನ್ಫಿನಿಟಿ'(ಇಂಗ್ಲಿಷ್) ಸಾಕ್ಷ್ಯಚಿತ್ರದ ಗೌರವ್ ಕುಮಾರ್ ಕೃಷ್ಣ, **ಸಾಕ್ಷ್ಯಚಿತ್ರ ವಿಶೇಷ ಉಲ್ಲೇಖ ವೃತ್ತಿಪರ ವಿಭಾಗದಲ್ಲಿ** 'ಬಿರುಬಾಲ– ದಿ ಫಿಯರ್‌ಲೆಸ್ ಕ್ರುಸೇಡರ್'(ಇಂಗ್ಲಿಷ್) ಸಾಕ್ಷ್ಯಚಿತ್ರದ ದೀರಜ್ ಕಶ್ಯಪ್ ಹಾಗೂ ರಿಕಿ ದೌಲ, **ಅತ್ಯುತ್ತಮ ಸಾಕ್ಷ್ಯಚಿತ್ರ ವಿದ್ಯಾರ್ಥಿ ವಿಭಾಗದಲ್ಲಿ** 'ಲುಲಾಬೈ ಆಫ್ ವೈವ್ಸ್' **ಅತ್ಯುತ್ತಮ ಸಾಕ್ಷ್ಯಚಿತ್ರ ವೃತ್ತಿಪರ ವಿಭಾಗದಲ್ಲಿ** 'ಪೆಣ್ಮುದ್ರಾ' **ಅತ್ಯುತ್ತಮ ಕಿರುಚಿತ್ರ ವಿದ್ಯಾರ್ಥಿ ವಿಭಾಗದಲ್ಲಿ** ಸನ್‌ಫ್ಲವರ್ಸ್ ವೇರ್ ದ ಫಸ್ಟ್ ಓನ್ಸ್ ಟು ನೋನ್'(ಕನ್ನಡ) ಹಾಗೂ **ಅತ್ಯುತ್ತಮ ಕಿರುಚಿತ್ರ ವೃತ್ತಿಪರ ವಿಭಾಗದಲ್ಲಿ** 'ಪೊಟ್ರೈಟ್'(ಬಂಗಾಳ) ಪ್ರಶಸ್ತಿ ಪಡೆದುಕೊಂಡಿತು. ಪ್ರಶಸ್ತಿ ವಿತರಣೆಗೂ ಮುನ್ನ ವಿದುಷಿ ನಾಗಲಕ್ಷ್ಮಿ ನಾಗರಾಜನ್ ಅವರ ಭರತನಾಟ್ಯ ಗಮನ ಸೆಳೆಯಿತು.

ಮೊದಲ ಹೆಜ್ಜೆ: ಪ್ರಶಸ್ತಿ ವಿತರಿಸಿ ಮಾತನಾಡಿದ ಖ್ಯಾತ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಕಿರುಚಿತ್ರ ಹಾಗೂ ಸಾಕ್ಷ್ಯಚಿತ್ರಗಳು ಚಲನಚಿತ್ರ ನಿರ್ಮಾಣದ ಮೊದಲ ಕಲಿಕಾ ಹೆಜ್ಜೆಗಳಾಗಿವೆ. ಇಂದು ತಂತ್ರಜ್ಞಾನದ ಸಹಕಾರದಿಂದ ಕಿರುಚಿತ್ರ ಹಾಗೂ ಸಾಕ್ಷ್ಯಚಿತ್ರಗಳ ನಿರ್ಮಾಣವನ್ನು ಸುಲಭ ಹಾಗೂ ಪರಿಣಾಮಕಾರಿಯಾಗಿ ಮಾಡಬಹುದು. ಸಿನಿಮಾ ಎಂಬ ಅದ್ಭುತ ಅನುಭವ ಕಿರುಚಿತ್ರಗಳಿಂದ ಆರಂಭವಾಗುತ್ತದೆ ಎಂದು ತಿಳಿಸಿದರು.

ಕನ್ನಡ ಚಿತ್ರರಂಗ ಪ್ಯಾನ್ ಇಂಡಿಯಾ ವ್ಯಾಮೋಹಕ್ಕೆ ಬಲಿಯಾದರೆ ಸ್ಥಳೀಯ ಕಥೆಗಳಿಗೆ ಉಳಿಗಾಲವಿಲ್ಲ

ನಿರ್ದೇಶಕ ಗಿರೀಶ್ ಕಾಸರವಳ್ಳಿ ಎಚ್ಚರಿಕೆ



ಮೈಸೂರು, ಫೆ.4 (ಎಂಕೆ)– ಕನ್ನಡ ಚಿತ್ರರಂಗ ಪ್ಯಾನ್ ಇಂಡಿಯಾ ವ್ಯಾಮೋಹಕ್ಕೆ ಬಲಿಯಾದರೆ ಸ್ಥಳೀಯ ಕಥೆಗಳನ್ನು ಕಳೆದುಕೊಳ್ಳಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ ಎಂದು ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಎಚ್ಚರಿಸಿದರು.

ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಮೈಸೂರು ಸಿನಿಮಾ ಸೊಸೈಟಿ ಹಾಗೂ ಭಾರತೀಯ ಚಿತ್ರ ಸಾಧನದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಪರಿದೃಶ್ಯ' ಅಂತಾರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯ ಚಿತ್ರೋತ್ಸವದಲ್ಲಿ 'ಕನ್ನಡದ ಹೊಸ ಅಲೆಯ ಚಿತ್ರಗಳು' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇವತ್ತಿನ ಕನ್ನಡ ಸಿನಿಮಾಗಳು ಕನ್ನಡತನವನ್ನು ಎತ್ತಿ ಹಿಡಿಯುತ್ತಿವೆ. ಆದರೂ ತಮಿಳು ಮತ್ತು ತೆಲುಗು ಚಿತ್ರಗಳ ಪ್ರಭಾವ ಕನ್ನಡ ಚಿತ್ರಗಳ ಮೇಲೆ ಸಾಕಷ್ಟು ಉಂಟಾಗಿದೆ ಎನ್ನುವುದನ್ನೂ ಒಪ್ಪಿಕೊಳ್ಳಲೇಬೇಕಾಗಿದೆ. ಕನ್ನಡ ಚಿತ್ರರಂಗ ಪ್ಯಾನ್ ಇಂಡಿಯಾ ವ್ಯಾಮೋಹಕ್ಕೆ ಬಲಿಯಾದರೆ ಹಿಂದಿ ಸಿನಿಮಾಗಳು ಯಾವ ಸಮಸ್ಯೆಗಳನ್ನು ಎದುರಿಸಿತ್ತೋ ಅದೆಲ್ಲವನ್ನೂ ಎದುರಿಸಬೇಕಾಗುತ್ತದೆ. ಸ್ಥಳೀಯತೆಯ ಆಧಾರದಲ್ಲಿ ಕಟ್ಟಿಕೊಡಬಹುದಾದ ಕಥೆಗಳನ್ನು ಕಳೆದುಕೊಳ್ಳಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ ಎಂದರು.

ಹೊಸ ಅಲೆಯ ಚಿತ್ರಗಳು ಮೊದಲು ಪ್ರಾರಂಭವಾಗಿದ್ದು ಕನ್ನಡದಲ್ಲಿ. ಆದರೆ ಹೊಸ ಅಲೆಯ ಸಿನಿಮಾಗಳ ಸ್ವರ್ಣ ಮಹೋತ್ಸವ ಆಚರಿಸಿದ್ದು ಕೇರಳದಲ್ಲಿ. ಕನ್ನಡ ಚಿತ್ರರಂಗದ ನಿರಾಸಕ್ತಿಯೇ ಇದಕ್ಕೆ ಕಾರಣ. ಜಾಗತಿಕ ಸಿನಿಮಾ ರಂಗಕ್ಕೆ ಕನ್ನಡ ಚಿತ್ರರಂಗದ್ದು ದೊಡ್ಡ ಕೊಡುಗೆಯಿದೆ. ಅದನ್ನು ಯಾರೂ ಗುರುತಿಸುತ್ತಿಲ್ಲ ಎನ್ನುವ ಕೊರಗು ನನ್ನಲ್ಲಿತ್ತು. ಆ ಕೊರಗನ್ನು ಪರಿದೃಶ್ಯ ಚಿತ್ರೋತ್ಸವ ನೀಗಿಸಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

ಸಮಾಜವಾದಿ ಚಿಂತನೆಯ ಮುಖಾಂತರ ಹೊಸ ಅಲೆಯ ಚಿತ್ರಗಳು ಹುಟ್ಟಿಕೊಂಡವು. ಸಂಸ್ಕಾರ ಹೊಸ ಅಲೆಯ ಮೊದಲ ಕನ್ನಡ ಚಿತ್ರ. ಭಾವನಾತ್ಮಕವಾಗಿ ಉದ್ರೇಕಿಸದೇ ವೈಚಾರಿಕವಾಗಿ ಉದ್ರೇಕಿಸುವ ಕಥೆನ್ನು ಕಟ್ಟುವ ಟ್ರೆಂಡ್ ಹುಟ್ಟುಹಾಕಿದ್ದು ಸಂಸ್ಕಾರ. ಆದ್ದರಿಂದ 'ಸಂಸ್ಕಾರ' ಚಿತ್ರವನ್ನು ಕನ್ನಡದ ಮೊದಲ ಹೊಸ ಅಲೆಯ ಸಿನಿಮಾ ಎಂದು ಗುರುತಿಸಲಾಗುತ್ತದೆ ಎಂದು ಅವರು ತಿಳಿಸಿದರು.

ವಿರಾಜಪೇಟೆ ಕ್ಷೇತ್ರದಲ್ಲಿ ಶೇ.95ರಷ್ಟು ಕಾಮಗಾರಿ

• ಶಾಸಕ ಎ.ಎಸ್.ಪೊನ್ನಣ್ಣ ಹೇಳಿಕೆ • ಸುಂಕದಕಟ್ಟೆ ಬಳಿ ರಸ್ತೆ ಉದ್ಘಾಟನೆ

ವಿರಾಜಪೇಟೆ, ಫೆ.4–ಕ್ಷೇತ್ರದ ರಸ್ತೆ ಹಾಗೂ ಇತರ ಅಭಿವೃದ್ಧಿಗಳಿಗೆ ಭೂಮಿ ಪೂಜೆ ಮಾಡಿರುವ ಶೇ.95ರಷ್ಟು ಕಾಮಗಾರಿಗಳು ಪ್ರಾಮಾಣಿಕವಾಗಿ ನಡೆಯುತ್ತಿದ್ದು, ಈಗಾಗಲೇ ಕೆಲವು ಅಭಿವೃದ್ಧಿ ಕಾರ್ಯಗಳು ಉದ್ಘಾಟನೆಗೊಂಡಿವೆ ಎಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.



ವಿರಾಜಪೇಟೆ–ಸಿದ್ದಾಪುರ ಮುಖ್ಯರಸ್ತೆಯ ಸುಂಕದಕಟ್ಟೆ ಬಳಿ ಶಾಸಕ ಎ.ಎಸ್.ಪೊನ್ನಣ್ಣ ರಸ್ತೆ ಉದ್ಘಾಟಿಸಿದರು. ಕೆ.ಸಿ.ಶಬರೀಶ್, ಪಿ.ರಂಜಿ ಪೂಣಚ್ಚ, ಆರ್.ಕೆ.ಅಬ್ದುಲ್ ಸಲಾಂ, ನರೇಂದ್ರ ಕಾಮತ್, ಜಿ.ಜಿ.ಮೋಹನ್, ಹಮೀದ್, ಶಬೀರ್ ಮತ್ತಿತರರಿದ್ದರು.

ನಗರ ವ್ಯಾಪ್ತಿಯ ವಿರಾಜಪೇಟೆ–ಸಿದ್ದಾಪುರ ಮುಖ್ಯರಸ್ತೆಯ ಸುಂಕದಕಟ್ಟೆ ಬಳಿ ಲೋಕೋಪಯೋಗಿ ಇಲಾಖೆ ವತಿಯಿಂದ 51 ಲಕ್ಷ ರೂ. ಅನುದಾನದಲ್ಲಿ ರಸ್ತೆ ಅಗಲೀಕರಣ ಮತ್ತು ಡಾಂಬರೀಕರಣಗೊಂಡ ರಸ್ತೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಗುತ್ತಿಗೆದಾರರು ಯವುದೇ ಕಾಮಗಾರಿಗಳನ್ನು ನಡೆಸುವಾಗ ಸಮಯಕ್ಕೆ ಸರಿಯಾಗಿ ಗುಣಮಟ್ಟದಿಂದ ಮುಗಿಸಬೇಕು ಎಂದು ಎಚ್ಚರಿಸಿದರು.

ರೋಡ್ ಮಾರ್ಕ್ ಹಾಕುವುದು, ಕಾಮಗಾರಿ ಕಳಪೆ ಆಗದಂತೆ ಎಚ್ಚರ ವಹಿಸಬೇಕು. ಇಲ್ಲವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಲಾಗುವುದು. 2 ತಿಂಗಳ ಹಿಂದೆ ಈ ರಸ್ತೆ ಕಾಮಗಾರಿಗೆ ಭೂಮಿಪೂಜೆ ಮಾಡಲಾಗಿತ್ತು. ಕಾಮಗಾರಿ ಪೂರ್ಣಗೊಂಡು ಇಂದು ಉದ್ಘಾಟಿಸಲಾಗಿದೆ ಎಂದರು.

ಉಳಿದ ಎಲ್ಲಾ ಕಾಮಗಾರಿಗಳನ್ನು ಹಂತ ಹಂತವಾಗಿ ನಡೆಸಲಾಗುವುದು. ಕ್ಷೇತ್ರದ ಜನರ ಅನುಕೂಲಕ್ಕಾಗಿ ರಾಜ್ಯ ಸರ್ಕಾರದಿಂದ ಹೆಚ್ಚು ಅನುದಾನ ತಂದು ವಿವಿಧ ಯೋಜನೆಗಳ ಸೌಲಭ್ಯ, ಉತ್ತಮ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವುದಾಗಿ ತಿಳಿಸಿದರು.

ಸ್ಥಳೀಯ ನಿವಾಸಿ ಕೆ.ಸಿ.ಶಬರೀಶ್ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ. ರಂಜಿ ಪೂಣಚ್ಚ, ಮುಖಂಡರಾದ ಆರ್.ಕೆ.ಅಬ್ದುಲ್ ಸಲಾಂ, ನರೇಂದ್ರ ಕಾಮತ್, ಜಿ.ಜಿ.ಮೋಹನ್, ಹಮೀದ್, ಶಬೀರ್, ಪುರಸಭೆ ಸದಸ್ಯರಾದ ಡಿ.ಪಿ.ರಾಜೇಶ್, ಎಂ.ಕೆ.ದೇಚವ್ವ, ಮಹ್ಮದ್ ರಾಫಿ, ರಜನಿಕಾಂತ್, ಸಬಸ್ಟೀನ್ ಬೆನ್ನಿ, ಜಲೀಲ್, ಗುತ್ತಿಗೆದಾರರಾದ ಕೆ.ತಮ್ಮಯ್ಯ, ಎಂ.ದಿಲ್ಲು ಹಾಜರಿದ್ದರು.

ಚೇಲಾವರ ಜಲಪಾತದಲ್ಲಿ ಕೇರಳ ಯುವಕ ಸಾವು

ನಾಪೋಕ್ಲು (ದುಗ್ಗಳ), ಫೆ.4–ಸ್ನಾನ ಮಾಡಲು ಹೊಂಡಕ್ಕೆ ಇಳಿದ ಯುವಕ ಸುಳಿಗೆ ಸಿಲುಕಿ ನೀರು ಪಾಲಾದ ಘಟನೆ ಸಮೀಪದ ಚೆಯ್ಯಂಡಾಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೇಲಾವರ ಜಲಪಾತದಲ್ಲಿ ಭಾನುವಾರ ಮಧ್ಯಾಹ್ನ ನಡೆದಿದೆ.

ಕೇರಳದ ಕಣ್ಣೂರಿನ ಇರಿಟ್ಟಿಯ ಮಹಮ್ಮದ್ ಆಶ್ರಫ್ ಎಂಬುವರ ಪುತ್ರ ರಶೀದ್(25) ಮೃತ ಯುವಕ. ಕೇರಳದ ಕಣ್ಣೂರಿನಿಂದ ರಶೀದ್, ಮಹಮ್ಮದ್ ಶಾಲಿ ಹಾಗೂ ಇಬ್ಬರು ಯುವತಿಯರು ಭಾನುವಾರ ಬೆಳಗ್ಗೆ ಚೇಲಾವರ ಫಾಲ್ಸ್ ವೀಕ್ಷಣೆಗೆ ಬಂದಿದ್ದರು. ಯುವತಿಯರು ಕೇರಳದ ಕ್ಯಾಲಿಕಟ್‌ನಲ್ಲಿ ಹಾಗೂ ಯುವಕರು ಮಟ್ಟನೂರಿನ ಖಾಸಗಿ ಪ್ರವಾಸಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಮಧ್ಯಾಹ್ನ ಬಿಸಿಲಿನ ಝಳ ಇದ್ದ ಕಾರಣ ರಶೀದ್ ಜಲಪಾತ ಕೆಳಭಾಗದ ಹೊಂಡಕ್ಕೆ ಸ್ನಾನ ಮಾಡಲು ಇಳಿದಿದ್ದಾನೆ. ಈ ವೇಳೆ ಸುಳಿಗೆ ಸಿಲುಕಿ ಮೃತಪಟ್ಟಿದ್ದಾನೆ. ಮಡಿಕೇರಿಯ ಅಗ್ನಿಶಾಮಕ ದಳದ ಸಿಬ್ಬಂದಿ ನೀರಿನಿಂದ ಶವವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗಾಗಿ ವೀರಾಜಪೇಟೆಯ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು.

ನಾಪೋಕ್ಲು ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀಧರ್, ರೈಟರ್ ಪ್ರದೀಪ್ ಮತ್ತು ಸಿಬ್ಬಂದಿ ಶರತ್ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೀವ ಹಾನಿ ತಡೆಯಬೇಕಿದೆ: ಹಲವು ವರ್ಷಗಳಿಂದ ಚೇಲಾವರ ಜಲಪಾತದಲ್ಲಿ ಸುಮಾರು 24 ಜನ ಮೃತಪಟ್ಟಿದ್ದು, ಜೀವ ಹಾನಿ ತಡೆಗೆ ನರಿಯಂದಡ ಗ್ರಾಪಂನಿಂದ ಪ್ರಯತ್ನಿಸಲಾಗುತ್ತಿದೆ ಎಂದು ಅಧ್ಯಕ್ಷೆ ಪೆಮ್ಮಂಡ ಕೌಶಿ ಕಾವೇರಮ್ಮ ಹಾಗೂ ಉಪಾಧ್ಯಕ್ಷ ಕೋಡಿರ ವಿನೋದ್ ನಾಣಯ್ಯ ತಿಳಿಸಿದ್ದಾರೆ.



ಚೇಲಾವರ ಜಲಪಾತದಲ್ಲಿ ನೀರುಪಾಲಾದ ಯುವಕ ರಶೀದ್.

ಜಲಪಾತದ ಮೃತ್ಯುಕೂಪಕ್ಕೆ ಶಾಶ್ವತ ಪರಿಹಾರ ಮಾಡಬೇಕಾಗಿದ್ದು, ಇದಕ್ಕೆ ಜಿಲ್ಲಾಡಳಿತ ಹೆಚ್ಚಿನ ಗಮನ ನೀಡಬೇಕು. ಈಗಾಗಲೇ ಜಲಪಾತದ ಅವ್ಯವಸ್ಥೆ ಬಗ್ಗೆ ಶಾಸಕರ ಗಮನಕ್ಕೆ ತರಲಾಗಿದೆ. ಪ್ರವಾಸೋದ್ಯಮ ಇಲಾಖೆಯಿಂದ ಎಲ್ಲಾ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಶಾಸಕರು ಭರವಸೆ ನೀಡಿದ್ದಾರೆ. ಜಲಪಾತದಲ್ಲಿ ಮುಂದೆ ಜೀವಹಾನಿ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರವಾಸಿಗರ ನಿರ್ಲಕ್ಷ್ಯ: ಈ ಜಲಪಾತದಲ್ಲಿ ಯುವಕರೇ ಹೆಚ್ಚು ಪ್ರಾಣ ತೆತ್ತಿದ್ದಾರೆ. ಗ್ರಾಪಂನಿಂದ ಜಲಪಾತದ ಸುತ್ತಲೂ ತಂತಿಬೇಲಿ ಹಾಕಿ, ಪ್ರವಾಸಿಗರು ಅಕ್ರಮ ಪ್ರವೇಶ ಮಾಡದಂತೆ ಎಷ್ಟೇ ಕ್ರಮ ಕೈಗೊಂಡರೂ ಪ್ರವಾಸಿಗರ ನಿರ್ಲಕ್ಷಿಸಿ ಬೇಲಿ ಮುರಿದು ಜಲಪಾತಕ್ಕೆ ಇಳಿಯುತ್ತಾರೆ ಎಂದು ಗ್ರಾಪಂ ಸದಸ ಈರಪ್ಪ ತಿಳಿಸಿದ್ದಾರೆ.

ಸಹಾಯವಾಣಿ ಕೇಂದ್ರ ಆರಂಭ

ಮಡಿಕೇರಿ, ಫೆ.4–ಬರಪೀಡಿತ ಪ್ರದೇಶವೆಂದು ಪ್ರಕಟಿಸಿರುವ ಕೊಡಗು ಜಿಲ್ಲೆಯ 5 ತಾಲೂಕಿನ ರೈತರಿಗೆ ಬೆಳೆ ನಷ್ಟ ಪರಿಹಾರವನ್ನು ನೇರವಾಗಿ ಪಾವತಿಸಲಾಗುತ್ತಿದ್ದು, ಈ ಸಂಬಂಧ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದಿಂದ ಸಹಾಯವಾಣಿ ಕೇಂದ್ರ ಆರಂಭಿಸಲಾಗಿದೆ.

ಫ್ರೂಟ್ಸ್ ಆ್ಯಪ್‌ನಲ್ಲಿ ನೋಂದಣಿ ಸಂಬಂಧ ರೈತರಿಗೆ ತೊಂದರೆ ಇದ್ದಲ್ಲಿ ಸಹಾಯವಾಣಿ ಕೇಂದ್ರಕ್ಕೆ ಮಾಹಿತಿ ನೀಡಬಹುದು.

ಜಿಲ್ಲಾಧಿಕಾರಿ ಕಚೇರಿಯ ಸಹಾಯವಾಣಿ ಕೇಂದ್ರದ ದೂ.ಸಂ: 08272–221077, ಮಡಿಕೇರಿ ತಾಲೂಕು ಕಚೇರಿಯ ದೂ.ಸಂ: 228396, ಕುಶಾಲನಗರ ತಾಲೂಕು ಕಚೇರಿಯ ದೂ.ಸಂ:08276–200198, ಸೋಮವಾರಪೇಟೆ ತಾಲೂಕು ಕಚೇರಿಯ ದೂ.ಸಂ:282045, ವಿರಾಜಪೇಟೆ ತಾಲೂಕು ಕಚೇರಿಯ ದೂ.ಸಂ:08274–257328 ಹಾಗೂ ಪೊನ್ನಂಪೇಟೆ ತಾಲೂಕು ಕಚೇರಿಯ ದೂ.ಸಂ: 249700 ಅನ್ನು ಸಂಪರ್ಕಿಸ ಬಹುದು ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್ಸಿ, ಎಸ್ಟಿ ಕಾರ್ಯಕ್ರಮ ಪ್ರಗತಿ ಸಾಧಿಸಿ



ಮಡಿಕೇರಿ, ಫೆ.4–ಪರಿಶಿಷ್ಟ ಜಾತಿ ಮತ್ತು ಪಂಗಡದ ಉಪಯೋಜನೆ ಸಂಬಂಧ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾರ್ಯಕ್ರಮ ಅನುಷ್ಠಾನದಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸಬೇಕು ಎಂದು ಸರ್ಕಾರ ನಿರ್ದೇಶನ ನೀಡಿದೆ. ಆ ನಿಟ್ಟಿನಲ್ಲಿ ಅಧಿಕಾರಿಗಳು ಪ್ರಗತಿ ಸಾಧಿಸಬೇಕು. ಇಲ್ಲದ್ದಲ್ಲಿ ಅಧಿಕಾರಿಗಳೇ ಹೊಣೆಯಾಗಬೇಕಾಗುತ್ತದೆ. ಖಜಾನೆಗೆ ಬಿಲ್ ಸಲ್ಲಿಸಲು ಕೊನೆಯ ದಿನ ಹತ್ತಿರ ಬರುತ್ತಿದೆ. ಆದ್ದರಿಂದ ಎಲ್ಲಾ ಇಲಾಖೆ ಅಧಿಕಾರಿಗಳು ಎಚ್ಚರ ವಹಿಸಿ ಕರ್ತವ್ಯ ನಿರ್ವಹಿಸಬೇಕು ಎಂದು ಎಚ್ಚರಿಸಿದರು.

ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ, ವಿದ್ಯುತ್, ಸಹಕಾರ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪ್ರವಾಸೋದ್ಯಮ, ವೈದ್ಯಕೀಯ ಶಿಕ್ಷಣ, ಸಣ್ಣ ನೀರಾವರಿ, ವಸತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕೈಮಗ್ಗ ಜವಳಿ, ಕಾರ್ಮಿಕ, ಲೋಕೋಪಯೋಗಿ, ಅರಣ್ಯ, ನಗರಾಭಿವೃದ್ಧಿ, ಸಾರಿಗೆ, ಕೌಶಲ್ಯಾಭಿವೃದ್ಧಿ, ಪಂಚಾಯತ್ ರಾಜ್, ಆಯುಷ್, ಸಣ್ಣ ನೀರಾವರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಉನ್ನತ ಶಿಕ್ಷಣ, ಕಂದಾಯ ಇಲಾಖೆಗಳಿಂದ ಜಿಲ್ಲಾಧಿಕಾರಿ ಮಾಹಿತಿ ಪಡೆದರು.

ಹ್ಯಾಶಿಷ್ ಆಯಿಲ್ ಸಾಗಿಸುತ್ತಿದ್ದ ಮೂವರಿಗೆ 10 ವರ್ಷ ಜೈಲು ಶಿಕ್ಷೆ



ಅಹಮದ್‌ಕಬೀರ್, ಅಬ್ದುಲ್‌ಖಾದರ್, ಮೊಹಮದ್ ಮುಜಮಿಲ್

ತಲಾ ಒಂದು ಲಕ್ಷ ರೂ. ದಂಡ

ಮಡಿಕೇರಿ, ಫೆ4–ಮಾದಕ ವಸ್ತು ಹ್ಯಾಶಿಷ್ ಆಯಿಲ್ (ಗಾಂಜಾ ಎಣ್ಣೆ) ಸಾಗಿಸುತ್ತಿದ್ದ ಮೂವರಿಗೆ ಮಡಿಕೇರಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ 10 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ತಲಾ 1 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಕೇರಳದ ಕಾಸರಗೋಡು ಜಿಲ್ಲೆಯ ನಿವಾಸಿಗಳಾದ ಅಹಮದ್ ಕಬೀರ್(37), ಅಬ್ದುಲ್ ಖಾದರ್(37) ಮತ್ತು ಮೊಹಮದ್ ಮುಜಮಿಲ್(37) ಶಿಕ್ಷೆಗೆ ಒಳಗಾದ ಅಪರಾಧಿಗಳು.

ಪ್ರಕರಣ: ಭಾಗಮಂಡಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರ ಅ.29ರಂದು ಭಾಗಮಂಡಲ–ಮಡಿಕೇರಿ ಜಂಕ್ಷನ್‌ನ ಐಬಿ ರಸ್ತೆಯಲ್ಲಿ ಕಾರಿನಲ್ಲಿ ಈ ಮೂವರು ಮಾದಕ ವಸ್ತುವನ್ನು ಸಾಗಿಸುತ್ತಿದ್ದರು. ಈ ವೇಳೆ ಭಾಗಮಂಡಲ ಪೊಲೀಸ್ ಠಾಣಾಧಿಕಾರಿ ಪ್ರಿಯಾಂಕಾ, ಎಎಸ್‌ಐ ಎಂ.ಸಿ.ಬೆಳ್ಳಿಯಪ್ಪ, ಮಹದೇವಸ್ವಾಮಿ ಮತ್ತು ಸಿಬ್ಬಂದಿ ದಾಳಿ ನಡೆಸಿ, ಕಾರಿನಲ್ಲಿ 1 ಕೆಜಿ 160 ಗ್ರಾಂ ಹ್ಯಾಶಿಷ್ ಆಯಿಲ್ ವಶಪಡಿಸಿಕೊಂಡಿದ್ದರು.

ಬಳಿಕ ಈ ಮೂವರ ವಿರುದ್ಧ ಪ್ರಕರಣ ದಾಖಲಿಸಿ, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಈ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಲಯ ಈ ಮೂವರಿಗೆ 10 ವರ್ಷ ಕಠಿಣ ಶಿಕ್ಷೆ ಹಾಗೂ ತಲಾ 1 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಕೆ.ಜಿ.ಅಶ್ವಿನಿ ವಾದ ಮಂಡಿಸಿದರು.

ಎಂ.ಎಸ್.ರವಿ ನಿಧನ



ಸುಂಟಿಕೊಪ್ಪ, ಫೆ.4–ಸುಂಟಿಕೊಪ್ಪ ಚಾಮುಂಡೇಶ್ವರಿ ಬಡಾವಣೆ ನಿವಾಸಿಯಾದ ಕನ್ನಡದ ರಾಜ್‌ಕುಮಾರ್ ಎಂದೇ ಪ್ರಸಿದ್ಧಿಯಾಗಿದ್ದ ಎಂ.ಎಸ್. ರವಿ(47) ಅನಾರೋಗ್ಯದಿಂದ ಭಾನುವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿಯನ್ನು ಅಗಲಿದ್ದಾರೆ. ಮಾದಾಪುರ ರಸ್ತೆಯ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅಪ್ಪಟ ಕನ್ನಡಾಭಿಮಾನಿಯಗಿದ್ದ ರವಿ, ಸುಂಟಿಕೊಪ್ಪದಲ್ಲಿ ನಡೆಯುತ್ತಿದ್ದ ರಾಜ್ಯೋತ್ಸವ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ವರನಟ ಡಾ.ರಾಜ್‌ಕುಮಾರ್ ಅವರ ವೇಷಭೂಷಣ ಧರಿಸಿ ಕನ್ನಡ ಬಾವುಟ ಹಿಡಿದು ನಾಡು, ನುಡಿ ಕುರಿತ ಗೀತೆಗಳಿಗೆ ನರ್ತಿಸುವ ಮೂಲಕ ಗಮನ ಸೆಳೆಯುತ್ತಿದ್ದರು.

ಸಂತಾಪ: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪಿ.ಎಫ್.ಸಬಾಸ್ಟೀನ್, ಜಿಲ್ಲಾಡಳಿತದ ಕಾನೂನು ಸಲಹೆಗಾರ ಎ. ಲೋಕೇಶ್ ಕುಮಾರ್, ಕನ್ನಡಪರ ಸಂಘಟನೆಗಳ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಮೂರ್ನಾಡು ವಿದ್ಯಾಸಂಸ್ಥೆಗೆ ಶೌಚಾಲಯ ಹಸ್ತಾಂತರ

ಮಡಿಕೇರಿ, ಫೆ.4–ಮೂರ್ನಾಡು ಪದವಿಪೂರ್ವ ಕಾಲೇಜಿನಲ್ಲಿ 1998 ರಿಂದ 2000ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕಲಾ ವಿಭಾಗದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು, ವಿದ್ಯಾಸಂಸ್ಥೆಯ ಮೈದಾನದಲ್ಲಿ ನೂತನವಾಗಿ ನಿರ್ಮಿಸಿರುವ ಶೌಚಾಲಯಗಳನ್ನು ಆಡಳಿತ ಮಂಡಳಿಗೆ ಹಸ್ತಾಂತರಿಸಿದರು.

ಇದೇ ವೇಳೆ ಹಳೇ ವಿದ್ಯಾರ್ಥಿ ಸತೀಶ್ ಮಾತನಾಡಿ, ಈ ವಿದ್ಯಾಸಂಸ್ಥೆಯಲ್ಲಿ ಓದಿದ ಹೆಮ್ಮೆ ನಮಗಿದೆ. ಸ್ವಚ್ಛ ಭಾರತ ಕಲ್ಪನೆಯಡಿ ಶೌಚಾಲಯ ನಿರ್ಮಿಸಲಾಗಿದೆ ಎಂದು ಹೇಳಿದರು.

ವಿದ್ಯಾಸಂಸ್ಥೆಯ ಅಧ್ಯಕ್ಷ ಬಾಚೆಟ್ಟಿರ ಮಾದಪ್ಪ ಮಾತನಾಡಿ, ವಿದ್ಯಾಸಂಸ್ಥೆಯ ಮೇಲಿನ ಹಳೇ ವಿದ್ಯಾರ್ಥಿಗಳ ಅಭಿಮಾನ ಮೆಚ್ಚುಗೆಯಾಗಿದೆ. ಮುಂದೆ ಇನ್ನಷ್ಟು ಕೊಡುಗೆಗಳು ದೊರೆತು ವಿದ್ಯಾಸಂಸ್ಥೆಯ ಬೆಳವಣಿಗೆಯಲ್ಲಿ ನಿಮ್ಮ ಪಾತ್ರ ಪ್ರಮುಖವಾಗಿರಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಉಪಾಧ್ಯಕ್ಷ ಪುದಿಯೋಕ್ಕಡ ಸುಬ್ರಮಣಿ, ಖಜಾಂಚಿ ಬಡುವಂಡ ಸುಬ್ರಮಣಿ, ಹಳೇ ವಿದ್ಯಾರ್ಥಿಯಾದ ಕಾಂತೂರು ಮೂರ್ನಾಡು ಗ್ರಾಮ ಪಂಚಾಯಿತಿ ಅಧ್ಯಕ್ಷ ಕುಶ, ಕಾಲೇಜಿನ ಉಪನ್ಯಾಸಕರು ಇದ್ದರು.



ಮೂರ್ನಾಡು ವಿದ್ಯಾಸಂಸ್ಥೆಯ ಆಡಳಿತ ಮಂಡಳಿಗೆ ಶೌಚಾಲಯವನ್ನು ಹಳೇ ವಿದ್ಯಾರ್ಥಿಗಳು ಹಸ್ತಾಂತರಿಸಿದರು.

ಶಿಕ್ಷಕರಿಗೆ ಸಾವಿತ್ರಿ ಬಾಫುಲೆ ಪ್ರೇರಣೆ



ಚಾಮರಾಜನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಡೆದ ಸಾವಿತ್ರಿ ಬಾಫುಲೆ ಜಯಂತಿ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಉದ್ಘಾಟಿಸಿದರು. ಅರಣ್ಯ ನಿವೃತ್ತ ಅಧಿಕಾರಿ ಡಾ.ಆರ್.ರಾಜು, ಬೋಧಿರತ್ನ ಬಂತೇಜಿ, ಡಿಡಿಪಿಯು ಮಂಜುನಾಥ, ಬಿಇಓ ಸೋಮಣ್ಣೇಗೌಡ, ಡಾ.ರೇಣುಖದೇವಿ ಮತ್ತಿತರರಿದ್ದರು.

ಚಾಮರಾಜನಗರ, ಫೆ.4–ಕಷ್ಟದ ಜೀವನವನ್ನು ನಡೆಸಿ ಬಡವರಿಗೆ ವಿದ್ಯಾದಾನ ಮಾಡಿದ ಮಾತೆ ಸಾವಿತ್ರಿ ಬಾಫುಲೆ ಶಿಕ್ಷಕರಿಗೆ ಪ್ರೇರಣೆಯಾಗಿದ್ದಾರೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಾಗೂ ಹಿರಿಯ ಸಾಹಿತಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ತಿಳಿಸಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದಿಂದ ನಡೆದ ಡಾ.ಬಿ.ಆರ್. ಅಂಬೇಡ್ಕರ್, ಮಾತೆ ಸಾವಿತ್ರಿ ಬಾಫುಲೆ ಜಯಂತಿ, ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸಾವಿತ್ರಿ ಬಾಫುಲೆ ಸಾವಿರಾರು ಹೆಣ್ಣು ಮಕ್ಕಳು ಕಲಿಯಲು ಶಾಲೆಗಳನ್ನು ಸ್ಥಾಪಿಸಿದರು. ಮೌಢ್ಯ ಮತ್ತು ಕಂದಾಚಾರಗಳಿಂದ ದೂರವಿರಲು ಶಿಕ್ಷಣದ ಪಾಠ ಹೇಳಿದರು. ಓದಿನಿಂದ ಜೀವನ ಬದಲಾವಣೆಯಾಗುತ್ತದೆ ಪೋಷಕರು ತಮ್ಮ ಮಕ್ಕಳನ್ನು ಹೆಚ್ಚು ಅಧ್ಯಾಯನ ಮಾಡಲು ಉತ್ತೇಜಿಸಬೇಕು ಎಂದರು.

ಅರಣ್ಯ ಇಲಾಖೆಯ ನಿವೃತ್ತ ಅಧಿಕಾರಿ ಡಾ.ಆರ್.ರಾಜು ಮಾತನಾಡಿ, ಜ್ಞಾನವನ್ನು ಪಡೆಯುವ ವಿಚಾರದಲ್ಲಿ ಪ್ರತಿಯೊಬ್ಬರು ಪ್ರಯತ್ನಿಸಬೇಕಿದೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಜ್ಞಾನವನ್ನು ಸಂಪಾದನೆ ಮಾಡಿ ನಮಗೆ ಹಂಚಿದ್ದಾರೆ. ಅವರು ನೀಡಿರುವ ಸಂವಿಧಾನದಿಂದ ಪ್ರತಿಯೊಬ್ಬರು ಸುಖದಿಂದ ಜೀವನ ನಡೆಸಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಮಹಿಳೆಯರಿಗೆ ಶಿಕ್ಷಣ ನೀಡಲು ಸಾವಿತ್ರಿ ಬಾಫುಲೆ ಪಾತ್ರ ಬಹಳ ಮುಖ್ಯವಾಗಿದೆ. ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ದೊರೆಯಲು ಡಾ.ಬಿ.ಆರ್.ಅಂಬೇಡ್ಕರ್ ಹೋರಾಟದ ಮೂಲಕ ದಾರಿ ತೋರಿದರು. ಶಿಕ್ಷಣ ಕ್ಷೇತ್ರ ಬಹಳಷ್ಟು ಮುಂದೆ ಇದೆ. ಹಲವಾರು ಮಹಾನೀಯರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಸಂವಿಧಾನದಲ್ಲಿ ಶಿಕ್ಷಣ ಮುಖ್ಯವಾದ ಪಾತ್ರ ವಹಿಸಿದೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಉತ್ತಮ ಶಿಕ್ಷಕ ಪ್ರಶಸ್ತಿ ನೀಡಲಾಯಿತು. ಡಿಡಿಪಿಐ ರಾಮಚಂದ್ರರಾಜೇ ಅರಸು, ನರಸಿಪುರ ಬೌದ್ಧ ವಿಹಾರದ ಬೋಧಿರತ್ನ ಬಂತೇಜಿ, ಡಿಡಿಪಿಯು ಮಂಜುನಾಥ ಪ್ರಸನ್ನ, ಪ್ರಸೂತಿ ತಜ್ಞ ಡಾ.ರೇಣುಖದೇವಿ, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ, ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮೈಸೂರು ವಿಭಾಗೀಯ ಉಪಾಧ್ಯಕ್ಷ ಲಾಲಿಂಗಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಸಾವಿತ್ರಿ ಬಾಫುಲೆ ಸಂಘದ ಜಿಲ್ಲಾಧ್ಯಕ್ಷೆ ಭವಾನಿದೇವಿ, ಪರಿಶಿಷ್ಟ ಜಾತಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಸಿ.ಕೆರಾಮಸ್ವಾಮಿ, ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ, ತಾಲೂಕು ಅಧ್ಯಕ್ಷ ಎಂ.ಡಿ.ಮಹದೇವಯ್ಯ, ಶಿವರಾಮು, ಗುರುಶಂಕರಯ್ಯ, ಶಂಕರ್‌ಬಾಬು ಹಾಗೂ ಜಿಲ್ಲಾ, ತಾಲೂಕು ಸಂಘದ ನಿರ್ದೇಶಕರು, ಪದಾಧಿಕಾರಿಗಳು ಹಾಜರಿದ್ದರು.

ಫೆ.10, ಮಾದಪ್ಪನ ಬೆಟ್ಟದಲ್ಲಿ ಗಡಿನಾಡು ಉತ್ಸವ

ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಸೂಚನೆ

ಚಾಮರಾಜನಗರ, ಫೆ.4–ಮಲೆಮಹದೇಶ್ವರಬೆಟ್ಟದಲ್ಲಿ ಫೆ.10ರಂದು ರಾಜ್ಯ ಮಟ್ಟದ ಗಡಿನಾಡು ಕನ್ನಡ ಉತ್ಸವ ಹಮ್ಮಿಕೊಳ್ಳಲಾಗಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಉತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ಹಾಗೂ ಕನ್ನಡ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಗಡಿನಾಡು ಕನ್ನಡ ಉತ್ಸವ ಆಯೋಜಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಯಾವುದೇ ಲೋಪವಾಗದಂತೆ ಸಕಲ ಸಿದ್ಧತೆ ಕೈಗೊಳ್ಳಬೇಕು ಎಂದರು.

ಗಡಿನಾಡು ಉತ್ಸವ ದಿನದಂದು ಮಲೆ ಮಹದೇಶ್ವರಬೆಟ್ಟದ ತಪ್ಪಲಿನ ಇಂಡಿಗನತ್ತ ಗ್ರಾಮದ ಶಾಲೆಗೆ ರಾಜ್ಯ ಸರ್ಕಾರಿ ನೌಕರರ ಸಂಘದಿಂದ 1 ಲಕ್ಷ ರೂ. ಅನ್ನು ಶಾಲಾಭಿವೃದ್ಧಿಗೆ ಪ್ರೋತ್ಸಾಹಧನವಾಗಿ ನೀಡಲಾಗುವುದು. ವಿವಿಧ ಕಲಾತಂಡಗಳೊಂದಿಗೆ ಆಕರ್ಷಕ ಕನ್ನಡ ಜಾಗೃತಿ ಜಾಥಾ ನಡೆಯಲಿದೆ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಹಾಗೂ ಹೆಸರಾಂತ ಚಲನ ಚಿತ್ರ ಗಾಯಕರು, ಸರಿಗಮಪ ತಂಡದವರಿಂದ ಕನ್ನಡ ಸಂಗೀತೋತ್ಸವ ಕಾರ್ಯಕ್ರಮ ನಡೆಯಲಿವೆ ಎಂದು ತಿಳಿಸಿದರು.



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಡಿಸಿ ಸಿ.ಟಿ.ಶಿಲ್ಪನಾಗ್ ಅಧ್ಯಕ್ಷತೆಯಲ್ಲಿ ಗಡಿನಾಡು ಕನ್ನಡ ಉತ್ಸವದ ಪೂರ್ವಭಾವಿ ಸಭೆಯ ನಡೆಯಿತು. ಎಡಿಸಿ ಗೀತಾ ಹುಡೇದ, ಸರಸ್ವತಿ, ಶ್ರೀಕಂಠರಾಜೇ ಅರಸ್ ಮತ್ತಿತರರು ಇದ್ದರು.

> ಬೆಟ್ಟದ ಮಹದೇಶ್ವರ ಬಯಲು ರಂಗಮಂದಿರಲ್ಲಿ ಕಾರ್ಯಕ್ರಮ ನಡೆಯಲಿದ್ದು, ಉತ್ಸವದ ಅಂಗವಾಗಿ ಕನ್ನಡ ಜಾಗೃತಿ ಜಾಥಾ, ಜಾನಪದ ಕಲಾ ಪ್ರಕಾರಗಳ ಮೆರವಣಿಗೆ, ಸಾಂಸ್ಕೃತಿಕ ನಡಿಗೆ, ಗಡಿನಾಡು ಕನ್ನಡ ಸಂಗೀತೋತ್ಸವ ಸೇರಿದಂತೆ ಕನ್ನಡ ನಾಡು, ನುಡಿ, ಸಂಸ್ಕೃತಿ ಪಸರಿಸುವ ಹಲವು ವಿಶಿಷ್ಠ ಹಾಗೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಉತ್ಸವದಲ್ಲಿ ಜಿಲ್ಲೆಯ ಜಾನಪದ ಕಲೆ, ಸಂಸ್ಕೃತಿ ಬಿಂಬಿಸುವ ಕಾರ್ಯಕ್ರಮವಿದ್ದು, ಜಿಲ್ಲಾಡಳಿತ ಅಗತ್ಯ ಸಹಕಾರ ನೀಡಲಿದೆ.
>
> –ಸಿ.ಟಿ.ಶಿಲ್ಪನಾಗ್, ಜಿಲ್ಲಾಧಿಕಾರಿ

ಜನಪ್ರತಿನಿಧಿಗಳು, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು, ಎಲ್ಲಾ ಜಿಲ್ಲಾ, ತಾಲೂಕು ಅಧ್ಯಕ್ಷರು, ಪದಾಧಿಕಾರಿಗಳು, ಹಿರಿಯ ಅಧಿಕಾರಿಗಳು ಹಾಗೂ ಇತರೆ ಗಣ್ಯರು ಆಗಮಿಸಲಿದ್ದು, ಊಟ, ವಸತಿ, ಸ್ವಚ್ಛತೆ, ಕುಡಿಯುವ ನೀರು, ವಾಹನ ವ್ಯವಸ್ಥೆ, ವಿದ್ಯುತ್, ಇನ್ನಿತರ ಸೌಲಭ್ಯಗಳು ಸಮರ್ಪಕವಾಗಿರಬೇಕು ಎಂದು ಸೂಚನೆ ನೀಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಗಡಿನಾಡು ಕನ್ನಡ ಉತ್ಸವ ರಾಜ್ಯಮಟ್ಟದ ಕಾರ್ಯಕ್ರಮವಾಗಿದ್ದು, ಹಿಂದೆ ಗಡಿನಾಡು ಕನ್ನಡ ಉತ್ಸವ 2021–22ರಲ್ಲಿ ಕಾರವಾರ, 2022–23ರಲ್ಲಿ ಕಲಬುರಗಿ ಜಿಲ್ಲೆಗಳಲ್ಲಿ ನಡೆದಿವೆ. ಪ್ರಸ್ತುತ 2023–24ನೇ ಸಾಲಿನ ಗಡಿನಾಡು ಕನ್ನಡ ಉತ್ಸವಕ್ಕೆ ಜಿಲ್ಲೆಗೆ ಅವಕಾಶ ಲಭಿಸಿದೆ. ರಾಜ್ಯದ ಗಡಿನಾಡು ಪ್ರದೇಶಗಳಲ್ಲಿ ಕನ್ನಡದ ಕಲೆ, ಸಂಸ್ಕೃತಿ, ಪರಂಪರೆ ಪ್ರತಿಬಿಂಬಿಸುವ ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವಲ್ಲಿ ಸಂಘ ಕ್ರಿಯಾಶೀಲವಾಗಿದೆ ಎಂದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಮಲೆಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ, ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶೈಲಕುಮಾರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಚಿದಂಬರ, ಸಂಘದ ಪದಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಹಿಳೆಯರ ಆರೋಗ್ಯಕ್ಕೆ ಸಕಾರಾತ್ಮಕ ಪರಿವರ್ತನೆ ಅವಶ್ಯಕ

ಚಾಮರಾಜನಗರ, ಫೆ.4–ವರ್ತಮಾನದ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುತ್ತಿದ್ದು, ಅಷ್ಟೇ ಒತ್ತಡಕ್ಕೂ ಒಳಗಾಗುತ್ತಿದ್ದಾರೆ. ಅವರ ಸಂಪೂರ್ಣ ಆರೋಗ್ಯಕ್ಕೆ ಸಕಾರಾತ್ಮಕ ಪರಿವರ್ತನೆ ಅವಶ್ಯಕ ಎಂದು ಸ್ವಾಮಿ ವಿವೇಕಾನಂದ ರಾಷ್ಟ್ರ ರಾಜ್ಯಸದ್ಭಾವನಾ ಪ್ರಶಸ್ತಿ ಪುರಸ್ಕೃತರಾದ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ಅಭಿಪ್ರಾಯಪಟ್ಟರು.

ಸುರಕ್ಷಾ ಮತ್ತು ಸಮೃದ್ಧಿ ಫೌಂಡೇಷನ್ ಹಾಗೂ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಆರೋಗ್ಯ ಮತ್ತು ಕಾನೂನು ಮಾಹಿತಿ ಕಾರ್ಯಾಗಾರ, ಸುರಕ್ಷಾ ಮತ್ತು ಸಮೃದ್ಧಿ ಜೇನುತುಪ್ಪ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಮಹಿಳೆಯರೇ ವಿಶ್ವವನ್ನು ಕಲ್ಯಾಣ ಮಾಡುವಂತಹವರಾಗಿದ್ದಾರೆ. ಅದಕ್ಕಾಗಿಯೇ ಇಂದು ವಂದೇ ಮಾತರಂ ಗಾಯನವಿದೆಯೇ ಹೊರತು, ವಂದೇ ಪಿತರಂ ಗಾಯನವಿಲ್ಲ ಎಂದರು.



ಚಾಮರಾಜನಗರದಲ್ಲಿ ನಡೆದ ಆರೋಗ್ಯ ಮತ್ತು ಕಾನೂನು ಮಾಹಿತಿ ಕಾರ್ಯಾಗಾರವನ್ನು ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ಉದ್ಘಾಟಿಸಿದರು. ಬಾಲನ್ಯಾಯ ಮಂಡಳಿಯ ಸದಸ್ಯ ಟಿ.ಜೆ.ಸುರೇಶ್, ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಹಿರಿಯ ವ್ಯವಸ್ಥಾಪಕ ಶ್ರೀನಿವಾಸ ಇದ್ದರು.

ಬಾಲನ್ಯಾಯ ಮಂಡಳಿಯ ಸದಸ್ಯ ಟಿ.ಜೆ.ಸುರೇಶ್ ಮಾತನಾಡಿ, ಮನುಷ್ಯ ಸಮಾಜದಲ್ಲಿ ನೆಮ್ಮದಿ ಹಾಗೂ ಸ್ವಾಭಿಮಾನದಿಂದ ಜೀವಿಸಲು ಜ್ಞಾನದ ಜೊತೆಗೆ ಕಾನೂನು ಪಾಲನೆ ಮಾಡಬೇಕಿದೆ. ಜವಾಬ್ದಾರಿ ಮರೆಯುತ್ತಿರುವ ಮಾನವರು ಕಾನೂನುಗಳು ಸಮರ್ಪಕವಾಗಿ ಪಾಲನೆ ಮಾಡದಿರುವುದರಿಂದ ಸಮಾಜದಲ್ಲಿ ಅಪರಾಧ, ಕಾನೂನು ವಿರೋಧಿ ಚಟುವಟಿಕೆಗಳು ಹೆಚ್ಚಾಗುತ್ತಿವೆ ಎಂದು ತಿಳಿಸಿದರು.

ಮಕ್ಕಳಿಗೆ ಚಿಕ್ಕವಯಸ್ಸಿಗೇ ಮದುವೆ ಮಾಡುವುದು ಅಪರಾಧವಾಗಿದ್ದು, ಇದಕ್ಕೆ ಶಿಕ್ಷೆ ಇದೆ. ಚಿಕ್ಕಮಕ್ಕಳ ಮೇಲೆ ಲೈಗಿಂಕ ದೌರ್ಜನ್ಯ ಮಾಡಿದರೆ ಗಲ್ಲು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಮಕ್ಕಳು ದಾರಿ ತಪ್ಪಲು ಒಂದು ವಿಧದಲ್ಲಿ ಪೋಷಕರು ಸಹ ಕಾರಣ ಎಂದರು.

ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಹಿರಿಯ ವ್ಯವಸ್ಥಾಪಕ ಶ್ರೀನಿವಾಸ ಮಾತನಾಡಿದರು. ಮಧು, ಮಹೇಶ್, ಮನೀಷ್ ಕುಮಾರ್ ಮೇನಕ ಸಜೀದಾ, ಅಬ್ದುಲ್ ಹಮೀದ್, ರಾಜು, ಪವಿತ್ರ ಶ್ರುತಿ, ಗೀತಾ ಓಂ ಶಾಂತಿ ನ್ಯೂಸ್ ಸರ್ವೀಸ್‌ನ ಬಿ.ಕೆ.ಆರಾಧ್ಯ ಹಾಜರಿದ್ದರು.

ಕಣ್ಣಿನ ಶಸ್ತ್ರಚಿಕಿತ್ಸೆಗೆ 100 ಮಂದಿ ಆಯ್ಕೆ



ಚಾಮರಾಜನಗರದ ರೋಟರಿ ಸಂಸ್ಥೆಯಲ್ಲಿ ಆಯೋಜಿಸಿದ್ದ ಉಚಿತ ಶಿಬಿರದಲ್ಲಿ ಕಣ್ಣಿನ ತಪಾಸಣೆ ನಡೆಸಲಾಯಿತು.

ಚಾಮರಾಜನಗರ, ಫೆ4–ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಕಣ್ಣಿನ ತಪಾಸಣಾ ಉಚಿತ ಶಿಬಿರ ಯಶಸ್ವಿಯಾಗಿ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿರಸ್ತೆಯ ರೋಟರಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಡೆದ ಕಣ್ಣಿನ ತಪಾಸಣೆ ಉಚಿತ ಶಿಬಿರದಲ್ಲಿ 205 ಮಂದಿ ತಪಾಸಣೆ ನಡೆಸಿ, 100 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು. ಶಸ್ತ್ರಚಿಕಿತ್ಸೆಗೆ ಆಯ್ಕೆಯವರನ್ನು ಕೊಯಂಬತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು.

ರೋಟರಿ ಸಂಸ್ಥೆ ಅಧ್ಯಕ್ಷ ಸಿ.ಎಸ್.ಚಂದ್ರಪ್ರಭ ಜೈನ್ ಮಾತನಾಡಿ, ಕಣ್ಣಿನ ದೃಷ್ಟಿ ಎಲ್ಲರಿಗೂ ಮಹತ್ವದ್ದು, ಅದರಲ್ಲೂ ವಿಶೇಷವಾಗಿ ಮಹಿಳೆಯರು, ವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ಪೊರೆಗೆ ತುತ್ತಾಗುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿ, ಜೀವನದಲ್ಲಿ ಕಷ್ಟವಿರುವವರಿಗೆ ಅನುಕೂಲ ಕಲ್ಪಿಸಲು ರೋಟರಿ ಸಂಸ್ಥೆ ಪ್ರತಿ ತಿಂಗಳ ಮೊದಲ ಭಾನುವಾರ ನೇತ್ರ ತಪಾಸಣೆ ಉಚಿತ ಶಿಬಿರ ಅಯೋಜಿಸುತ್ತಿದೆ ಎಂದರು.

ರೋಟರಿ ಸಂಸ್ಥಾಪಕ ಸದಸ್ಯ ಶ್ರೀನಿವಾಸಶೆಟ್ಟಿ, ಕಾರ್ಯದರ್ಶಿ ಅಬ್ದುಲ್ ಅಜೀಜ್, ಉಪಾಧ್ಯಕ್ಷ ಕಾಗಲವಾಡಿ ಚಂದ್ರು, ರಾಮಸಮುದ್ರ ನಾಗರಾಜು, ಶ್ರೀನಿವಾಸ್, ಶಿಬಿರದ ಪಿಆರ್‌ಓ ವಿಜಯಕಾಂತ್, ಡಾ.ಪರಮೇಶ್ವರಪ್ಪ ಇತರರು ಹಾಜರಿದ್ದರು.

ಒಂದನೇ ಪುಟದಿಂದ

ಉತ್ತರಾಖಂಡ ಸಂಪುಟ ಒಪ್ಪಿಗೆ

ಧಾರ್ಮಿಕ ಕಾನೂನುಗಳನ್ನು ಹೊಂದಿವೆ. ಹಿಂದೂ ಕಾನೂನು ಬುದ್ಧ, ಜೈನ ಮತ್ತು ಸಿಖ್ ಧರ್ಮಗಳ ಅನುಯಾಯಿಗಳಿಗೂ ಅನ್ವಯಿಸುತ್ತದೆ. ವಿಲ್ ಮತ್ತು ಮದುವೆಯಂತಹ ವಿಷಯಗಳಲ್ಲಿ ಈ ಕಾನೂನುಗಳನ್ನು ಪಾಲಿಸಬೇಕು. ಬೇರೆ ರೀತಿಯಲ್ಲಿ ಹೇಳುವುದಾದರೆ, ಏಕರೂಪ ನಾಗರಿಕ ಸಂಹಿತೆ ಎಂದರೆ ಇಡೀ ದೇಶಕ್ಕೆ ಏಕರೂಪದ ಕಾನೂನಿನ ಜೊತೆಗೆ ಮದುವೆ, ವಿಚ್ಛೇದನ, ಉತ್ತರಾಧಿಕಾರ, ದತ್ತು ಸ್ವೀಕಾರದ ನಿಯಮಗಳು ಎಲ್ಲಾ ಧಾರ್ಮಿಕ ಸಮುದಾಯಗಳಿಗೆ ಒಂದೇ ಆಗಿರುತ್ತದೆ. ಸಂವಿಧಾನದ 44ನೇ ವಿಧಿಯಲ್ಲಿ ಎಲ್ಲ ನಾಗರಿಕರಿಗೂ ಸಮಾನ ಕಾನೂನನ್ನು ಜಾರಿಗೆ ತರಲು ಹೇಳಲಾಗಿದೆ. ಆರ್ಟಿಕಲ್–44 ಅನ್ನು ಸಂವಿಧಾನದ ನಿರ್ದೇಶನ ತತ್ವಗಳಲ್ಲಿ ಸೇರಿಸಲಾಗಿದೆ. ಭಾರತದಲ್ಲಿ ಎಲ್ಲಾ ನಾಗರಿಕರಿಗೆ ಏಕರೂಪದ 'ಕ್ರಿಮಿನಲ್ ಕೋಡ್' ಇದೆ, ಆದರೆ ಏಕರೂಪದ ನಾಗರಿಕ ಕಾನೂನು ಇಲ್ಲ. ಏಕರೂಪ ನಾಗರಿಕ ಸಂಹಿತೆ, UCC ಭಾರತದಲ್ಲಿ ಎಲ್ಲಾ ಕಡೆಯೂ ಅನ್ವಯಿಸುತ್ತದೆ. ಸುಪ್ರೀಂಕೋರ್ಟ್ ತನ್ನ ನಿರ್ಧಾರಗಳಲ್ಲಿ ಏಕರೂಪ ನಾಗರಿಕ ಸಂಹಿತೆಯ ಅನುಷ್ಠಾನಕ್ಕೆ ಹಲವು ಬಾರಿ ಒತ್ತಾಯಿಸಿದೆ.

ಮೈತ್ರಿಗೆ ಮೂಡದ ಒಮ್ಮತ

ಸಂಕಲ್ಪ ಕುಟುಂಬ ರಾಜಕೀಯದ ವಿರುದ್ಧ ಇರಬೇಕು. ರಾಷ್ಟ್ರ, ರಾಜ್ಯ, ಮಂಡ್ಯದಲ್ಲೂ ಕುಟುಂಬ ರಾಜಕೀಯ ಇದೆ. ಪ್ರತಿಯೊಂದು ರಾಜ್ಯದಲ್ಲೂ ಒಂದೊಂದು ಕುಟುಂಬ ರಾಜಕೀಯ ಮಾಡುತ್ತಾ ಇದೆ ಎಂದು ಬೇಸರ ವ್ಯಕ್ತಪಡಿಸಿದರು. ಇನ್ನೂ ರಾಜ್ಯದ ಕುಟುಂಬ ರಾಜಕೀಯದ ಬಗ್ಗೆ ಮಾತನಾಡೋದೆ ಬೇಡ. ಅವರು ಆಯ್ತು, ಮಕ್ಕಳು ಆಯ್ತು, ಮೊಮ್ಮಕ್ಕಳು ಆಯ್ತು, ಈಗ ಮರಿ ಮಕ್ಕಳ ಸರದಿ. ನಮ್ಮನ್ನು ವಿರೋಧ ಮಾಡುತ್ತಿದ್ದ ಜೆಡಿಎಸ್ ನಮ್ಮೊಂದಿಗೆ ಮೈತ್ರಿಯಾಗಿದೆ. ಆದರೆ ಮೋದಿಯವರನ್ನು ಪ್ರಧಾನಿ ಮಾಡಲು ನಮ್ಮೊಂದಿಗೆ ಕೈ ಜೋಡಿಸಿರುವುದು ಸ್ವಾಗತಾರ್ಹ ಎಂದರು.

ಬಿಜೆಪಿ ತತ್ವ, ಸಿದ್ಧಾಂತವಿಟ್ಟುಕೊಂಡಿದೆ. ಬಿಜೆಪಿಯು ಕಾರ್ಯಕರ್ತರ ಪಕ್ಷವಾಗಿದ್ದು, ಮಂಡ್ಯದಲ್ಲಿ ಚುನಾವಣೆ ಸಮಯದಲ್ಲಿ ಪಕ್ಷವನ್ನು ಗಟ್ಟಿಗೊಳಿಸಬೇಕು. ಪ್ರತಿಯೊಂದು ರಾಜಕೀಯ ಪಕ್ಷ ಮೊದಲು ನಾವು ನೆಂಟಸ್ಥಿಗೆ ಬಿಟ್ಟು ಮೊದಲು ಪಕ್ಷಬೇಕು, ಅದಕ್ಕೂ ಮೊದಲು ದೇಶಬೇಕು ಎನ್ನಬೇಕು. ಕುಟುಂಬದ ರಾಜಕಾರಣದ ವಿರುದ್ಧ ನಮ್ಮ ಸಂಕಲ್ಪ ಇರುತ್ತದೆ. ದೇಶದಲ್ಲಿ ಕುಟುಂಬ ರಾಜಕಾರಣ ದೊಡ್ಡ ಪಿಡುಗು. ಪ್ರಾದೇಶಿಕ ಪಕ್ಷಗಳಲ್ಲಿ ಕುಟುಂಬ ರಾಜಕಾರಣ ಕಾಣುತ್ತೇವೆ ಎಂದು ಜೆಡಿಎಸ್ ಪಕ್ಷವನ್ನು ಪರೋಕ್ಷವಾಗಿ ಟೀಕಿಸಿದರು.

ಎನ್‌ಡಿಎ ಕೂಟಕ್ಕೆ ಜೆಡಿಎಸ್ ಸೇರಿದೆ ಅಷ್ಟೇ. ಯಾವ ಕ್ಷೇತ್ರ ಯಾವ ಪಕ್ಷಕ್ಕೆ ಎಂದು ನಿರ್ಧಾರವಾಗಿಲ್ಲ. ಹಾಸನ, ಮಂಡ್ಯ ಎರಡು ಕ್ಷೇತ್ರಗಳು ಬಿಜೆಪಿಗೆ ಸಿಗುತ್ತದೆ. ಪ್ರತಿ ಗ್ರಾಮದಲ್ಲೂ ಬಿಜೆಪಿ ಪಕ್ಷ ಕಟ್ಟುವ ಕೆಲಸ ವಾಗಬೇಕು. ಒಂದು ವೇಳೆ ಜೆಡಿಎಸ್‌ಗೆ ಈ ಭಾಗದ ಕ್ಷೇತ್ರ ಬಿಟ್ಟು ಕೊಟ್ಟರೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ನಮ್ಮ ಕಾರ್ಯಕರ್ತರ ಒಪ್ಪಿಗೆ ತೆಗೆದುಕೊಳ್ಳಬೇಕು. ಮೈತ್ರಿಯಾಗಿದೆ, ಟಿಕೆಟ್ ಬಿಟ್ಟುಕೊಡಬೇಕು ಎಂದು ಕಾರ್ಯ ಕರ್ತರು ಕುಂದುವ ಅವಶ್ಯಕತೆ ಇಲ್ಲ. ಮಂಡ್ಯ ಜಿಲ್ಲೆಯಲ್ಲಿ ಒಂದೇ ಒಂದು ಸೀಟ್ ಬಿಜೆಪಿ ಗೆದ್ದಿರಲಿಲ್ಲ. ಕೆ.ಆರ್.ಪೇಟೆಯಲ್ಲಿ ನಾರಾಯಣಗೌಡರು ಮೊದಲ ಬಾರಿಗೆ ಗೆದ್ದರು. ಅವರನ್ನು ಬಿಜೆಪಿ ಮಂತ್ರಿಯನ್ನಾಗಿ ಮಾಡಿತು ಎಂದು ಸ್ಮರಿಸಿದರು. ಮಂಡ್ಯದಲ್ಲಿ ಬಿಜೆಪಿಗೆ ಅಸ್ತಿತ್ವವೇ ಇಲ್ಲ ಎನ್ನುತ್ತಿದ್ದರು. ಆದರೆ ಉಪಚುನಾವಣೆಯಲ್ಲಿ ಖಾತೆ ತೆರೆದು ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿ ಕ್ಷೇತ್ರದಲ್ಲೂ ಪೈಪೋಟಿ ನೀಡಿದೆ. ಹೀಗಾಗಿ ಕಾರ್ಯಕರ್ತರು ಮಂಡ್ಯ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಡಿ ಎನ್ನುತ್ತಿದ್ದಾರೆ. ಸೀಟೇ ಕೇಳೋದು ತಪ್ಪು ಅಂದರೆ ಸರಿಯಲ್ಲ. ಮಂಡ್ಯದಲ್ಲಿ ಬಿಜೆಪಿಯ ಹಲವು ನಾಯಕರು ಇದ್ದಾರೆ. ಸುಮಲತಾ ಅವರು ಬಿಜೆಪಿಗೆ ಬೆಂಬಲ ನೀಡಿದ್ದಾರೆ. ಅವರು ಕಳೆದ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಪರ ಮತ ಕೇಳಿದ್ದು, ಅವರು ಟಿಕೆಟ್ ಕೇಳುವುದರಲ್ಲಿ ತಪ್ಪೇನಿಲ್ಲ ಎಂದರು.

ದೇಶ ವಿಭಜನೆ ಕಾಂಗ್ರೆಸ್ ಉದ್ದೇಶ

ಮಾಜಿ ಸಚಿವ ಎಸ್.ಎ.ರಾಮದಾಸ್ ಮಾತನಾಡಿ, ಇಡೀ ದೇಶಕ್ಕಾಗಿ ಇರುವ ಪಕ್ಷ ಅಂದರೇ ಅದು ಬಿಜೆಪಿ. ಸಂಸದ ಡಿ.ಕೆ.ಸುರೇಶ್ ದೇಶ ವಿಭಜನೆ ಮಾತು ಆಡಿದ್ದಾರೆ. ಇದು ನಾಚಿಕೆಗೇಡು, ಇದನ್ನು ನಾವುಗಳು ಖಂಡಿಸಬೇಕು. ದೇಶ ವಿಭಜನೆ ಮಾಡಬೇಕೆಂಬುದು ಕಾಂಗ್ರೆಸ್ ಉದ್ದೇಶವಾಗಿದೆ ಎಂದರು.

ಉತ್ತರ ಭಾರತಕ್ಕೆ ಹೆಚ್ಚಿನ ಹಣ ಹೋಗಿದೆ ಎಂಬ ಆರೋಪ ಮಾಡುತ್ತಾರೆ. ಯುಪಿಎ ಸರ್ಕಾರ ಇದ್ದಾಗ ಎಷ್ಟು ಹಣವನ್ನು ರಾಜ್ಯಕ್ಕೆ ಕೊಟ್ಟಿದ್ದರು. ಈ ಬಾರಿಯ ಚುನಾವಣೆ ಭಾರತ ದೇಶ ಉಳಿಸುವ ಚುನಾವಣೆಯಾಗಿದ್ದು, ಈ ಬಾರಿ ಯಾವುದೇ ಜಾತಿ, ಧರ್ಮದ ಮೇಲೆ ನಡೆಯಲ್ಲ ಎಂದರು.

ಮೂವರು ಯುವಕರ ಸಾವು

ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಮತ್ತೊಬ್ಬ ಯುವಕ ಸಾಗರ್ ಗಾಯಗೊಂಡು ಒದ್ದಾಡುತ್ತಿದ್ದಾಗ ಘಟನಾ ಸ್ಥಳಕ್ಕೆ ಬಂದಿದ್ದ ಕುಟುಂಬದವರು ತಕ್ಷಣ ಮೈಸೂರಿನ ಆಸ್ಪತ್ರೆಗೆ ದಾಖಲಿಸಿದ್ದು ಚಿಕಿತ್ಸೆ ಪಡೆಯುತ್ತಿದ್ದಾನೆ. ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಕ್ರೇನ್ ಸಹಾಯದಿಂದ ಕಾರನ್ನು ಮೇಲಕ್ಕೆತ್ತಿ, ಮೃತ ದೇಹಗಳನ್ನು ಶವಾಗಾರಕ್ಕೆ ಸಾಗಿಸಿದರು.

ಜಲಸೂರು–ಬೆಂಗಳೂರು ಕೆಶಿಫ್ ಸಂಸ್ಥೆಯ ವಿರುದ್ಧ ಆಕ್ರೋಶ

ಕೆಶಿಪ್ ರಸ್ತೆ ಕಾಮಗಾರಿ ಅವೈಜ್ಞಾನಿಕವಾಗಿರುವುದೇ ಈ ಘಟನೆಗೆ ಕಾರಣವಾಗಿದೆ. ರಸ್ತೆ ತಿರುವು ಇರುವ ಕಡೆ ಸೂಚನಾ ಫಲಕ ಹಾಕಿಲ್ಲ. ವಿದ್ಯುತ್ ದೀಪಗಳನ್ನು ಅಳವಡಿಸಿಲ್ಲ. ಇದೇ ರೀತಿಯ ಅಪ ಘಾತಗಳು ಕೆಶಿಪ್ ರಸ್ತೆಯುದ್ದಕ್ಕೂ ಕಳೆದೊಂದು ವರ್ಷದಿಂದಲೂ ನಡೆಯುತ್ತಿದ್ದು ಇದೂವರೆವಿಗೂ ಸುಮಾರು 15ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಹಾಗಾಗಿ ಈ ಅಪಘಾತದ ಹೊಣೆ ಹೊತ್ತು ಸೂಕ್ತ ಪರಿಹಾರ ನೀಡಬೇಕು. ಜೊತೆಗೆ ಕೂಡಲೆ ರಸ್ತೆಬದಿಯಲ್ಲಿ ವಿದ್ಯುತ್ ದೀಪಗಳನ್ನು ಹಾಕಬೇಕು. ಎಚ್ಚರಿಕೆಯ ಸೂಚನಾ ಫಲಕಗಳನ್ನು ಹಾಕಬೇಕು. ಇಲ್ಲದಿದ್ದರೆ ಕೆಶಿಫ್ ಸಂಸ್ಥೆಯ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ ಎಂದು ತಾಲೂಕು ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ನಾಟನಹಳ್ಳಿ ಗಂಗಾಧರ್ ಕೆಶಿಫ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

5.48 ಕೋಟಿ ಬಿಡುಗಡೆ

ಪ್ರಯಾಣದ ಸಮಯ ಹೆಚ್ಚಾಗಿದೆ. ಈಗ ಹೊಸದಾಗಿ ನಿರ್ಮಾಣ ಮಾಡುವ ಮತ್ತೆರಡು ರೈಲ್ವೆ ಹಳ್ಳಿ ಮಾರ್ಗದಲ್ಲಿ ತಿರುವು ಮುಕ್ತ ಮಾಡಲಾಗುವುದು. ಇದರಿಂದ ಮೈಸೂರು ಬೆಂಗಳೂರು ನಡುವಿನ ಪ್ರಯಾಣದ ಸಮಯ ತಗ್ಗಲಿದೆ ಎಂದು ಹೇಳಿದರು.

ಮೈಸೂರು–ಬೆಂಗಳೂರು ನಡುವೆ ಚತುಷ್ಪಥ ರೈಲು ಯೋಜನೆಯಲ್ಲಿ ಈಗ ನಿರ್ಮಾಣ ಮಾಡುತ್ತಿರುವ ಮತ್ತೆರಡು ರೈಲ್ವೆ ಹಳಿಯಲ್ಲಿ ತಿರುವುಗಳಿರುವುದಿಲ್ಲ. ತಿರುವು ಮುಕ್ತ ಮಾಡಲು ಹೆಚ್ಚಿನ ಭೂಮಿ ಅವಶ್ಯವಿದೆ. ಈ ಹಿನ್ನೆಲೆಯಲ್ಲಿ ಎಷ್ಟು ಭೂಮಿ ಅವಶ್ಯವಿದೆಯೊ ಅಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು. ಸ್ಥಳ ಸಮೀಕ್ಷಾ ವರದಿಯಿಂದ ಅಗತ್ಯವಿರುವ ಭೂಮಿಯ ವಿವರ ತಿಳಿದು ಬರಲಿದೆ. ವರದಿ ಬಂದ ನಂತರ ಮುಂದಿನ ಪ್ರಕ್ರಿಯೆಗಳನ್ನು ಆರಂಭಿಸಲಾಗುವುದು ಎಂದು ಪ್ರತಾಪ್ ಸಿಂಹ ವಿವರಿಸಿದರು. ಭೂಸ್ವಾಧೀನ ಅಧಿಕಾರಿ ಶಿವೇಗೌಡ ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಕುಣಿಯಲಾದವರಿಗೆ ನೆಲ ಡೊಂಕು

ಕೇಂದ್ರ ಸರ್ಕಾರ ಅನುದಾನ ಹಂಚಿಕೆಯಲ್ಲಿ ತಾರತಮ್ಯ ನೀತಿ ಅನುಸರಿಸಿದೆ ಎಂದು ಆರೋಪಿಸಿ ಕಾಂಗ್ರೆಸ್ ನವರು ಫೆಬ್ರವರಿ 7 ರಂದು ದೆಹಲಿಯಲ್ಲಿ ನಡೆಸುತ್ತಿರುವ ಪ್ರತಿಭಟನೆಯನ್ನು ಸಂಸದ ಪ್ರತಾಪ್ ಸಿಂಹ ಲೇವಡಿ ಮಾಡಿದ್ದಾರೆ.

ಕುಣಿಯಲಾಗದವರು ನೆಲ ಡೊಂಕು ಎಂಬಂತೆ ಸರಿಯಾಗಿ ಆಡಳಿತ ನಡೆಸಲು ಸಾಧ್ಯವಾಗದೆ ಹೀಗೆ ಆಧಾರರಹಿತ ಆರೋಪ ಮಾಡಿ ಪ್ರತಿಭಟನೆಗೆ ಮುಂದಾಗಿದ್ದಾರೆ ಎಂದು ದೂರಿದರು. ಕಾಂಗ್ರೆಸ್‌ನವರಿಗೆ ಲೂಟಿ ಹೊಡೆಯುವುದು ಕರಗತವಾಗಿದೆ. ಸರಿಯಾಗಿ ಆಡಳಿತ ನಡೆಸಲು ಅವರಿಗೆ ಬರುವುದಿಲ್ಲ. ಈ ಲೋಪ ಮರೆಮಾಚಲು ಇಂತಹ ಹೋರಾಟದ ಹಾದಿ ಹಿಡಿದಿದ್ದಾರೆ ಎಂದು ಆಪಾದಿಸಿದರು.

ಪಾಕಿಸ್ತಾನ ಹಾಗೂ ಚೈನಾ ಬೆದರಿಕೆ ಹಿನ್ನೆಲೆಯಲ್ಲಿ ಡಿಆರ್‌ಡಿಒ, ಹೆಚ್‌ಎಎಲ್ ಸೇರಿದಂತೆ ಇತರೆ ಮಹತ್ವದ ಯೋಜನೆಗಳನ್ನು ದಕ್ಷಿಣ ಭಾರತದಲ್ಲಿ, ಅದರಲ್ಲೂ ಬೆಂಗಳೂರಿನಲ್ಲಿ ಸಾಕಾರಗೊಳಿಸಲಾಯಿತು. ಹಾಗಾದರೆ ಇದನ್ನು ವಿರೋಧಿಸಿ ಉತ್ತರ ಭಾರತೀಯರು ಪ್ರತಿಭಟನೆ ಮಾಡಬಹುದಲ್ಲವೆ? ಎಂದು ಪ್ರಶ್ನಿಸಿದರು.

ಒಕ್ಕೂಟ ವ್ಯವಸ್ಥೆಯಲ್ಲಿ ಯಾವ ರಾಜ್ಯಕ್ಕೂ ಅನ್ಯಾಯವಾಗುವುದಿಲ್ಲ. ಅಗತ್ಯಕ್ಕನುಗುಣವಾಗಿ ಅನುದಾನ ಹಂಚಿಕೆಯಾಗುತ್ತದೆ. ಹಲವು ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರಿಗೂ ಈ ಪರಿಜ್ಞಾನವಿದೆ. ಆದರೂ ಜನರನ್ನು ದಾರಿ ತಪ್ಪಿಸಲು ಇಂತಹ ಹೋರಾಟ ಮಾಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಟೀಕಿಸಿದರು.

ಕಾಮಗಾರಿ ತಿಂಗಳಾಂತ್ಯಕ್ಕೆ ಆರಂಭ

ಆರೋಪಿಸಿದ್ದಾರೆ ಎಂದರು. ಉದಾಹರಣೆಗೆ ಗುಂಗ್ರಾಲ್ ಛತ್ರದಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆ ಇರುವ ಕಾರಣ ಹೆಚ್ಚು ಹಣ ನಿಗದಿ ಮಾಡಿ, ಪಕ್ಕದ ದಡದಕಲ್ಲಹಳ್ಳಿಯಲ್ಲಿ ಕಡಿಮೆ ಹಣ ನಿಗದಿ ಮಾಡಿರುವುದಕ್ಕೆ ರೈತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಪ್ರತಾಪ್ ಸಿಂಹ ವಿವರಿಸಿದರು. ಈ ಹಿನ್ನೆಲೆ ಯಾವ ರೈತನಿಗೂ ಅನ್ಯಾಯವಾಗದಂತೆ 15 ರಿಂದ 18 ಲಕ್ಷ ರೂ. ಪರಿಹಾರ ನಿಗದಿ ಮಾಡುವುದು ಸೂಕ್ತ ಎಂದು ಡಾ.ರಾಜೇಂದ್ರ ಅಭಿಪ್ರಾಯಪಟ್ಟರು. ಭೂಸ್ವಾಧೀನ ಪರಿಹಾರದ ವಿಚಾರ, ಕೆಲವು ಸಾಗುವಳಿದಾರರಿಗೆ ಹಕ್ಕುಪತ್ರ ಇಲ್ಲದಿರುವುದು ಸೇರಿದಂತೆ ಇತರೆ ಕಾರಣಗಳಿಂದ ಮೈಸೂರು ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಯೋಜನೆಯ ಕಾಮಗಾರಿ ವಿಳಂಬವಾಗುತ್ತಿದೆ ಎಂದರು. ಏನೇ ಆದರೂ ಈ ಎಲ್ಲಾ ಸಮಸ್ಯೆ ಪರಿಹಾರ ಮಾಡಿ ಈ ತಿಂಗಳಾಂತ್ಯಕ್ಕೆ ಕಾಮಗಾರಿ ಆರಂಭಿಸಲಾಗುವುದು. ಈಗ ಪರಿಹಾರ ನೀಡಿ ಭೂಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ ಹೆದ್ದಾರಿ ನಿರ್ಮಾಣದ ಕಾಮಗಾರಿ ಆರಂಭಿಸಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಚೇರಿಯನ್ನು ರಾಮನಗರದಿಂದ ಮೈಸೂರಿಗೆ ಇನ್ನೊಂದು ತಿಂಗಳಲ್ಲಿ ಸ್ಥಳಾಂತರ ಮಾಡಲಾಗುವುದು ಎಂದು ಇದೇ ವೇಳೆ ಪ್ರಾಧಿಕಾರದ ಯೋಜನಾ ನಿರ್ದೇಶಕ ರಾಹುಲ್ ಗುಪ್ತ ತಿಳಿಸಿದರು.

ಮೈಸೂರಲ್ಲಿ ಬಂಡೀಪುರ ಉಳಿಸಿ ಅಭಿಯಾನ

• ರಾತ್ರಿ ವಾಹನ ಸಂಚಾರ ನಿರ್ಬಂಧ ಮುಂದುವರೆಸಿ • ಅಭಯಾರಣ್ಯದಲ್ಲಿ ರೈಲು ಮಾರ್ಗಕ್ಕೆ ಅವಕಾಶ ನೀಡದಂತೆ ಆಗ್ರಹ

ಮೈಸೂರು,ಫೆ.4(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಸ್ತೆಗಳಲ್ಲಿ ರಾತ್ರಿ ವೇಳೆ ವಾಹನ ಸಂಚಾರ ನಿರ್ಬಂಧಿಸಿರುವುದನ್ನು ಮುಂದುವರೆಸಿ, ಅರಣ್ಯ ಪ್ರದೇಶದಲ್ಲಿ ರೈಲು ಮಾರ್ಗಕ್ಕೆ ಅವಕಾಶ ನೀಡದಂತೆ ಆಗ್ರಹಿಸಿ ಮೈಸೂರಲ್ಲಿ ಪರಿಸರ ಪ್ರೇಮಿಗಳು ಪ್ರತಿಭಟನೆ ನಡೆಸಿದರು.



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವಾಹನಗಳ ರಾತ್ರಿ ಸಂಚಾರ ನಿರ್ಬಂಧ ಮುಂದುವರೆಸುವಂತೆ ಆಗ್ರಹಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪರಿಸರ ಪ್ರೇಮಿಗಳು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಭಾನುವಾರ ಗಂಧದ ಗುಡಿ ಫೌಂಡೇಷನ್ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಪರಿಸರ ಪ್ರೇಮಿಗಳು, ವನ್ಯಜೀವಿ ಪ್ರೇಮಿಗಳು ಪಾಲ್ಗೊಂಡು 'ಬಂಡೀಪುರ ಉಳಿಸಿ, ಪ್ರಾಣಿ ಸಂಕುಲ ರಕ್ಷಿಸಿ' ಎಂದು ಘೋಷಣೆ ಕೂಗಿ, ಅಭಿವೃದ್ಧಿ ಹೆಸರಲ್ಲಿ ಅರಣ್ಯ ನಾಶ ಮಾಡದಂತೆ ಆಗ್ರಹಿಸಿದರು.

ಬಂಡೀಪುರ ಉಳಿಸಿ ಅಭಿಯಾನದಡಿ ಮೈಸೂರಲ್ಲಿ ನಡೆದ ಪ್ರತಿಭಟನೆಯಲ್ಲಿ ಮೈಸೂರು, ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ಪರಿಸರ ಪ್ರೇಮಿಗಳು ಪಾಲ್ಗೊಂಡು, ಅರಣ್ಯ ಪ್ರದೇಶದ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಕೇರಳ ರಾಜ್ಯದ ಒತ್ತಡಕ್ಕೆ ಮಣಿದು ಬಂಡೀಪುರ ಅಭಯಾರಣ್ಯದಲ್ಲಿ ರೈಲ್ವೆ ಮಾರ್ಗ ಸ್ಥಾಪನೆಗೆ ಅವಕಾಶ ನೀಡಬಾರದು. ಈಗಾಗಲೇ ಅರಣ್ಯ ಪ್ರದೇಶದಲ್ಲಿ ಹಾದು ಹೋಗಿರುವ ರಸ್ತೆಗಳಲ್ಲಿ ವಾಹನಕ್ಕೆ ಸಿಲುಕಿ ಅಮೂಲ್ಯವಾದ ಹುಲಿ, ಆನೆ ಸೇರಿದಂತೆ ಇನ್ನಿತರ ಪ್ರಾಣಿಗಳು ಮೃತಪಟ್ಟಿವೆ. ರಾತ್ರಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರೆ ದೊಡ್ಡ ಪ್ರಮಾಣದಲ್ಲಿ ವನ್ಯಜೀವಿಗಳಿಗೆ ಹಾನಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಅರಣ್ಯ ಸಂರಕ್ಷಣೆಗೆ ಇನ್ನಷ್ಟು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಗಂಧದಗುಡಿ ಫೌಂಡೇಷನ್ ಅಧ್ಯಕ್ಷ ಆರ್ಯನ್ ಮಾತನಾಡಿ, ಬಂಡೀಪುರದಲ್ಲಿನ ಮುಖ್ಯ ರಸ್ತೆಯ ಅಗಲೀಕರಣ ಮಾಡುವ ಹಾಗೂ ಅರಣ್ಯ ಪ್ರದೇಶದಲ್ಲಿ ಕೇರಳಕ್ಕೆ ರೈಲು ಸಂಪರ್ಕ ಕಲ್ಪಿಸಲು ಅವಕಾಶ ನೀಡಬಾರದು. ಅರಣ್ಯ ಪ್ರದೇಶದ ಹಿತಾಸಕ್ತಿ ಬಲಿಕೊಟ್ಟು ರಸ್ತೆ ಅಗಲೀಕರಣ ಹಾಗೂ ರೈಲ್ವೆ ಮಾರ್ಗ ಸ್ಥಾಪನೆಗೆ ಅವಕಾಶ ನೀಡಿದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಪರಿಸರ ಪ್ರೇಮಿ ಸಪ್ತ ಗಿರೀಶ್ ಮಾತನಾಡಿ, ಬಂಡೀಪುರ ಅರಣ್ಯದ ಮೂಲಕ ಕೇರಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ರಾತ್ರಿ ವೇಳೆಯೂ ವಾಹನ ಸಂಚಾರಕ್ಕೆ ಅವಕಾಶ ನೀಡುವಂತೆ ಕೇರಳ ಸರ್ಕಾರ ಮೊದಲಿನಿಂದಲೂ ಒತ್ತಾಯಿಸುತ್ತಲೇ ಇದೆ. ಈ ಸಂಬಂಧ ಕರ್ನಾಟಕ ಸರ್ಕಾರದೊಂದಿಗೆ 8–10 ಬಾರಿ ಚರ್ಚೆಯೂ ನಡೆಸಿದೆ. ಆದರೆ ಕರ್ನಾಟಕದ ಮುಖ್ಯಮಂತ್ರಿಗಳು ದಿಟ್ಟತನ ಪ್ರದರ್ಶಿಸಿ ಕೇರಳ ರಾಜ್ಯ ರಾತ್ರಿ ಸಂಚಾರದ ಬೇಡಿಕೆಯನ್ನು ತಿರಸ್ಕರಿಸುತ್ತಲೇ ಬಂದಿದ್ದಾರೆ. ಇದು ಅರಣ್ಯ ಸಂರಕ್ಷಣೆಯ ವಿಚಾರದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಈ ಹಿಂದೆ ಕರ್ನಾಟಕ ಸರ್ಕಾರ ಪ್ರದರ್ಶಿಸಿದ ಗಟ್ಟಿ ನಿಲುವು ಮುಂದುವರೆಸಬೇಕು. ಯಾವುದೇ ಕಾರಣಕ್ಕೂ ರಾತ್ರಿ 9ರಿಂದ ಬೆಳಗ್ಗೆ 6 ಗಂಟೆವರೆಗೆ ವಾಹನ ಸಂಚಾರ ನಿರ್ಬಂಧಿಸಿರುವ ನಿಯಮವನ್ನು ಸಡಿಲಗೊಳಿಸಬಾರದು. ಅಲ್ಲದೆ, ಮೈಸೂರು–ನಂಜನಗೂಡು ಮಾರ್ಗವಾಗಿ ಕೇರಳದ ನೀಲಂಬೂರು ನಡುವೆ ರೈಲು ಮಾರ್ಗ ನಿರ್ಮಿಸಲು ಕಳೆದ ಹಲವು ವರ್ಷಗಳಿಂದ ಪ್ರಯತ್ನ ನಡೆಯುತ್ತಲೇ ಇದೆ. ಈ ಮಾರ್ಗ ಅಳವಡಿಸಿದರೆ ಅರಣ್ಯದಲ್ಲಿ ಪ್ರಾಣಿಗಳ ಸಂಕುಲಕ್ಕೆ ಸಂಚಕಾರ ಒದಗಬರಲಿದೆ ಈ ಹಿಂದೆಯೇ ರೈಲು ಮಾರ್ಗ ಸ್ಥಾಪನೆಗೆ ವಿರೋಧ ವ್ಯಕ್ತವಾದ ಕಾರಣ ಹಳಿ ನಿರ್ಮಾಣ ಯೋಜನೆ ನನೆಗುದಿಗೆ ಬಿದ್ದಿತ್ತು. ಈಗಲೂ ಆ ಯೋಜನೆಗೆ ವಿರೋಧವಿರುವುದರಿಂದ ಮತ್ತೆ ರೈಲು ಹಳಿ ಸ್ಥಾಪನೆಗೆ ಮುಂದಾಗಬಾರದು ಎಂದು ಆಗ್ರಹಿಸಿದರು.

ಈಗಾಗಲೇ ಕರ್ನಾಟಕ ಸೇರಿದಂತೆ ದೇಶದಲ್ಲೇ ಅರಣ್ಯ ಪ್ರದೇಶದ ಕೊರತೆ ಎದ್ದುಕಾಣುತ್ತಿದೆ. ಶೇ.33ರಷ್ಟು ಇರಬೇಕಾದ ಅರಣ್ಯ ರಾಜ್ಯದಲ್ಲಿ ಕೇವಲ ಶೇ.13ರಷ್ಟಿದೆ. ಅವುಗಳಲ್ಲಿ ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯವೂ ಸೇರಿದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಹೆಸರಲ್ಲಿ ಅರಣ್ಯ ಪ್ರದೇಶಕ್ಕೆ ಹಾನಿ ಮಾಡಿದರೆ ಮುಂದಿನ ದಿನಗಳಲ್ಲಿ ದೊಡ್ಡಮಟ್ಟದ ತೊಂದರೆ ಎದುರಾಗುತ್ತದೆ. ಈಗಾಗಲೇ ಮಾನವ ಮತ್ತು ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಲೇ ಇದೆ. ಪ್ರತಿದಿನ ಪತ್ರಿಕೆಗಳಲ್ಲಿ ಚಿರತೆ, ಚಿರತೆ ಮರಿ ಸಿಕ್ಕಿರುವ ಹಾಗೂ ಆನೆ ದಾಳಿ ಸುದ್ದಿ ಪ್ರಕಟವಾಗುತ್ತಲೇ ಇವೆ. ಪರಿಸರ ಪ್ರೇಮಿಗಳು ಅಭಿವೃದ್ಧಿಗೆ ವಿರೋಧಿಸುವುದಿಲ್ಲ. ಆದರೆ, ಅಭಿವೃದ್ಧಿ ಹೆಸರಿನಲ್ಲಿ ಅರಣ್ಯ ಹಾಗೂ ಪರಿಸರಕ್ಕೆ ಹಾನಿಯಾಗಬಾರದು. ಈಗಾಗಲೇ ಅರಣ್ಯ ಪ್ರದೇಶದ ಕೊರತೆ ತೀವ್ರಸ್ವರೂಪ ತಾಳುತ್ತಿದೆ. ಈ ಹಿನ್ನೆಲೆಯಲ್ಲಿ ಅರಣ್ಯ, ವನ್ಯಜೀವಿಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಗಂಧದಗುಡಿ ಫೌಂಡೇಷನ್ ಉಪಾಧ್ಯಕ್ಷ ಮನೋಹರ್‌ಗೌಡ, ಸದಸ್ಯರಾದ ಮೇಘನ್, ರತನ್ ಚಿಕ್ಕು, ಪರಿಸರ ಪ್ರೇಮಿಗಳಾದ ಶೈಲಜೇಶ್, ಭಾನುಮೋಹನ್, ನೀಲಾಂಬಿಕೆ ಸೇರಿದಂತೆ ಇನ್ನಿತರರು ಪಾಲ್ಗೊಂಡು, ಸರ್ಕಾರಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಂರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಎಲ್ಲರೂ ಪತ್ರ ಬರೆದರು.

ಕ್ಯಾನ್ಸರ್ ತಡೆ ಅರಿವು ವಾಕಥಾನ್



ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಆಂಕೊಲಾಜಿ ಸಂಸ್ಥೆಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಾಕಥಾನ್‌ಗೆ ಸಂಸ್ಥೆಯ ಚೇರ್ಮನ್ ಅಜಯ್ ಕುಮಾರ್ ಹಸಿರು ನಿಶಾನೆ ತೋರಿದರು.

ಮೈಸೂರು, ಫೆ.4(ಜಿಎ)–ಚೀನಾದ ನಂತರ ಅತಿ ಹೆಚ್ಚು ಕ್ಯಾನ್ಸರ್ ಪೀಡಿತ ದೇಶ ನಮ್ಮದಾಗಿದೆ ಎಂದು ಭಾರತ್ ಕ್ಯಾನ್ಸರ್ ಆಸ್ಪತ್ರೆ ಚೇರ್ಮನ್ ಡಾ.ಬಿ.ಎಸ್.ಅಜಯ್ ಕುಮಾರ್ ಆತಂಕ ವ್ಯಕ್ತಪಡಿಸಿದರು.

ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಆಂಕೊಲಾಜಿ ಸಂಸ್ಥೆಯಿಂದ ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ನಗರದಲ್ಲಿ ಭಾನುವಾರ ಜಾಗೃತಿ ವಾಕಥಾನ್ ನಡೆಯಿತು. ನೂರಾರು ವಿದ್ಯಾರ್ಥಿಗಳು ಭಾಗವಹಿಸಿ ಕ್ಯಾನ್ಸರ್ ತಡೆ ಬಗ್ಗೆ ಅರಿವು ಮೂಡಿಸುವ ಘೋಷಣೆಗಳ ಕೂಗಿದರು.

ಮೈಸೂರಿನ ಕೋಟೆ ಆಂಜನೇಯ ದೇವಸ್ಥಾನದ ಬಳಿ ಮುಂಜಾನೆಯೇ ಆಗಮಿಸಿದ ವಿವಿಧ ಕಾಲೇಜುಗಳು, ನರ್ಸಿಂಗ್ ತರಬೇತಿ ಕೇಂದ್ರಗಳ ವಿದ್ಯಾರ್ಥಿಗಳು ದೈಹಿಕ ಸದೃಢತೆಯ ವ್ಯಾಯಾಮಗಳನ್ನು ಮಾಡಿದರು. ಈ ವೇಳೆ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆ ಪಡೆದು ಗುಣಮುಖರಾದ ಜಯಶ್ರೀ ತಮ್ಮ ಅನುಭವ ಹಂಚಿಕೊಂಡು, ಕ್ಯಾನ್ಸರ್ ಬಂದವರೂ ಯಾವುದೇ ಆತಂಕಪಡುವ ಅಗತ್ಯವಿಲ್ಲ ಉತ್ತಮ ಚಿಕಿತ್ಸೆಗಳು ಲಭ್ಯವಿದ್ದು ಮಾನಸಿಕವಾಗಿ ಸದೃಢರಾಗಿರುವುದು ಮುಖ್ಯ ಎಂದರು.

ನಂತರ ಆಸ್ಪತ್ರೆಯ ನೂತನ ಲೋಗೊ ಬಿಡುಗಡೆಗೊಳಿಸಿ ಡಾ.ಬಿ.ಎಸ್.ಅಜಯ್ ಕುಮಾರ್ ಮಾತನಾಡಿ, ಕ್ಯಾನ್ಸರ್ ಬರದಂತೆ ತಡೆಯುವುದು ಎಲ್ಲಕ್ಕಿಂತಲೂ ಸೂಕ್ತವಾದ ದಾರಿ. ಇಂದು ಪ್ರತಿ 9 ಜನರಲ್ಲಿ ಒಬ್ಬರಿಗೆ ಕ್ಯಾನ್ಸರ್ ಕಂಡು ಬರುತ್ತಿದ್ದು, ಚೀನಾದ ಬಳಿಕ ಕ್ಯಾನ್ಸರ್ ಅತಿ ಹೆಚ್ಚು ಕ್ಯಾನ್ಸರ್ ಪೀಡಿತ ದೇಶ ನಮ್ಮದಾಗಿದೆ ಹಿಂದೆಲ್ಲಾ 80ರ ಬಳಿಕ ಕಾಣುತ್ತಿದ್ದ ಕಾಯಿಲೆ ಇಂದು 40ರಿಂದ 60ವರ್ಷಕ್ಕೆ ಬರುತ್ತಿದೆ. ಜೀವನ ಶೈಲಿ, ಆಹಾರ ಕ್ರಮ ಬದಲಾಯಿಸದಿದ್ದರೆ ಆಪತ್ತು ತಪ್ಪಿದ್ದಲ್ಲ ಎಂದರು.

ಕ್ಯಾನ್ಸರ್ ಕುರಿತು ಅರಿವು ಮೂಡಿಸಲು ಆಸ್ಪತ್ರೆ ಸಿಬ್ಬಂದಿಯಿಂದ ಕಿರು ನಾಟಕ ಪ್ರದರ್ಶಿಸಲಾಯಿತು. ಕ್ಯಾನ್ಸರ್ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಚಿತ್ರ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಾದ ಲಕ್ಷಶ್ರೀ, ಕೆ.ಆದ್ಯ, ಎಚ್.ಕೆ.ಶಾನ್ವಿಕ್ ಪ್ರಸಾದ್, ಎಂ.ರಾಮ್ಯಾ, ಸಿ.ಸಾಯಿ ಸೋಹನ, ಅರ್ಜಿತ್ ವಿಜಯ್, ಎನ್.ಕಾಶಿಗೌಡ, ಪಿ.ತಪಸ್ವಿ ಕೃಷ್ಟಿವಿ ವಿಜಯ್, ಪಿಹು ಕುಮಾರಿ, ಎಂ.ಆರ್.ತನುಷಾ, ಎಂ.ಮೇಘನ, ಇ.ಕೆ.ಪರುಷ್ಣಿ, ಎಸ್.ತೃಪ್ತಿ, ಡಿ.ಪ್ರತೀಕ್ಷಾ, ಎಂ.ಶರತ್, ಜಿ.ಮೋಹನ್, ಆರ್.ಲಿಖಿತಾ, ಎಂ.ಜೀವಿತಾ ಅವರಿಗೆ ಪ್ರಶಸ್ತಿ ಮತ್ತು ಪ್ರಮಾಣ ಪತ್ರ ನೀಡಲಾಯಿತು.

ತಂಬಾಕು ವಿರೋಧಿ ವೇದಿಕೆ ಸಂಚಾಲಕ ವಸಂತಕುಮಾರ್ ಮೈಸೂರುಮಠ, ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ವೈ.ಎಸ್.ಮಾಧವಿ, ಕಾರ್ಯನಿರ್ವಾಹಕ ಅಧಿಕಾರಿ ಗೌತಮ್, ವೈದ್ಯರಾದ ವಿಜಯ್ ಕುಮಾರ್, ಅಜಯ್, ಕವಿತಾ, ಅಮೋಘ್, ರಕ್ಷಿತ್, ವಿನಯ್, ಅಭಿಲಾಶ್ ಭಾಗವಹಿಸಿದರು.



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದ ಪುರಭವನದ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಡೆಸುತ್ತಿರುವ ಧರಣಿ ಭಾನುವಾರ 90ನೇ ದಿನಕ್ಕೆ ಕಾಲಿಟ್ಟಿದ್ದು, ಈ ಹಿನ್ನೆಲೆಯಲ್ಲಿ ಕೇಂದ್ರದ ಗಮನ ಸೆಳೆಯಲು ಸಾರ್ವಜನಿಕರ ಸಹಿ ಸಂಗ್ರಹ ಮಾಡಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಉಪಾಧ್ಯಕ್ಷ ಸುರೇಶ್ ಗೌಡ, ಮೂಗೂರು ನಂಜುಂಡಸ್ವಾಮಿ, ಹನುಮಂತಯ್ಯ, ಪೈಲ್ವಾನ್ ಟೈಗರ್ ಬಾಲಾಜಿ, ಮಹದೇವಸ್ವಾಮಿ, ಆಟೋ ಮಹದೇವ್, ಮಂಜುಳಾ, ಪುಷ್ಪವತಿ, ಭಾಗ್ಯಮ್ಮ, ವಿಷ್ಣು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಕನ್ನಡ ಸಮ್ಮೇಳನದ ಪ್ರಚಾರ ರಥಕ್ಕೆ ಚಾಲನೆ



ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಪ್ರತಿಮೆ ಮುಂದೆ ಭಾನುವಾರ ಚಾಮರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ರಥಕ್ಕೆ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಚಾಲನೆ ನೀಡಿದರು.


ಮೈಸೂರು, ಫೆ.4(ಬಿಎಲ್‌ಯು)– ಮೈಸೂರಿನ ಚಾಮರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ರಥಕ್ಕೆ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಚಾಲನೆ ನೀಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಪ್ರತಿಮೆ ಮುಂದೆ ಪ್ರಚಾರ ರಥಕ್ಕೆ ಚಾಲನೆ ನೀಡಿದ ಅವರು, ಕ್ಷೇತ್ರ ಮಟ್ಟದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿ ಕನ್ನಡ ಕಂಪು ಹೆಚ್ಚು ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಈ ಕಾರ್ಯಕ್ರಮ ಆಯೋಜಿಸಿದ್ದು, ಪ್ರಚಾರ ರಥ ಇಂದಿನಿಂದ ನಾಲ್ಕು ದಿನಗಳ ಕಾಲ ಮೈಸೂರಿನ ಹಲವು ಬಡಾವಣೆಗಳಲ್ಲಿ ಸಂಚರಿಸಿ ಸಮ್ಮೇಳನದ ಬಗ್ಗೆ ಜನರಿಗೆ ಮಾಹಿತಿ ನೀಡಲಿದೆ.

ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ನಗರಾಧ್ಯಕ್ಷ ಕೆ.ಎಸ್.ಶಿವರಾಮು, ಸಮ್ಮೇಳನದ ಪ್ರಧಾನ ಸಂಚಾಲಕ ಎಂ.ಚಂದ್ರಶೇಖರ್, ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಮೋಹನ್ ಕುಮಾರ್ ಗೌಡ ಸೇರಿದಂತೆ ಇತರರು ಹಾಜರಿದ್ದರು.

ಚಾಮರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವು ಫೆಬ್ರವರಿ 8 ರಂದು ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿದೆ.



ದಾವಣಗೆರೆಯಲ್ಲಿ ನಡೆದ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಮಟ್ಟದ ಸಮ್ಮೇಳನದಲ್ಲಿ ಮೈಸೂರಿನ ಹಿರಿಯ ಛಾಯಾಗ್ರಾಹಕ ಅನುರಾಗ್ ಬಸವರಾಜ್ ಅವರಿಗೆ ಅತ್ಯುತ್ತಮ ಛಾಯಾಗ್ರಾಹಕ ಪ್ರಶಸ್ತಿಯನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಪ್ರದಾನ ಮಾಡಿದರು. ಚಿತ್ರದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರನ್ನು ಕಾಣಬಹುದು.

ಫೆ.8ಕ್ಕೆ ಮೈಸೂರು ಜಿಲ್ಲಾ ಬಿಜೆಪಿ ವಿಶೇಷ ಕಾರ್ಯಕಾರಿಣಿ ಸಭೆ

ಮೈಸೂರು, ಫೆ.4(ಎಂಟಿವೈ)– ಲೋಕಸಭಾ ಚುನಾವಣೆ ಹಾಗೂ ಪಕ್ಷ ಸಂಘಟನೆಯ ಹಿನ್ನೆಲೆಯಲ್ಲಿ ಫೆ.8ರಂದು ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಬಿಜೆಪಿ ಜಿಲ್ಲಾ ಮಟ್ಟದ ವಿಶೇಷ ಕಾರ್ಯಕಾರಿಣಿ ಆಯೋಜಿಸಲಾಗಿದ್ದು, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾರ್ಯಕಾರಿಣಿಗೆ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ತಿಳಿಸಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಮಟ್ಟದಲ್ಲಿ ಪಕ್ಷ ಸಂಘಟನೆಗೆ ವಿವಿಧ ಕಾರ್ಯಕ್ರಮ ರೂಪಿಸಲಾಗಿದ್ದು, ವಿವಿಧ ಹಂತದಲ್ಲಿ ಸಂಘಟನಾ ಕಾರ್ಯ ಆರಂಭಿಸಲಾಗಿದೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಕಾರ್ಯಕರ್ತರು ಹಾಗೂ ಪದಾಧಿಕಾರಿಗಳ ಜವಾಬ್ದಾರಿ ಕುರಿತಂತೆ ಚರ್ಚಿಸಲು ವಿಶೇಷ ಕಾರ್ಯಕಾರಿ ಸಭೆ ಆಯೋಜಿಸಲಾಗಿದೆ. ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಫೆ.8ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ಮೂರು ಹಂತದಲ್ಲಿ ಕಾರ್ಯಕಾರಿಣಿ ನಡೆಯಲಿದೆ. ಉದ್ಘಾಟನೆ, ಪ್ರಶಂಸೆ ಹಾಗೂ ಬಂಡಾಯ ಎಂದು ಮೂರು ವಿಭಾಗದಲ್ಲಿ ಚರ್ಚೆ ನಡೆಯಲಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾರ್ಯಕಾರಿಣಿಯನ್ನು ಉದ್ಘಾಟಿಸಲಿದ್ದಾರೆ. ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ, ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಶಾಸಕ ಟಿ.ಎಸ್. ಶ್ರೀವತ್ಸ ಸೇರಿದಂತೆ ಮಾಜಿ ಶಾಸಕರು, ಮಾಜಿ ಸಂಸದರು, ಮಾಜಿ ಸಚಿವರುಗಳು, ಜಿಲ್ಲಾ ಮಟ್ಟದಿಂದ ರಾಜ್ಯ ಮೋರ್ಚಾಗೆ ಆಯ್ಕೆಯಾಗಿರುವ ಪದಾಧಿಕಾರಿಗಳು, ಕಾರ್ಯಕಾರಿಣಿ ಸದಸ್ಯರುಗಳು ಹಾಗೂ ಜಿಲ್ಲಾ, ತಾಲೂಕು ಪದಾಧಿಕಾರಿಗಳು ಸೇರಿದಂತೆ 730ಕ್ಕೂ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಚಿತ್ರದಲ್ಲಿ ಮಾಧ್ಯಮ ವಕ್ತಾರ ವಸಂತ್‌ಕುಮಾರ್ ಇದ್ದಾರೆ.

ಅಯೋಧ್ಯೆಗೆ 1220 ಮಂದಿ ಪ್ರಯಾಣ

ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಯಿಂದ 1220 ಮಂದಿ ರಾಮ ಭಕ್ತರನ್ನು ಫೆ.17ರಂದು ಮಧ್ಯರಾತ್ರಿ 12ಕ್ಕೆ ಮೈಸೂರಿನಿಂದ ಅಯೋಧ್ಯೆಗೆ ಹೊರಡುವ ವಿಶೇಷ ರೈಲಿನಲ್ಲಿ ಕರೆದೊಯ್ಯಲಾಗುತ್ತಿದೆ. ಬಿಜೆಪಿ ವತಿಯಿಂದ ವಿಶೇಷ ರೈಲು ಬುಕ್ ಮಾಡಲಾಗಿದೆ. ಪ್ರತಿ ಕಾರ್ಯಕರ್ತರು ತಲಾ 3 ಸಾವಿರ ರೂ ನೀಡಿ ಅಯೋಧ್ಯೆಗೆ ತೆರಳುತ್ತಿದ್ದಾರೆ. 5 ದಿನಗಳ ಈ ಪ್ರವಾಸದಲ್ಲಿ ರಾಮಭಕ್ತರಿಗೆ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮ ಚಲೋ ಅಭಿಯಾನ: ಗ್ರಾಮೀಣ ಮಟ್ಟದಲ್ಲಿ ಬಿಜೆಪಿಯನ್ನು ಸಂಘಟಿಸುವ ನಿಟ್ಟಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಫೆ.4ರಿಂದ 11ರವರೆಗೆ ಗ್ರಾಮ ಚಲೋ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮೈಸೂರು ನಗರ ಪ್ರದೇಶ ಹೊರತುಪಡಿಸಿ ಜಿಲ್ಲೆಯಲ್ಲಿ 1770 ಬೂತ್‌ಗಳಿದ್ದು, ಪ್ರತಿಯೊಂದು ಬೂತ್ ಮಟ್ಟದ ಪದಾಧಿಕಾರಿಗಳು ಬೇರೊಂದು ಬೂತ್‌ಗೆ ಹೋಗಿ ಅಲ್ಲಿನ ಜನರೊಂದಿಗೆ ಮಾತನಾಡಿ, ಬಿಜೆಪಿ ಕುರಿತು ಜನರಿಗೆ ಮಾಹಿತಿ ನೀಡಲು ಸೂಚಿಸಲಾಗಿದೆ. ಬೇರೊಂದು ಬೂತ್ ವ್ಯಾಪ್ತಿಯಲ್ಲಿರುವ ಪೇಜ್ ಪ್ರಮುಖರು, ಅಂಚೆ ಮಾಸ್ಟರ್, ಸ್ವಚ್ಛತಾ ಕಾರ್ಯಕರ್ತರು ಸೇರಿದಂತೆ ಪ್ರಮುಖರನ್ನು ಭೇಟಿ ಮಾಡುವಂತೆ ತಿಳಿಸಲಾಗಿದೆ. ಹೊಸ ಮತದಾರರ ಸೇರ್ಪಡೆಗೆ ಮಾಹಿತಿ ನೀಡಲಿದ್ದಾರೆ. ನಮೋ ಆ್ಯಪ್‌ಗಳನ್ನು ಮೊಬೈಲ್‌ನಲ್ಲಿ ಡೌನ್ಲೋಡ್ ಮಾಡಿಸಿ ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ ಎಂದು ತಿಳಿಸಿದರು.

ಗೋಡೆ ಬರಹ ಅಭಿಯಾನ: ಜಿಲ್ಲೆಯಾದ್ಯಂತ ಪ್ರತಿ ಬೂತ್‌ಗಳಲ್ಲಿ 'ಗೋಡೆ ಬರಹ' ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪ್ರತಿಯೊಂದು ಬೂತ್‌ನಲ್ಲಿ ಕನಿಷ್ಠ 5 ಗೋಡೆ ಬರಹ ಬರೆಸುವಂತೆ ತಿಳಿಸಲಾಗಿದೆ. ಬಿಜೆಪಿ ಪರ ಇರುವವರು, ಬಿಜೆಪಿ ಕಾರ್ಯಕರ್ತರ ಮನೆಯ ಗೋಡೆ ಮೇಲೆ ಕಮಲದ ಚಿಹ್ನೆಯೊಂದಿಗೆ 'ಮತ್ತೊಮ್ಮೆ ಮೋದಿ –2024' ಎಂದು ಗೋಡೆ ಬರಹ ಬರೆಸುವ ಅಭಿಯಾನ ನಡೆಯಲಿದೆ ಎಂದರು.

ತಾಲೂಕು ಅಧ್ಯಕ್ಷರ ಆಯ್ಕೆಗೆ ವೀಕ್ಷಕರ ನೇಮಕ: ಶೀಘ್ರದಲ್ಲೇ ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಆಯ್ಕೆಗೆ ಕ್ರಮ ಕೈಗೊಳ್ಳಲಾಗುತ್ತದೆ. ಇದಕ್ಕಾಗಿ ಈಗಾಗಲೇ ವೀಕ್ಷಕರನ್ನು ನೇಮಕ ಮಾಡಲಾಗಿದ್ದು, ಎಲ್ಲಾ ತಾಲೂಕುಗಳಿಗೆ ಭೇಟಿ ನೀಡಿ, ಪಕ್ಷದ ಮುಖಂಡರು, ಕಾರ್ಯಕರ್ತರುಗಳಿಂದ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ. ಬಳಿಕ ನೇಮಕಾತಿಯ ಆದೇಶ ನೀಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಾಧ್ಯಮ ವಕ್ತಾರ ವಸಂತ್ ಕುಮಾರ್ ಇದ್ದರು.

ಮೈಸೂರು ಮಿತ್ರ ಸೋಮವಾರ 5 ಫೆಬ್ರವರಿ 2024

ಮಾಸ್ತಿಗುಡಿಯಲ್ಲಿ ಆಶ್ರಮ ಶಾಲೆ ನಿರ್ಮಾಣಕ್ಕೆ ಭೂಮಿ ಪೂಜೆ

ಪ್ರತಿಯೊಬ್ಬರೂ ಸಹಕರಿಸಿದರೇ ತಾಲೂಕು ಮತ್ತಷ್ಟು ಅಭಿವೃದ್ಧಿ: ಶಾಸಕ ಅನಿಲ್


ಮಾಸ್ತಿಗುಡಿಯಲ್ಲಿ ಆಶ್ರಮ ಶಾಲೆ ಕಾಮಗಾರಿಗೆ ಶಾಸಕ ಅನಿಲ್ ಭೂಮಿ ಪೂಜೆ ನೆರವೇರಿಸಿದರು.

ಹೆಚ್.ಡಿ.ಕೋಟೆ, ಫೆ.4– ಅಭಿವೃದ್ಧಿ ಕಾರ್ಯಗಳಲ್ಲಿ ರಾಜಕೀಯ ಮಾಡುವುದನ್ನು ಬಿಟ್ಟು ಪ್ರತಿಯೊಬ್ಬರೂ ಸಹಕಾರ ನೀಡಿದರೆ ತಾಲೂಕನ್ನು ಮತ್ತಷ್ಟು ಅಭಿವೃದ್ಧಿಗೊಳಿಸಬಹುದು ಎಂದು ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ಅಧ್ಯಕ್ಷ ಹಾಗೂ ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಭೀಮನಹಳ್ಳಿ ಸಮೀಪದ ಮಾಸ್ತಿಗುಡಿ ಗಿರಿಜನ ಪುನರ್ವಸತಿ ಕೇಂದ್ರದಲ್ಲಿ ನಾಲ್ಕೂವರೆ ಕೋಟಿ ರೂ. ವೆಚ್ಚದ ಆಶ್ರಮ ಶಾಲೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕೆಲವರು ಚುನಾವಣೆ ಸಂದರ್ಭ ರಾಜಕೀಯ ನಡೆಸಿದರು. ಅದಕ್ಕೆ ನಾನು ಪ್ರತಿತಂತ್ರ ರೂಪಿಸಿದೆ. ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲು ಇಲ್ಲಿಗೆ ಬಂದ ವೇಳೆ ಕೆಲವರು ಎಂತಹ ರಾಜಕೀಯ ಮಾಡುತ್ತಿದ್ದಾರೆ ಎಂಬುದು ತಿಳಿಯಿತು. ತಾಲೂಕಿನಲ್ಲಿ ಯಾರೂ ಏನೇ ರಾಜಕೀಯ ಮಾಡಿದರೂ ತಾಲೂಕಲ್ಲಿ ನಡೆಯುವ ಅಭಿವೃದ್ಧಿ ಕೆಲಸಗಳನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಅಲ್ಲದೇ ಅವರಿಂದ ಒಂದೇ ಒಂದು ಅಭಿವೃದ್ಧಿ ಕಾರ್ಯ ಮಾಡುವ ಸಾಮರ್ಥ್ಯವಿಲ್ಲ ಎಂದು ಗುಡುಗಿದರು.

ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿದೆ ಎಂದರೆ ಅದು ಕಾಂಗ್ರೆಸ್ ಸರ್ಕಾರ ಹಾಗೂ ನನ್ನ ಪರಿಶ್ರಮದಿಂದ. ಮಾಸ್ತಿಗುಡಿ ಹಾಡಿಯ ಆದಿವಾಸಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗಲೆಂದು ಆಶ್ರಮ ಶಾಲೆ ನಿರ್ಮಾಣ ಮಾಡಲಾಗುತ್ತಿದೆ. ಈ ಶಾಲೆಯಲ್ಲಿ ಸುಮಾರು 165 ಮಕ್ಕಳು ವಿದ್ಯಾಭ್ಯಾಸ ಮಾಡಲಿದ್ದು, ದ್ವಿತೀಯ ಪಿಯುಸಿವರೆಗೆ ವಸತಿ ಸಹಿತ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡಲಾಗುವುದು ಎಂದರು.

ವರ್ಷದೊಳಗೆ ಆಶ್ರಮ ಶಾಲೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ಇದರಿಂದ ಈ ಭಾಗದ ಆದಿವಾಸಿ ಮಕ್ಕಳಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ಪರಿಶಿಷ್ಟ ಪಂಗಡದ ಕಲ್ಯಾಣಾಧಿಕಾರಿ ಮಹೇಶ್, ಗಿರಿಜನ ವಿಸ್ತರಣಾಧಿಕಾರಿ ನಾಗರಾಜು, ಇನ್ಸ್‌ಪೆಕ್ಟರ್ ಶಬೀರ್ ಹುಸೇನ್, ಷಣ್ಮುಕಾರಾಧ್ಯ, ಅಶೋಕ್ ಮುಖಂಡರಾದ ಸತೀಶ್, ರಾಮಣ್ಣ, ವೀರೇಗೌಡ, ಮನು, ವಿಜಯ್ ಕುಮಾರ್, ವಡ್ಡರಗುಡಿ ಚಿಕ್ಕಣ್ಣ, ಪ್ರದೀಪ್, ಚಿಕ್ಕ, ಮಂಜುನಾಥ್, ಗೇಟ್ ಸ್ವಾಮಿ, ನೀಲಪ್ಪ, ಮನೋ ಜಗನ್ನಾಥ್, ನಂಜಯ್ಯ, ಚೆಲುವರಾಜು ಸೇರಿದಂತೆ ಅನೇಕರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಯಥಾಭವ (ಕ)	2 ಪ್ರದರ್ಶನಗಳು
ಅಯಲಾನ್ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬ್ಯಾಚ್ಯುಲರ್ ಪಾರ್ಟಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಡಕ್ಕುಪಟ್ಟಿ ರಾಮಸ್ವಾಮಿ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಫೈಟರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶಂಕರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ನೋ ಶೋ
ಸ್ಕ್ರೀನ್ 2	ಕ್ರಷ್ (ಕ): ಬೆ.10.30ಕ್ಕೆ, ಬ್ಯಾಚುಲರ್ ಪಾರ್ಟಿ (ಕ): ಮ.1.05ಕ್ಕೆ, ಕಾಟೇರ (ಕ): ಮ.3.55ಕ್ಕೆ, ನೆಕ್ಸ್ಟ್ ಗೋಲ್ ವಿನ್ಸ್ (ಇಂ): ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಹನುಮಾನ್ (ಕ): ಬೆ.9.55ಕ್ಕೆ, ಫೈಟರ್ (ಹಿಂ): ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ.9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ. ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥರ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಎಲ್‌ಐಸಿ ಹೊಸ ಪಾಲಿಸಿಗಳ ಬಗ್ಗೆ ಅರಿವು ಮೂಡಿಸಿ

ಜಿಲ್ಲಾ ಮಾರುಕಟ್ಟೆ ವ್ಯವಸ್ಥಾಪಕ ಎಂ.ನಾಗೇಶ್ವರರಾವ್



ನಂಜನಗೂಡಿನಲ್ಲಿ ಜೀವ ವಿಮಾ ನಿಗಮದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

ನಂಜನಗೂಡು, ಫೆ.4– ಜೀವ ವಿಮಾ ನಿಗಮ ದೇಶದ ಜನರಿಗೆ ಆರ್ಥಿಕ ಭದ್ರತೆ ನೀಡುವಲ್ಲಿ ಮುಂಚೂಣಿಯಲ್ಲಿದೆ. ಅಲ್ಲದೇ ನಿಗಮದ ಪಾಲಿಸಿಗಳು ಜನ ಸ್ನೇಹಿಯಾಗಿದ್ದು, ಜೀವ ವಿಮಾ ಪ್ರತಿನಿಧಿಗಳು ಜನರಿಗೆ ಹೊಸ ಪಾಲಿಸಿಗಳ ಬಗ್ಗೆ ಅರಿವು ಮೂಡಿಸಬೇಕು ಎಂದು ಜೀವ ವಿಮಾ ನಿಗಮದ ಜಿಲ್ಲಾ ಮಾರುಕಟ್ಟೆ ವ್ಯವಸ್ಥಾಪಕ ಎಂ.ನಾಗೇಶ್ವರರಾವ್ ತಿಳಿಸಿದರು.

ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ಜೀವ ವಿಮಾ ನಿಗಮದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ನಿಗಮವು ಜೀವನ್ ಉತ್ಸವ್ ಎಂಬ ಹೊಸ ಪಾಲಿಸಿ ಬಿಡುಗಡೆಗೊಳಿಸಿದೆ. ಅಲ್ಲದೇ ನಮ್ಮ ಪೆನ್ಷನ್ ಪ್ಲಾನ್, ಹೆಲ್ತ್ ಇನ್ಶೂರೆನ್ಸ್ ಪಾಲಿಸಿಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಮೂಲಕ ಆರ್ಥಿಕ ಭದ್ರತೆ ನೀಡುವ ಜವಾಬ್ದಾರಿ ವಿಮಾ ಪ್ರತಿನಿಧಿಗಳದ್ದಾಗಿದೆ ಎಂದರು.

ಜೀವ ವಿಮಾ ಪ್ರತಿನಿಧಿಗಳ ಸಂಘಟನೆ ಅಧ್ಯಕ್ಷ ಎನ್.ರವಿ ಮಾತನಾಡಿ, ಪ್ರತಿನಿಧಿಗಳು ಹೆಚ್ಚು ಸಂಘಟಿತರಾದಾಗ ಮಾತ್ರ ನಿಗಮದ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗುತ್ತದೆ. ನಿಗಮದ ಹೊಸ ಪಾಲಿಸಿಗಳ ಬಗ್ಗೆ ನಿಖರ ಜ್ಞಾನ ಹೊಂದಿ, ಜನಸಾಮಾನ್ಯರಿಗೆ ಪಾಲಿಸಿಗಳ ಉಪಯೋಗಗಳ ಬಗ್ಗೆ ಅರಿವು ಮೂಡಿಸುವ ಮೂಲಕ ಜೀವವಿಮಾ ನಿಗಮದೊಂದಿಗೆ ಪ್ರತಿನಿಧಿಗಳು ಹೆಚ್ಚಿನ ವ್ಯವಹಾರ ಮಾಡುವಂತಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಜೀವ ವಿಮಾ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ಸಿಐಟಿಯು ದಕ್ಷಿಣ ವಲಯ ಸಮಿತಿ ಅಧ್ಯಕ್ಷ ಎನ್.ಮಂಜುನಾಥ್, ಹಿರಿಯ ಶಾಖಾಧಿಕಾರಿ ಎಸ್.ರಾಮಸ್ವಾಮಿ, ಉಪ ಶಾಖಾಧಿಕಾರಿ ನರಸಿಂಹನ್, ಸಿದ್ದಲಿಂಗ ಒಡೆಯರ್, ಗುರುಪಾದಸ್ವಾಮಿ, ಪ್ರದೀಪ್, ಅರವಿಂದ್ ಕುಮಾರ್, ಪುಟ್ಟರಾಜು, ಎಂ.ಪಿ.ಪ್ರಕಾಶ್, ಗುರುಪ್ರಸಾದ್, ಪಿ.ಚಂದ್ರ, ಬಸವರಾಜಪ್ಪ, ನಾಗೇಂದ್ರ, ಗುರುಮೂರ್ತಿ, ಮಹದೇವಸ್ವಾಮಿ ಉಪಸ್ಥಿತರಿದ್ದರು.

ವಿವೇಕಾನಂದರ ಹಾದಿಯಲ್ಲಿ ಸಾಗೋಣ: ಡಾ.ಕೆ.ಅನಂತರಾಮು


ವಿವೇಕ ಸಾಂಸ್ಕೃತಿಕ ಸಂಭ್ರಮದಲ್ಲಿ ಮೈಸೂರು ವಿವಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಮಾತನಾಡಿದರು.

ಬನ್ನೂರು, ಫೆ4– ಪ್ರತಿಯೊಬ್ಬ ವಿದ್ಯಾರ್ಥಿಗಳು ವಿವೇಕಾನಂದರ ಹಾದಿಯಲ್ಲಿ ಸಾಗಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ತಿಳಿಸಿದರು.

ಪಟ್ಟಣದ ವಿವೇಕಾನಂದ ಶಿಕ್ಷಣ ಸಂಸ್ಥೆಯಲ್ಲಿ ನಡೆದ ವಿವೇಕ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿವೇಕಾನಂದರು ತಮ್ಮ 38ನೇ ವಯಸ್ಸಿಗೆ ಅಗಾಧ ಜ್ಞಾನ ಸಂಪಾದಿಸಿ ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸಿದರು ಎಂದರು.

ಉತ್ತಮ ವ್ಯಕ್ತಿ ತಲೆಯಲ್ಲಿ ಬುದ್ಧಿ ವಿವೇಕ, ಮುಖದಲ್ಲಿ ಮಂದಹಾಸ, ಹಿತಮಿತ ಸತ್ಯವಚನ, ಕರ್ಮಯೋಗ, ಮಾನವೀಯ ಮೌಲ್ಯ, ಹಿತಮಿತ ಆಹಾರ, ಪಂಚೇಂದ್ರಿಯ ನಿಯಂತ್ರಣದಲ್ಲಿ ಸಾಧನೆ ಮಾಡಿದವನಾಗಿರುತ್ತಾನೆ. ಹೀಗಾಗಿ ನಾವೆಲ್ಲರೂ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಶೋಭಾ, ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಎನ್.ಕೆ.ಲೋಕನಾಥ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಧರ್ಮದರ್ಶಿ ಎಂ.ಪ್ರಕಾಶ್, ರಂಗನಾಥ, ದೇವರಾಜು ಸೇರಿದಂತೆ ಹಲವರಿದ್ದರು.

ಜಿಲ್ಲಾ ಬಿಜೆಪಿ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಯಾಗಿ ಮಹೇಶ್ ನೇಮಕ



ತಿ.ನರಸೀಪುರ, ಫೆ.4– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರು ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಯಾಗಿ ಮಡವಾಡಿ ಮಹೇಶ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಕಳೆದ ಹಲವು ವರ್ಷಗಳಿಂದ ಬಿಜೆಪಿ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಪಕ್ಷ ಸಂಘಟನೆಗೆ ಶ್ರಮಿಸಿದ ಹಿನ್ನೆಲೆಯಲ್ಲಿ ಮಹೇಶ್ ಅವರನ್ನು ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ಸೋಮೇಶ್ವರ ಕಟ್ಟಡ, ಇನ್ನಿತರ ಕಾರ್ಮಿಕರ ಸಂಘಕ್ಕೆ ನಿವೇಶನ

ಶಾಸಕ ಅನಿಲ್ ಚಿಕ್ಕಮಾದು ಭರವಸೆ



ಸರಗೂರಲ್ಲಿ ಸೋಮೇಶ್ವರ ಕಟ್ಟಡ ಮತ್ತು ಇನ್ನಿತರ ಕಾರ್ಮಿಕರ ಸಂಘದ ಕಾರ್ಯಕ್ರಮವನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಸರಗೂರು, ಫೆ.4– ಪಟ್ಟಣದ ಸೋಮೇಶ್ವರ ಕಟ್ಟಡ ಮತ್ತು ಇನ್ನಿತರ ಕಾರ್ಮಿಕರ ಸಂಘದ ಕಚೇರಿಗೆ ನಿವೇಶನ ನೀಡುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ಸೋಮೇಶ್ವರ ಕಟ್ಟಡ ಮತ್ತು ಇನ್ನಿತರ ಕಾರ್ಮಿಕರ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರಿಗೂ ಮನೆ ಕಟ್ಟಿಕೊಡುವ ಕಟ್ಟಡ ಕಾರ್ಮಿಕರಿಗೆ ಸ್ವಂತ ಸೂರು ಇಲ್ಲದಿರುವುದು ವಿಷಾದನೀಯ. ಪ್ರಸ್ತುತ ಅನೇಕ ಕುಟುಂಬಗಳು ಸ್ವಂತ ಮನೆ ಇಲ್ಲದೇ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಕಾರ್ಮಿಕರ ಮನೆ ನಿರ್ಮಾಣಕ್ಕಾಗಿ 5 ಲಕ್ಷ ಸಹಾಯಧನ ನೀಡಲು ಚಿಂತನೆ ನಡೆಸಿದೆ. ಸರಗೂರಲ್ಲಿ ಹಲವು ಇಲಾಖೆಗೆ ನಿವೇಶನದ ಸಮಸ್ಯೆ ಇದ್ದು ನಿವೇಶನ ಕಂಡು ಬಂದರೆ ಶೀಘ್ರ ತಾಯಿ ಮಕ್ಕಳ ಆಸ್ಪತ್ರೆ, ಅಗ್ನಿಶಾಮಕದಳ ಸೇರಿದಂತೆ ಇನ್ನಿತರ ಇಲಾಖೆ ಕಾರ್ಯ ನಿರ್ವಹಿಸಲಿದೆ ಎಂದ ಅವರು, ಕಟ್ಟಡ ಮತ್ತು ಇನ್ನಿತರ ಕಾರ್ಮಿಕರ ಸಂಘದ ಕುಟುಂಬದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗಬೇಕು ಎಂದರು.

ಕಾರ್ಮಿಕ ಇಲಾಖೆ ಅಧಿಕಾರಿ ರಾಜೇಶ್ ಕೆಜಾಧವ್ ಮಾತನಾಡಿ, ಕಟ್ಟಡ ಕಾರ್ಮಿಕರ ಕಾರ್ಡ್ ಮಾಡಿಸುವುದರಿಂದ ಕಾರ್ಮಿಕರಿಗೆ ತುರ್ತು ಚಿಕಿತ್ಸೆಗೆ ಸಹಾಯಧನ, ಅಗತ್ಯವಿರುವ ಕಿಟ್, ಕಾರ್ಮಿಕರ ಮಕ್ಕಳಿಗಾಗಿ ಸ್ಕೂಲ್‌ಕಿಟ್, ವಿದ್ಯಾರ್ಥಿ ವೇತನ, ಮಕ್ಕಳ ಮದುವೆಗೆ ಸಹಾಯಧನ, ಅನಿವಾರ್ಯ ಸಂದರ್ಭ ಸಹಾಯಧನ, ಕೆಲಸದ ವೇಳೆ ಅಪಘಾತ ಸಂಭವಿಸಿದರೇ ಆಸ್ಪತ್ರೆ ಖರ್ಚು, ಕುಟುಂಬ ಸದಸ್ಯರಿಗೂ ಸಹಾಯಧನ ಸಿಗಲಿದ್ದು, ಸಾಲ ಸೌಲಭ್ಯವೂ ದೊರೆಯಲಿದೆ. ಕಾರ್ಮಿಕರು ಇದನ್ನು ಸದುಪಯೋಗಡಿಸಿಕೊಳ್ಳಿ ಎಂದರು.

ಸೋಮೇಶ್ವರ ಕಟ್ಟಡ ಮತ್ತು ಇನ್ನಿತರ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಹೆಸ್.ಹೆಚ್.ರಮೇಶ್ ಮಾತನಾಡಿ, ಸಂಘದ ಸದಸ್ಯರು ಕಡುಬಡತನದ ರೇಖೆಯಲ್ಲಿದ್ದಾರೆ. ಅವರಿಗೆ ನಿವೇಶನ ಹಾಗೂ ಸೂರು ಇಲ್ಲದೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು, ಸರ್ಕಾರ ಈ ಬಡ ಕಾರ್ಮಿಕರ ನೆರವಿಗೆ ಧಾವಿಸಬೇಕು ಎಂದರು.

ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನಗೌಡ ಮಾತನಾಡಿದರು. ಇದೇ ವೇಳೆ ಹಿರಿಯ ಕಾರ್ಮಿಕರಾದ ನಂಜುಂಡಸ್ವಾಮಿ, ನಾಗಣ್ಣ, ವೆಂಕಟರಮಣ, ರಾಜಣ್ಣ, ಮುರುಳಿ, ತಿರುಮಲ, ಹನುಮಂತಶೆಟ್ಟಿ, ನರಸಿಂಹೇಗೌಡ, ಮೀಸೆಚಂದ್ರಚಾರಿ ಸೇರಿದಂತೆ ಕಾರ್ಮಿಕರ ಮಕ್ಕಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭ ತಾಲೂಕು ನಿರೀಕ್ಷಕ ಎಸ್.ಶಶಿಧರ್, ಜಿಪಂ ಮಾಜಿ ಸದಸ್ಯ ಪಿ.ರವಿ, ಚಿಕ್ಕವೀರನಾಯಕ, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಚಿಕ್ಕಣ್ಣ, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ, ಸದಸ್ಯರಾದ ಶ್ರೀನಿವಾಸ್, ಎಸ್.ಎಲ್.ರಾಜಣ್ಣ, ನೂರಾಳಸ್ವಾಮಿ, ವಿರೇಶ್, ಚಲುವ ಕೃಷ್ಣ, ದಿವ್ಯ, ಚೈತ್ರಸ್ವಾಮಿ, ಪುಟ್ಟತಾಯಮ್ಮ, ಸಂಘದ ತಾಲೂಕು ಅಧ್ಯಕ್ಷ ಆರ್.ಮಣಿ, ಗೌರವಾಧ್ಯಕ್ಷ ತಗಡೂರನಾಯಕ, ಉಪಾಧ್ಯಕ್ಷ ಸೋಮನಾಯಕ, ಪ್ರಧಾನ ಕಾರ್ಯದರ್ಶಿ ಹೆಸ್.ಹೆಚ್.ರಮೇಶ್, ಖಜಾಂಚಿ ಸಿ.ನಾಗರಾಜು, ಸಂಘಟನಾ ಕಾರ್ಯದರ್ಶಿ ಆರ್.ರಾಜೇಶ್ ಸೇರಿದಂತೆ ಇನ್ನಿತರರಿದ್ದರು.

ಭುವನಹಳ್ಳಿ ಪಿಎಸಿಎಸ್ ಆಡಳಿತ ಕಾಂಗ್ರೆಸ್ ತೆಕ್ಕೆಗೆ



ಬೆಟ್ಟದಪುರ, ಫೆ.4– ಇಲ್ಲಿಗೆ ಸಮೀಪದ ಭುವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯರು 10 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಸಂಘದ ಆಡಳಿತ ತಮ್ಮ ವಶಕ್ಕೆ ಪಡೆದಿದ್ದಾರೆ.

ಸಂಘದ ಒಟ್ಟು 12 ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 10 ಸ್ಥಾನಗಳಲ್ಲಿ ಕಾಂಗ್ರೆಸ್, 2 ಸ್ಥಾನಗಳಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯರು ಜಯ ಗಳಿಸಿದ್ದಾರೆ. ಚುನಾವಣೆಯಲ್ಲಿ ಸತತ ಮೂರನೇ ಬಾರಿಗೆ ಬೋರಪ್ಪ ಅತ್ಯಧಿಕ ಮತ ಪಡೆದು ಜಯಗಳಿಸಿದ್ದಾರೆ. ಉಳಿದಂತೆ ಸಾಮಾನ್ಯ ಕ್ಷೇತ್ರದಿಂದ ದಿನೇಶ್, ಆನಂದ್, ಲೋಹಿತ್, ನವೀನ, ಹಂಸರಾಜ, ಮಹಿಳಾ ಮೀಸಲು ಕ್ಷೇತ್ರದಿಂದ ಸುಮಿತ್ರ, ಹೇಮಾವತಿ, ಪರಿಶಿಷ್ಟ ಜಾತಿ ಕ್ಷೇತ್ರದಿಂದ ಶಂಕರ್ ಕೊಣಸೂರು, ಪರಿಶಿಷ್ಟ ಪಂಗಡದಿಂದ ಬೋರಪ್ಪ, ಹಿಂದುಳಿದ 'ಎ' ವರ್ಗ ಸೋಮಶೇಖರ್, ಹಿಂದುಳಿದ 'ಬಿ' ವರ್ಗ ಸೋಮೇಗೌಡ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಕೊಣಸೂರು ಕೆ.ಸಿ.ಮಹೇಶ್ ಆಯ್ಕೆಯಾಗಿದ್ದು, ಇವರನ್ನು ತಾಲೂಕಿನ ಕಾಂಗ್ರೆಸ್ ಮುಖಂಡರು ಅಭಿನಂದಿಸಿದ್ದಾರೆ. ಈ ವೇಳೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಲೋಕೇಶ್, ಗ್ರಾಪಂ ಅಧ್ಯಕ್ಷ ಪಿ.ದೇವರಾಜ್, ಮಾಜಿ ಅಧ್ಯಕ್ಷ ಈರೇಗೌಡ, ಈಚೂರು ಸಂಘದ ನಿರ್ದೇಶಕ ನಾಗೇಗೌಡ, ಬಾಬುಜಾನ್ ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ, ಹುಣಸೂರು ಗ್ರಾಮದ ಮಲ್ಲೇಶ್, ಮಹೇಶ್, ಸಂಘದ ಸಿಇಓ ಸತೀಶ್, ನೌಕರ ರಾಜಶೇಖರ್ ಇತರರಿದ್ದರು.

ತಹಶೀಲ್ದಾರ್ ವರ್ಗಾವರ್ಗಿ

ಮೈಸೂರು, ಫೆ.4– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ತಹಶೀಲ್ದಾರ್‌ಗಳ ವರ್ಗಾವರ್ಗಿ ಮಾಡಲಾಗಿದೆ.

ಮೈಸೂರು ಜಿಲ್ಲೆ, ಹುಣಸೂರು ತಹಶೀಲ್ದಾರ್ ಜೆ.ಮಂಜುನಾಥ ಮಡಿಕೇರಿ, ಸರಗೂರು ತಹಶೀಲ್ದಾರ್ ರುಕಿಯ ಬೇಗಂ ಹಾಸನದ ಅರಸೀಕೆರೆ, ಚಾಮರಾಜನಗರ ಜಿಲ್ಲಾಧಿಕಾರಿಗಳ ಕಚೇರಿಯ ಚುನಾವಣಾ ತಹಶೀಲ್ದಾರ್ ಎಸ್.ಯು.ಅಶೋಕ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಗೆ, ಮುಡಾ ತಹಶೀಲ್ದಾರ್ ಬಿ.ಎನ್.ಗಿರೀಶ್ ಶಿವಮೊಗ್ಗ, ಅರಸೀಕೆರೆ ತಹಶೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್ ಪಾವಗಡ, ಹೊಳೆನರಸೀಪುರ ತಹಶೀಲ್ದಾರ್ ಕೆ.ಕೆ.ಕೃಷ್ಣಮೂರ್ತಿ ಸರಗೂರು, ಮಡಿಕೇರಿಯ ಪಿ.ಸಿ.ಪ್ರವೀಣ್ ಕುಮಾರ್ ಹೊಳೆನರಸೀಪುರ, ಹುಣಸೂರು ತಾಲೂಕಿಗೆ ಸಹಾಯಕ ಚುನಾವಣಾಧಿಕಾರಿಗಳ ಕಚೇರಿಯಲ್ಲಿದ್ದ ಕುಮಾರಿ ನಯನ ವರ್ಗಾವಣೆಯಾಗಿದ್ದಾರೆ. ಇವರೊಂದಿಗೆ ರಾಜ್ಯದ ಒಟ್ಟು 67 ತಹಶೀಲ್ದಾರ್‌ಗಳ ವರ್ಗಾವರ್ಗಿ ನಡೆದಿದ್ದು, ಮೂವರಿಗೆ ಸ್ಥಳ ನಿಯೋಜಿಸಲಾಗಿದೆ.


ದಕ್ಷಿಣದ ಪ್ರಯಾಗ ಎಂದೇ ಕರೆಯಲ್ಪಡುವ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿರುವ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಸ್ನಾನಘಟ್ಟದಲ್ಲಿ ಗಂಗಾರತಿ, ದೀಪೋತ್ಸವ ವಿಜೃಂಭಣೆಯಿಂದ ನಡೆಯಿತು.

ವಕೀಲ ಮಹೇಶ್ ನಿಧನ



ತಿ.ನರಸೀಪುರ, ಫೆ.4– ಮೂಲತಃ ತಾಲೂಕಿನ ಕೊತ್ತೇಗಾಲ ಗ್ರಾಮದ, ಪಟ್ಟಣದ ವಿವೇಕಾನಂದ ನಗರದ ನಿವಾಸಿ, ವಕೀಲ ಮಹೇಶ್ (51) ಭಾನುವಾರ ನಿಧನರಾದರು. ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮ ಕೊತ್ತೇಗಾಲದಲ್ಲಿ ನೆರವೇರಲಿದೆ.

ಶಿವರುದ್ರಮ್ಮ



ಸರಗೂರು, ಫೆ.4– ಪಟ್ಟಣದ ಮೂಡಲ ಮಠದ ನಿವಾಸಿ ಲೇ.ಮಹಂತ ದೇವರು ಅವರ ಪತ್ನಿ ಶಿವರುದ್ರಮ್ಮ(97) ಶನಿವಾರ ರಾತ್ರಿ ನಿಧನರಾದರು. ಮೃತರು ಐವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಭಾನುವಾರ ನಡೆಯಿತು.

ಶತಾಯುಷಿ ವೀರೇಂದ್ರಗೌಡ



ಹೆಚ್.ಡಿ.ಕೋಟೆ, ಫೆ.4– ತಾಲೂಕಿನ ಚಿಕ್ಕಕೆರೆಯೂರು ಗ್ರಾಮದ ನಿವಾಸಿ, ಮೈಸೂರು ವಿವಿ ನೌಕರರ ಸಂಘದ ಮಾಜಿ ಅಧ್ಯಕ್ಷರೂ ಆದ ಶತಾಯುಷಿ ವೀರೇಂದ್ರಗೌಡ(101) ಭಾನುವಾರ ನಿಧನರಾದರು.

ಮೃತರು ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜ್ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿರುವ ಪಂಚಮುಖಿ ಗಣಪತಿ ದೇವಸ್ಥಾನ ಸಮೀಪದ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜನಸಮುದಾಯ, ಧರ್ಮಗಳ ನಡುವೆ ಭ್ರಾತೃತ್ವ ಬೆಸೆಯುವ ಭಾರತ ನಿರ್ಮಾಣವಾಗಲಿ

ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ



ಬನ್ನೂರಿನಲ್ಲಿ ನಡೆದ 75ನೇ ಸಂವಿಧಾನ ದಿನಾಚರಣೆಯಲ್ಲಿ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಮಾತನಾಡಿದರು.

ತಿ.ನರಸೀಪುರ, ಫೆ.4– ಸಮುದಾಯಗಳ ಸಾಮರಸ್ಯ ಹಾಳು ಮಾಡುವ ಮೇಲು ಕೀಳೆಂಬ ಭಾವನೆ ದೂರವಾಗಬೇಕು. ರಾಜಕೀಯ ಕಾರಣಗಳಿಗೆ ನಡೆಯುವ ಧರ್ಮಗಳ ನಡುವಿನ ಸಂಘರ್ಷ ನಿಲ್ಲಬೇಕು. ಭವಿಷ್ಯದ ದಿನಗಳಲ್ಲಿ ಜನಸಮುದಾಯ ಮತ್ತು ಧರ್ಮಗಳ ನಡುವೆ ಭ್ರಾತೃತ್ವ ಬೆಸೆಯುವ ಭಾರತ ನಿರ್ಮಾಣವಾಗಲಿ ಎಂದು ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಆಶಯ ವ್ಯಕ್ತಪಡಿಸಿದರು.

ಬನ್ನೂರಿನ ಎಪಿಎಂಸಿ ಉಪ ಮಾರುಕಟ್ಟೆ ಆವರಣದಲ್ಲಿ ಭಾನುವಾರ ಜೈ ಭೀಮ್ ಹೋರಾಟ ಸಮಿತಿಯಿಂದ ನಡೆದ 75ನೇ ಸಂವಿಧಾನ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೂಗಳು ಎನ್ನುವವರಲ್ಲಿ ಜಾತೀಯತೆ ಇದ್ದರೆ, ದಲಿತರಲ್ಲಿ ಮೇಲು ಕೀಳೆಂಬ ಭಾವನೆ ಇದೆ. ಅಲ್ಪಸಂಖ್ಯಾತರು ಇಲ್ಲದ ಭಾರತವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಭಾರತ ಸರ್ವ ಧರ್ಮಿಯರ ರಾಷ್ಟ್ರವಾಗಿ ಇರಬೇಕು ಎಂದರು.

ವಿದ್ಯಾವಂತರಾಗುತ್ತಿರುವ ಜನ ಸಮೂಹದಲ್ಲಿ ಸಾಮಾಜಿಕ ಜಾಗೃತಿ ಇದ್ದರೂ, ಸಾಮಾಜಿಕ ಕಟ್ಟುಪಾಡುಗಳಿಂದ ಕೂಡಿರುವ ಜಾತಿ ಧರ್ಮಗಳ ಸಂಕೋಲೆಯಿಂದ ಹೊರಬರಬೇಕು. ಮುಂದಿನ ಎರಡೂವರೆ ದಶಕದಲ್ಲಿ ಸಂವಿಧಾನದ ಆಶಯಂತೆ ಸಮಾನತೆಯ ರಾಷ್ಟ್ರ ನಿರ್ಮಾಣ ಮಾಡಬೇಕು. ಸ್ವಾತಂತ್ರ್ಯ ನಂತರದ ಭಾರತಕ್ಕೆ ಉತ್ತಮ ಸಂವಿಧಾನ ಬರೆದುಕೊಟ್ಟ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸಮುದಾಯವೊಂದರ ಚೌಕಟ್ಟಿನೊಳಗೆ ಗುರುತಿಸುತ್ತಿರುವುದು ಸರಿಯಲ್ಲ. ಸಮಸ್ತ ಭಾರತೀಯರು ಸ್ಮರಿಸಬೇಕು ಎಂದರು.


ಅತ್ತಹಳ್ಳಿ ಶಾಲಾ ಮಕ್ಕಳು ಸಂವಿಧಾನ ಪೀಠಿಕೆ ಬೋಧಿಸಿದರು. ಮುಖ್ಯ ಭಾಷಣಕಾರ ಡಾ.ದಿಲೀಪ್ ನರಸಯ್ಯ ಅಂಬೇಡ್ಕರ್ ಅವರ ಹೋರಾಟದ ಬದುಕು ಮತ್ತು ದಲಿತರ ಸಾಮಾಜಿಕ ಹಿನ್ನೆಲೆ ತಿಳಿಸಿದರು. ಸಮಿತಿ ಅಧ್ಯಕ್ಷ ರಾಘವೇಂದ್ರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಾನಪದ ಕಲಾವಿದ ಎ.ಎನ್.ರವಿ ಭೀಮಗೀತೆ ಗಾಯನ ನಡೆಸಿಕೊಟ್ಟರು.

ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ದಸಂಸ ತಾಲೂಕು ಸಂಚಾಲಕ ಸೋಮಶೇಖರ್, ಪ್ರಥಮ ದರ್ಜೆ ಗುತ್ತಿಗೆದಾರ ಎ.ಎನ್.ಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಸೈಯ್ಯದ್ ಸುಹೇಲ್, ಇಂಜಿನಿಯರ್ ಜೆ.ಚಂದ್ರಶೇಖರ್, ಜಿಲ್ಲಾ ಕಾಂಗ್ರೆಸ್ ಪ.ಜಾತಿ ವಿಭಾಗದ ಉಪಾಧ್ಯಕ್ಷ ಶಿವಣ್ಣ ಹೆಗ್ಗೂರು ಗ್ರಾಪಂ ಮಾಜಿ ಉಪಾಧ್ಯಕ್ಷ ನಿಂಗಣ್ಣಯ್ಯ, ಸಮಿತಿ ಅಧ್ಯಕ್ಷ ರಾಘವೇಂದ್ರ, ಗೌರವಾಧ್ಯಕ್ಷ ಸಿ.ಕೆ.ಶ್ರೀನಿವಾಸ್, ಉಪಾಧ್ಯಕ್ಷ ಚೆನ್ನಮಲ್ಲು, ಪ್ರಧಾನ ಕಾರ್ಯದರ್ಶಿ ಮಹೇಶ್, ಕಾರ್ಯದರ್ಶಿ ಮಹದೇವ, ಖಜಾಂಚಿ ವೆಂಕಟೇಶ್, ಸಂಘಟನಾ ಕಾರ್ಯದರ್ಶಿ ಕೆಂಪರಾಜು, ನಿರ್ದೇಶಕರಾದ ಜೈ ಮುತ್ತು, ಮಹದೇವ, ಶಿವರಾಮ, ಮಹದೇವ, ಎಸ್.ಸಿದ್ದರಾಜು, ಮನು, ರಾಮು, ಕರಿಪುಟ್ಟಯ್ಯ, ನಾಗೇಂದ್ರ, ಪುಟ್ಟಸ್ವಾಮಿ, ರಾಮಯ್ಯ, ಶಾಂತಕುಮಾರ್, ಡಿ.ಪ್ರಕಾಶ, ಹೆಚ್.ಕೆ.ಲಿಂಗರಾಜು, ಎ.ಎಸ್. ಚಂದ್ರಶೇಖರ್, ಶಿವರಾಜ್, ಮಹದೇವ, ನಾರಾಯಣಸ್ವಾಮಿ, ಅಂದಾನಿ, ಶ್ರೀನಿವಾಸಯ್ಯ, ಲಕ್ಷ್ಮಣ, ಮನುಕುಮಾರ್ ಇನ್ನಿತರರಿದ್ದರು.

> ಸಂವಿಧಾನಿಕ ಹಕ್ಕುಗಳ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದವರು ದಲಿತ ಸಮುದಾಯದತ್ತ ತಿರುಗಿ ನೋಡದ ಪರಿಣಾಮ ಸಮುದಾಯದ ಸಾಮಾಜಿಕ ಅಭಿವೃದ್ಧಿ ಕುಂಠಿತಗೊಂಡಿದೆ. ದಲಿತರು ಅಂಬೇಡ್ಕರ್ ಹೇಳಿದಂತೆ ಸಂಘಟಿತರಾಗಿ ಸಮುದಾಯದ ಅಭಿವೃದ್ಧಿಗೆ ರಾಜಕೀಯ ನಾಯಕರು ಹಾಗೂ ಅಧಿಕಾರಿ ವರ್ಗವನ್ನು ಬಳಸಿಕೊಳ್ಳಬೇಕು. ಬನ್ನೂರು ಹೋಬಳಿಯ ಪ್ರಜ್ಞಾವಂತ ದಲಿತ ಯುವಕರ ತಂಡ ಅಂಬೇಡ್ಕರ್ ಹೆಸರಿನಲ್ಲಿ ಹೋರಾಟ ಸಮಿತಿ ರಚನೆ ಮಾಡಿಕೊಂಡು ಪ್ರಗತಿಪರ ಚಿಂತನೆಗಳನ್ನು ಸಾಕಾರಗೊಳಿಸಲು ಸಂಘಟಿತರಾಗಿರುವುದು ನಿಜಕ್ಕೂ ಹೆಮ್ಮೆಯ ವಿಷಯ.
>
> – **ಡಿ.ಪದ್ಮನಾಭ,** *ಜಿಲ್ಲಾ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘದ ಅಧ್ಯಕ್ಷ.*

ಜನರ ತೆರಿಗೆ ಹಣದಿಂದ ನಿರ್ಮಿಸಿದ ಇ–ಶೌಚಾಲಯಗಳ ದುಸ್ಥಿತಿ

• ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿಗೆ ಇದೊಂದು ಕನ್ನಡಿ
• ರಾಮಕೃಷ್ಣನಗರದ ಇ–ಶೌಚಾಲಯದ ಸಂಪ್ ಬಲಿಗಾಗಿ ಕಾದಿದೆ!



ರಾಮಕೃಷ್ಣನಗರದ ಸಬ್ ರಿಜಿಸ್ಟ್ರಾರ್ ಕಚೇರಿ ಬಳಿ ದುಸ್ಥಿತಿಯಲ್ಲಿರುವ ಇ–ಶೌಚಾಲಯ

ಮೈಸೂರು, ಫೆ.4– ನೈರ್ಮಲ್ಯ ದೃಷ್ಟಿಯಿಂದ ಮೈಸೂರಿನ ವಿವಿಧೆಡೆ ನಿರ್ಮಿಸಿದ್ದ ಇ–ಶೌಚಾಲಯಗಳು ಹಾಳಾಗಿ ವರ್ಷಗಳೇ ಕಳೆದಿದ್ದು, ಇದೀಗ ಅವು ಅನೈತಿಕ ಕೃತ್ಯಗಳ ತಾಣವಾಗುತ್ತಿರುವುದು ವಿಷಾದನೀಯ ಸಂಗತಿ.

ಸ್ವಚ್ಛ ಸರ್ವೇಕ್ಷಣೆಯ ಆರಂಭಿಕ ವರ್ಷಗಳಲ್ಲಿ ಮೈಸೂರು ನಗರದ ಸುಮಾರು 24 ಸ್ಥಳಗಳಲ್ಲಿ ತಲಾ 6.25 ಲಕ್ಷ ರೂ. ವೆಚ್ಚದಲ್ಲಿ ಇ–ಶೌಚಾಲಯಗಳನ್ನು ನಿರ್ಮಿಸಲಾಯಿತು. ಐದು ರೂ. ನಾಣ್ಯ ಹಾಕಿ ಬಳಸಬಹುದಾಗಿದ್ದ ಅತ್ಯಾಧುನಿಕ ಮಾದರಿಯ ಶೌಚಾಲಯಗಳು ಆರಂಭದಲ್ಲಿ ಚೆನ್ನಾಗಿದ್ದವು. ನಗರದ ನೈರ್ಮಲ್ಯಕ್ಕೆ ಇವು ಪೂರಕವಾಗಿವೆ ಎಂಬ ಚಿಂತನೆ ಎಲ್ಲರಲ್ಲಿತ್ತು ಆದರೆ ನಂತರ ಆಗಿದ್ದೆಲ್ಲಾ ತದ್ವಿರುದ್ಧ.

ಭಾರಿ ಉತ್ಸಾಹದಿಂದ ಇ–ಶೌಚಾಲಯಗಳನ್ನು ನಿರ್ಮಾಣ ಮಾಡಿದ ನಗರ ಪಾಲಿಕೆ, ಅವುಗಳ ನಿರ್ವಹಣೆ ಮಾಡುವಲ್ಲಿ ಸಂಪೂರ್ಣ ವಿಫಲವಾಯಿತು. ರಸ್ತೆ ಬದಿಯಲ್ಲಿರುವ ಈ ಶೌಚಾಲಯಗಳನ್ನು ಬಳಸುವವರ ಸಂಖ್ಯೆಯೂ ಕ್ಷೀಣಿಸಿತು. ಹೀಗೆ ವರ್ಷಗಳು ಕಳೆದು ಕೋಟ್ಯಾಂತರ ರೂ. ವೆಚ್ಚದಲ್ಲಿ ನಿರ್ಮಿಸಿದ ಇ–ಶೌಚಾಲಯಗಳು ಹಾಳಾದವು.

ಹೀಗೆಯೇ ರಾಮಕೃಷ್ಣನಗರದ ಉಪ ನೋಂದಣಿ ಕಚೇರಿ ಮುಂಭಾಗ ಇರುವ ಇ–ಶೌಚಾಲಯದ ದುಸ್ಥಿತಿ ಹೇಳತೀರದ್ದಾಗಿದೆ. ಸಬ್ ರಿಜಿಸ್ಟ್ರಾರ್ ಕಚೇರಿ ಮಾತ್ರವಲ್ಲದೆ ಈ ಭಾಗದಲ್ಲಿ ಹಲವು ಸರ್ಕಾರಿ ಕಚೇರಿಗಳಿರುವುದರಿಂದ ಸಾರ್ವಜನಿಕರ ಅನುಕೂಲಕ್ಕಾಗಿ ಇ-ಶೌಚಾಲಯ ನಿರ್ಮಿಸಲಾಗಿದೆ ಆದರೆ ಇದು ಹದಗೆಟ್ಟು ವರ್ಷವೇ ಆಗಿದೆ. ಭದ್ರವಾಗಿದ್ದ ಬಾಗಿಲುಗಳು ಸಡಿಲಗೊಂಡು ಅಲುಗಾಡುತ್ತಿವೆ. ವಿದ್ಯುತ್ ಸಂಪರ್ಕ ಚಾಲ್ತಿಯಲ್ಲಿದ್ದು, ಉಪಕರಣಗಳ ಪೆಟ್ಟಿಗೆ ತೆರೆದಿದ್ದು, ಅಪಾಯಕ್ಕೆ ಆಹ್ವಾನ ನೀಡಿದಂತಿದೆ

ಅಪಾಯ ಕಾದಿದೆ: ಇ–ಶೌಚಾಲಯ ಬಳಕೆಯಲ್ಲಿ ಇಲ್ಲದ ಕಾರಣ ಸಾರ್ವಜನಿಕರು ಇದರ ಬಾಗಿಲಿನ ಬಳಿಯೇ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ನೀರಿನ ಸಂಪ್ ಮುಚ್ಚಳವೇ ಮಾಯವಾಗಿದೆ. ಪಾದಚಾರಿಗಳು ಅಥವಾ ಪ್ರಾಣಿಗಳು ಎಚ್ಚರ ತಪ್ಪಿದರೆ ಈ ಸಂಪ್‌ನೊಳಗೆ ಬೀಳುವ ಸಾಧ್ಯತೆ ಇದೆ. ಈ ಶೌಚಾಲಯಕ್ಕೆ ಹೊಂದಿಕೊಂಡಂತಿರುವ ಉದ್ಯಾನವನದಲ್ಲಿ ಮದ್ಯದ ಬಾಟಲಿಗಳು ಬಿದ್ದಿವೆ. ಇನ್ನು ಇ–ಶೌಚಾಲಯಗಳ ಯಾತ್ಯಾವುದಕ್ಕೆ ಬಳಸಿಕೊಳ್ಳಲಾಗುತ್ತಿದೆಯೋ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಮಹಾನಗರ ಪಾಲಿಕೆ ವಲಯ ಕಚೇರಿ 3ರ ವ್ಯಾಪ್ತಿಯಲ್ಲಿರುವ ಈ ಇ–ಶೌಚಾಲಯದ ಬಗ್ಗೆ ಅಧಿಕಾರಿಗಳು ಕೂಡಲೇ ಗಮನಹರಿಸಬೇಕು. ಸರ್ಕಾರಿ ಕಚೇರಿಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಜನ ಬರುವುದರಿಂದ ಇಲ್ಲಿ ಶೌಚಾಲಯ ಅತ್ಯಗತ್ಯ. ಆದ್ದರಿಂದ ಇ–ಶೌಚಾಲಯವನ್ನು ದುರಸ್ತಿಪಡಿಸಿ ಸೂಕ್ತ ನಿರ್ವಹಣೆ ಮಾಡಬೇಕು. ನಿರ್ಲಕ್ಷಿಸಿದರೆ ಸಮಸ್ಯೆ ಬಿಗಡಾಯಿಸುತ್ತದೆ. ಅದಕ್ಕೆ ಪಾಲಿಕೆ ಅಧಿಕಾರಿಗಳೇ ಉತ್ತರದಾಯಿಗಳಾಗುತ್ತಾರೆ ಎಂದು ಎಚ್ಚರಿಸಿದ್ದಾರೆ.

ಸಮಾಜದಲ್ಲಿ ಶಾಂತಿ ನೆಲೆಸಲು ಸಹಬಾಳ್ವೆ ಮುಖ್ಯ

ಜಮ್ಮು ಮತ್ತು ಕಾಶ್ಮೀರ ವಿವಿ ವಿಶ್ರಾಂತ ಕುಲಪತಿ ಪ್ರೊ. ಜಲೀಸ್ ತರೀನ್


ಅಂಜುಮನ್–ಇ–ಹದೀಕತುಲ್ ಅದಾಬ್ ಮೈಸೂರು ವತಿಯಿಂದ ಕೆಪಿಎಸ್‌ಸಿ ಸದಸ್ಯ ಎಸ್.ಎ.ಮುಸ್ತಫಾ ಹುಸೇನ್, ಮೈಸೂರು ನಗರಪಾಲಿಕೆ ಆಯುಕ್ತ ಅಷಾದ್–ಉರ್–ರೆಹಮಾನ್ ಷರೀಫ್ ಹಾಗೂ ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಪ್ರೊ.ಶಬ್ಬೀರ್ ಮಹಮ್ಮದ್ ಮುಸ್ತಫಾ ಅವರನ್ನು ಸನ್ಮಾನಿಸಲಾಯಿತು

ಮೈಸೂರು, ಫೆ.4(ಎಂಕೆ)– ಅಂಜುಮನ್–ಇ–ಹದೀಕತುಲ್ ಅದಾಬ್ ಮೈಸೂರು ವತಿಯಿಂದ ಕೆಪಿಎಸ್‌ಸಿ ಸದಸ್ಯ ಎಸ್.ಎ.ಮುಸ್ತಫಾ ಹುಸೇನ್, ಮೈಸೂರು ನಗರಪಾಲಿಕೆ ಆಯುಕ್ತ ಅಷಾದ್–ಉರ್–ರೆಹಮಾನ್ ಷರೀಫ್ ಹಾಗೂ ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಪ್ರೊ.ಶಬ್ಬೀರ್ ಮಹಮ್ಮದ್ ಮುಸ್ತಫಾ ಅವರನ್ನು ಸನ್ಮಾನಿಸಲಾಯಿತು.

ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಸೆಂಟ್ ಫಿಲೋಮಿನಾ ಕಾಲೇಜು ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಜಮ್ಮು ಮತ್ತು ಕಾಶ್ಮೀರ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಹಾಗೂ ಯುಜಿಸಿ ಸದಸ್ಯ ಪ್ರೊ. ಜಲೀಸ್ ತರೀನ್ ಮೂವರು ಸಾಧಕರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆ ನೆಲೆಸಬೇಕಾದರೆ ಎಲ್ಲರೊಡನೆ ಸಹಬಾಳ್ವೆ ಅತೀ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮುಸ್ಲಿಂ ಸಮುದಾಯದ ಇತರೆ ಎಲ್ಲಾ ಸಮುದಾಯದೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕು. ಇದರಿಂದ ದೇಶಕ್ಕೆ ಒಳಿತಾಗುವುದಲ್ಲದೆ ದೇಶದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಶಿಕ್ಷಣಕ್ಕೆ ಆದ್ಯತೆ: ಕೋಮು ವಿಚಾರಗಳಿಗೆ ತಲೆಕೊಡಿಸಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ. ಶಿಕ್ಷಣ ಪಡೆಯುವುದು ನಮ್ಮ ಮೊಟ್ಟ ಮೊದಲ ಆಯ್ಕೆಯಾಗಿರಬೇಕು. ಸಮುದಾಯದ ಪ್ರತಿಯೊಬ್ಬರು ಶಿಕ್ಷಣ ಪಡೆದರೆ, ಸಾಕಷ್ಟು ಬದಲಾವಣೆಗಳಾಗುತ್ತವೆ. ವೈಯಕ್ತಿಕ ಅಭಿವೃದ್ಧಿ ಜೊತೆ ಜೊತೆಗೆ ದೇಶದ ಅಭಿವೃದ್ಧಿ ತಾನಾಗಿಯೇ ಆಗುತ್ತದೆ. ಪ್ರಜ್ಞಾವಂತರ ಸಮಾಜ ರೂಪುಗೊಳ್ಳುತ್ತದೆ. ಆದ್ದರಿಂದ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿ ಎಂದು ಕರೆ ನೀಡಿದರು. ಅಂಜುಮನ್–ಇ–ಹದೀಕತುಲ್ ಅದಾಬ್ ಮೈಸೂರು ಸಂಸ್ಥೆ ಮಾರ್ಗದರ್ಶನ ಡಾ.ಜಾವೀದ್ ನಯೀಮ್, ಅಧ್ಯಕ್ಷ ಸಲಾವುದ್ದೀನ್, ಕಾರ್ಯದರ್ಶಿ ತನ್ವೀರ್ ಖಾನ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಅನಾವರಣ


ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ 23ನೇ ವರ್ಷದ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಚಾಲನೆ ನೀಡಿದರು.

ಮೈಸೂರು, ಫೆ.4(ಜಿಎ)–ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಕಲಾಧಾರೆ ಕಲ್ಚರಲ್ ಟ್ರಸ್ಟ್, ಮಾಸ್ಟರ್ ಎನ್ ಬ್ಲಾಸ್ಟರ್ ಡ್ಯಾನ್ಸ್ ಗ್ರೂಪ್ ವತಿಯಿಂದ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ 23ನೇ ವರ್ಷದ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಚಾಲನೆ ನೀಡಿದರು.

ಸ್ಪರ್ಧೆಯಲ್ಲಿ ನೂರಾರು ವಿದ್ಯಾರ್ಥಿಗಳು ಸಬ್ ಜೂನಿಯರ್, ಜೂನಿಯರ್ ಹಾಗೂ ಸೀನಿಯರ್ ವಿಭಾಗದಲ್ಲಿ ಭರತನಾಟ್ಯ, ಜಾನಪದ ನೃತ್ಯ, ಪಾಶ್ಚಿಮಾತ್ಯ ನೃತ್ಯ, ಚಲನ ಚಿತ್ರಗೀತೆಗಳ ಹಾಡುಗಾರಿಕೆ, ಚಿತ್ರಕಲೆ, ಏಕಪಾತ್ರಾಭಿನಯ, ವೇಷಭೂಷಣ ಸ್ಪರ್ಧೆಗಳಲ್ಲಿ ಭಾಗವಹಿಸಿ, ಎಲ್ಲರ ಗಮನ ಸೆಳೆದರು.

ಈ ವೇಳೆ ಕಲಾಧಾರೆ ಕಲ್ಚರಲ್ ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷ ಚಾಮರಾಜ್ ಮಾತನಾಡಿ, ಕಲೆ, ಸಾಹಿತ್ಯ, ಸಂಗೀತ, ನೃತ್ಯ ಮೊದಲಾದವುಗಳಿಗೆ ಹೆಸರಾದ ಮೈಸೂರಿನಲ್ಲಿ ಯುವ ಪ್ರತಿಭೆಗಳಿಗೆ ವೇದಿಕೆ ಒದಗಿಸುವ ಉದ್ದೇಶದಿಂದ ಕಲಾಧಾರೆ ಟ್ರಸ್ಟ್ ಆರಂಭಿಸಲಾಯಿತು. ಎಲ್ಲರ ಸಹಕಾರದಿಂದ ಪ್ರತಿ ವರ್ಷ ಮಕ್ಕಳಿಗೆ ಹತ್ತು ಹಲವು ವೇದಿಕೆಗಳನ್ನು ಒದಗಿಸಿ ಜೊತೆಗೆ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಪ್ರತಿ ವರ್ಷ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿಕೊಂಡು ಬರಲಾಗುತ್ತಿದ್ದು, ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ಉತ್ತಮ ಪ್ರೋತ್ಸಾಹ ದೊರೆಯುತ್ತಿದೆ. ಮತ್ತಷ್ಟು ಪೋಷಕರು ಸಹ ಮಕ್ಕಳ ಅಭಿರುಚಿ ಗಮನಿಸಿ, ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಸ್ಪರ್ಧೆಗಳಿಗೆ ಆಯಾಮ ಅಕಾಡೆಮಿ ಸಂಸ್ಥಾಪಕ ನಿರ್ದೇಶಕಿ ಡಾ.ಎಸ್.ವಿ. ಶಾಂಭವಸ್ವಾಮಿ, ನೃತ್ಯ ನಿರ್ದೇಶಕ ರಾಜು ಮಾಸ್ಟರ್, ಮಹೇಶ್ ಜೈನ್, ಪ್ರಮೋದ್ ಗೌತಮ್, ರಂಗಭೂಮಿ ಕಲಾವಿದ ರಂಗಸ್ವಾಮಿ, ಸಂಗೀತ ನಿರ್ದೇಶಕ ರಾಬರ್ಟ್ ತೀರ್ಪುಗಾರರಾಗಿದ್ದರು. ಸ್ಪರ್ಧೆಯಲ್ಲಿ ವಿಜೇತರಾದ ಕಲಾವಿದರಿಗೆ ಪ್ರಮಾಣ ಪತ್ರ, ಗೌರವ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯದರ್ಶಿ ಎಚ್.ಪಿ. ರವಿಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ವಿಶೇಷ ಭೂಸ್ವಾಧೀನಾಧಿಕಾರಿ ಆರ್. ಮಂಜುನಾಥ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ನೃಪತುಂಗ ಕನ್ನಡ ಶಾಲೆ ಕಾರ್ಯದರ್ಶಿ ಸವಿತಾ ಪ. ಮಲ್ಲೇಶ್, ಉಪಾಧ್ಯಕ್ಷ ಸ.ರ. ಸುದರ್ಶನ, ಶ್ರೀ ಮುರುಗನ್ ಮೆಡಿಕಲ್ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಎನ್. ನರೇಂದ್ರ ಬಾಬು, ಕಡಕೊಳ ವಿಜಯಾ ಶ್ರೀನಿವಾಸ್ ಇಂಡೇನ್ ಮಾಲೀಕ ಡಿ. ಶ್ರೀನಿವಾಸ್, ಕಲಾಧಾರೆ ಕಲ್ಚರಲ್ ಟ್ರಸ್ಟಿನ ಕಾರ್ಯದರ್ಶಿ ಜ್ಯೋತಿ ಚಾಮರಾಜ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಉಮಾಪತಿ, ನಿರ್ದೇಶಕರಾದ ಬಸಂತಕುಮಾರ್, ಬಾಲಮುರಳಿ, ಎನ್. ಚಂದ್ರಶೇಖರ್, ಶ್ರೀದೇವಿ, ಸಿ. ವಿಜಯಲಕ್ಷ್ಮಿ, ರಾಜೇಶ್ವರಿ, ಸುಷ್ಮಾ, ಗಂಗಾ, ಸಂಘಟನಾ ಕಾರ್ಯದರ್ಶಿ ಸಹನಾ ಉಪಸ್ಥಿತರಿದ್ದರು.

ಸ್ವಾತಂತ್ರ್ಯಾ ನಂತರ ಆಡಳಿತ ನಡೆಸಿದ ಪಕ್ಷಗಳು ಪವಿತ್ರ ಸ್ಥಳಗಳ ಮಹತ್ವ ಅರಿತುಕೊಳ್ಳಲಿಲ್ಲ

ಪ್ರಧಾನಿ ನರೇಂದ್ರ ಮೋದಿ ಕಿಡಿ



ಗುವಾಹಟಿ, ಫೆ.4– ಸ್ವಾತಂತ್ರ್ಯ ನಂತರ ಆಡಳಿತ ನಡೆಸಿದ ಸರ್ಕಾರಗಳು ರಾಜಕೀಯ ಲಾಭಕ್ಕಾಗಿ ಪವಿತ್ರ ಸ್ಥಳಗಳು ಮತ್ತು ಪ್ರಾಚೀನ ನಾಗರಿಕತೆಯ ಬಗ್ಗೆ ನಾಚಿಕೆಪಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದವು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪರೋಕ್ಷವಾಗಿ ಕಾಂಗ್ರೆಸ್ ಅನ್ನು ಖಂಡಿಸಿದರು.

ಸರ್ಕಾರಗಳ ಈ ಧೋರಣೆಯನ್ನು ಕಳೆದ 10 ವರ್ಷಗಳಲ್ಲಿ 'ವಿಕಾಸ್' (ಅಭಿವೃದ್ಧಿ) ಮತ್ತು 'ವಿರಾಸತ್' (ಪರಂಪರೆ) ಅನ್ನು ಕೇಂದ್ರೀಕರಿಸಿದ ನೀತಿಗಳ ಮೂಲಕ ಬದಲಿಸಿದ್ದೇವೆ. ಯಾವುದೇ ದೇಶವು ತನ್ನ ಹಿಂದಿನ ಪರಂಪರೆಯನ್ನು ಮರೆತು ಪ್ರಗತಿ ಸಾಧಿಸಲು ಆಗದು ಎಂದು ಅವರು ಹೇಳಿದರು.

ಗುವಾಹಟಿಯಲ್ಲಿ ಸುಮಾರು 11,600 ಕೋಟಿ ವೆಚ್ಚದ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ಬಳಿಕ ಅವರು, ಬೃಹತ್ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಐತಿಹಾಸಿಕ ಮತ್ತು ಆಧ್ಯಾತ್ಮಿಕ ಸ್ಥಳಗಳನ್ನು ಆಧುನಿಕ ಸೌಕರ್ಯಗಳೊಂದಿಗೆ ಸಂಪರ್ಕಿಸುವಂತೆ ಮಾಡುವುದು ಹಾಗೂ ಆ ನೆಲೆಗಳ ಸಂರಕ್ಷಿಸುವುದು ಅತಿ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಅಭಿವೃದ್ಧಿ ಕಾರ್ಯಗಳನ್ನು ವೇಗಗೊಳಿಸುತ್ತದೆ ಎಂದು ಭರವಸೆ ನೀಡಿದರು.

ವಾರಾಣಸಿಯಲ್ಲಿ ಕಾಶಿ ಕಾರಿಡಾರ್ ಅಭಿವೃದ್ಧಿಯ ಬಳಿಕ ಯಾತ್ರಿಗಳ ಸಂಖ್ಯೆ ಹೆಚ್ಚಾಗಿದೆ. ಕಳೆದ ವರ್ಷ 8.50 ಕೋಟಿ ಯಾತ್ರಿಕರು ಕಾಶಿಗೆ, ಐದು ಕೋಟಿಗೂ ಹೆಚ್ಚು ಯಾತ್ರಿಕರು ಉಜ್ಜಯಿನಿಯ ಮಹಾಕಾಲ್ ಲೋಕಕ್ಕೆ ಹಾಗೂ 19 ಲಕ್ಷಕ್ಕೂ ಹೆಚ್ಚು ಭಕ್ತರು ಕೇದಾರಧಾಮಕ್ಕೆ ಭೇಟಿ ನೀಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಅಯೋಧ್ಯೆಯಲ್ಲಿ ರಾಮಮಂದಿರ ತೆರೆದ ಬಳಿಕ, 12 ದಿನಗಳಲ್ಲಿ 24 ಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡಿದ್ದಾರೆ. ಇಲ್ಲಿನ 'ಮಾ ಕಾಮಾಖ್ಯ ದಿವ್ಯ ಲೋಕ ಪರಿಯೋಜನಾ' ಕಾರ್ಯ ಪೂರ್ಣಗೊಂಡ ಬಳಿಕ ಇಲ್ಲಿಗೂ ಭೇಟಿ ನೀಡುವ ಯಾತ್ರಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತದೆ ಎಂದರು.

ಇದರಿಂದ ರಿಕ್ಷಾ ಚಾಲಕರು, ಹೋಟೆಲ್ ಮಾಲೀಕರು, ರಸ್ತೆ ಬದಿಯ ವ್ಯಾಪಾರಿಗಳೂ ಸೇರಿದಂತೆ ಹಲವರಿಗೆ ಆದಾಯ ಹೆಚ್ಚುತ್ತದೆ ಎಂದ ಅವರು, ಈಶಾನ್ಯ ಭಾರತದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ವಿಶೇಷ ಒತ್ತು ನೀಡುತ್ತಿದೆ ಎಂದು ಹೇಳಿದರು.

ಅಸ್ಸಾಂ ಸೇರಿದಂತೆ ಈಶಾನ್ಯ ಭಾರತದ ಭಾಗದಲ್ಲಿ ಹಿಂದೆ ಸಾಮಾನ್ಯವಾಗಿದ್ದ ದಿಗ್ಬಂಧನ, ಬಾಂಬ್ ಸ್ಫೋಟಗಳು ಅಭಿವೃದ್ಧಿಗೆ ಮಾರಕವಾಗಿದ್ದವು. ಇದರಿಂದ ಜನರು ಈಶಾನ್ಯ ಭಾರತದತ್ತ ಬರಲು ಹಿಂಜರಿಯುತ್ತಿದ್ದರು. ಆದರೆ ಕಳೆದ 10 ವರ್ಷಗಳಲ್ಲಿ ದಾಖಲೆ ಪ್ರಮಾಣದ ಪ್ರವಾಸಿಗರು ಈಶಾನ್ಯ ಭಾರತಕ್ಕೆ ಭೇಟಿ ನೀಡಿದ್ದಾರೆ ಎಂದು ಅವರು ವಿವರಿಸಿದರು.

ಬಿಜೆಪಿಯನ್ನು ಮಣಿಸುವುದು ಹೇಗೆ?

ಐಎನ್‌ಡಿಐಎಗೆ ಸರಳ ಸೂತ್ರ ನೀಡಿದ ಪ್ರಶಾಂತ್ ಕಿಶೋರ್



ಹೊಸದಿಲ್ಲಿ: ಬಿಜೆಪಿ ವಿರುದ್ಧ ಒಗ್ಗಟ್ಟಾಗಿ ಹೋರಾಡುವ ಮೂಲಕ ಲೋಕಸಭೆ ಚುನಾವಣೆಯಲ್ಲಿ ಗೆದ್ದು ಬೀಗಲು ಹರಸಾಹಸ ಪಡುತ್ತಿರುವ ವಿರೋಧ ಪಕ್ಷಗಳ ಐಎನ್‌ಡಿಐಎ ಮೈತ್ರಿಕೂಟಕ್ಕೆ 'ರಣತಂತ್ರದ ಸೂತ್ರ'ವೊಂದನ್ನು, ಚುನಾವಣಾ ತಂತ್ರಗಾರ ಪ್ರಶಾಂತ ಕಿಶೋರ್ ನೀಡಿದ್ದಾರೆ. ಸುದ್ದಿವಾಹಿನಿಯೊಂದರ ಸಂದರ್ಶನ ಕಾರ್ಯಕ್ರಮವೊಂದರಲ್ಲಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅವರ ಅವಲೋಕನದ ಪ್ರಕಾರ, ಈಗಾಗಲೇ ದೇಶದ ವಿವಿಧ ರಾಜ್ಯಗಳಲ್ಲಿನ ಒಟ್ಟಾರೆ ಲೋಕಸಭೆ ಕ್ಷೇತ್ರಗಳ ಪೈಕಿ 300 ಕಡೆಗಳಲ್ಲಿ ಪ್ರತಿಪಕ್ಷಗಳು ಒಮ್ಮತದ ಅಭ್ಯರ್ಥಿ ಆಯ್ಕೆ ಮಾಡಲು ರಾಜಕೀಯ ಸ್ಥಿತಿಗತಿ ಅನುಕೂಲಕರವಾಗಿದೆ. ಬಿಜೆಪಿ ವಿರುದ್ಧ ಒಮ್ಮತದ ಅಭ್ಯರ್ಥಿಯು ಐಎನ್‌ಡಿಐಎ ಮೈತ್ರಿಕೂಟದ ಒಂದಿಲ್ಲೊಂದು ಪಕ್ಷದಿಂದ ಸಿದ್ಧವಾಗಿದ್ದಾರೆ. ಆದರೆ, ಅಭ್ಯರ್ಥಿಗೆ ಸ್ವಲ್ಪ ಮಟ್ಟಿಗೆ ಹಿರಿಯ ನಾಯಕರ ಸಲಹೆ ಹಾಗೂ ಬೆಂಬಲ ಬೇಕಿದೆ. ಉಳಿದಂತೆ ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಹಾಗೂ ಛತ್ತೀಸ್‌ಗಢ ಸೇರಿದಂತೆ ಕೆಲವು ರಾಜ್ಯಗಳಲ್ಲಿನ ಒಟ್ಟು 250 ಸೀಟುಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ. ಇನ್ನು 100 ಸೀಟುಗಳಲ್ಲಿ ಟಿಎಂಸಿ, ಸಮಾಜವಾದಿ ಪಕ್ಷ, ಆರ್‌ಜೆಡಿ, ಎನ್‌ಸಿಪಿಯಂತಹ ಪ್ರಾದೇಶಿಕ ಪಕ್ಷಗಳು ಬಿಜೆಪಿ ಜತೆ ನೇರ ಸ್ಪರ್ಧೆ ನಡೆಸುತ್ತವೆ ಎಂದಿದ್ದಾರೆ.

ಪ್ರಾದೇಶಿಕ ಪಕ್ಷಗಳ ಸೂತ್ರವೂ ರೆಡಿ: ಪ್ರಶಾಂತ್ ಕಿಶೋರ್ ಪ್ರಕಾರ, ಟಿಎಂಸಿ, ಸಮಾಜವಾದಿ ಪಕ್ಷ(ಎಸ್‌ಪಿ), ಆರ್‌ಜೆಡಿ, ಎನ್‌ಸಿಪಿ ಪಕ್ಷದ ಅಭ್ಯರ್ಥಿಗಳು ದೇಶದಲ್ಲಿನ ಸುಮಾರು 100 ಕ್ಷೇತ್ರಗಳಲ್ಲಿ ಬಿಜೆಪಿ ವಿರುದ್ಧ ನೇರ ಹಣಾಹಣಿಗೆ ಸನ್ನದ್ಧರಾಗಿದ್ದಾರೆ. ಇವರಿಗೆ ಮೊದಲ ಆದ್ಯತೆಯಾಗಿ ಪಕ್ಷಗಳು ಟಿಕೆಟ್ ನೀಡಬೇಕು. ನಂತರ ಚುನಾವಣೆ ಗೆಲ್ಲಲು ಮತ್ತು ಬಿಜೆಪಿಯನ್ನು ಎದುರಿಸಲು ಅಗತ್ಯವಾದ ಆರ್ಥಿಕಬಲ ಹಾಗೂ ಪ್ರತಿಪಕ್ಷಗಳ ನಾಯಕರ ಒಗ್ಗಟ್ಟಿನ ಪ್ರಚಾರ ಬಲ ಸಿಕ್ಕಲ್ಲಿ ಅಭ್ಯರ್ಥಿಗಳು ಗೆಲ್ಲುವ ಸಾಧ್ಯತೆ ಹೆಚ್ಚು ಎಂದು ಅಭಿಪ್ರಾಯಪಟ್ಟಿದ್ದಾರೆ.

350 ಸೀಟುಗಳನ್ನು ನಿಖರವಾಗಿ ಕೇಂದ್ರೀಕರಿಸಿ ಪ್ರತಿಪಕ್ಷಗಳು ಚುನಾವಣೆಯಲ್ಲಿ 125 ರಿಂದ 150 ಸೀಟುಗಳಲ್ಲಿ ಜಯ ಸಾಧಿಸಿದಲ್ಲಿ, ಬಿಜೆಪಿಯ ಗೆಲುವಿನ ಮಹತ್ವಾಕಾಂಕ್ಷೆಗೆ ಭಾರಿ ಪೆಟ್ಟು ಕೊಡಬಹುದು ಎಂದು ಪ್ರಶಾಂತ್ ಸಲಹೆ ನೀಡಿದ್ದಾರೆ.

ಎನ್‌ಡಿಎ ಭಾರಿ ಮುಂದಿದೆ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ, ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಬೃಹತ್ ಮುನ್ನಡೆ ಹೊಂದಿದೆ. ಆದರೆ ರಾಜಕೀಯದಲ್ಲಿ ಎರಡು ತಿಂಗಳು ಸುದೀರ್ಘ ಸಮಯವಾಗಿದೆ ಈ ಅವಧಿಯಲ್ಲಿ ಬದಲಾವಣೆ ಆಗಲು ಅವಕಾಶವಿದೆ ಎಂದು ಪ್ರಶಾಂತ್ ಕಿಶೋರ್ ಹೇಳಿದ್ದಾರೆ. ಮೋದಿ ಹಾಗೂ ಬಿಜೆಪಿಯ ಬಲದ ಬಗ್ಗೆ ವಿವರಿಸಿರುವ ಅವರು, ನಾಲ್ಕು ಕಾರಣಗಳನ್ನು ನೀಡಿದ್ದಾರೆ. ಹಿಂದುತ್ವ ಸಿದ್ಧಾಂತವು ಮತದಾರರ ನಡುವೆ ಹಂಚಿಹೋಗಿದೆ. ಎರಡನೆಯದು, ಭಾರತವನ್ನು ದೊಡ್ಡ ಶಕ್ತಿಯನ್ನಾಗಿ ಮೋದಿ ಬಿಂಬಿಸಿದ್ದಾರೆ ಮತ್ತು 'ನವ ರಾಷ್ಟ್ರೀಯವಾದ'ಕ್ಕೆ ಅವರು ನೀಡಿರುವ ಒತ್ತು. ಮೂರನೆಯದಾಗಿ, ಜನಧನ, ಎಲ್‌ಪಿಜಿ ಗ್ಯಾಸ್, ಕುಡಿಯುವ ನೀರು, ರೈತರಂತಹ ಫಲಾನುಭವಿಗಳಿಗೆ ನೇರವಾಗಿ ಪೂರೈಸುವ ಮಾದರಿ. ನಾಲ್ಕನೆಯದಾಗಿ ಸಂಘಟನೆಯ ಬಲ ಹಾಗೂ ಆರ್ಥಿಕ ಶಕ್ತಿ ಎಂದು ವಿವರಿಸಿದ್ದಾರೆ.

